ಡಾ|| ಹಳಕಟ್ಟಿ ಸಂಶೋಧನ ಸಂಸ್ಥೆ, ಸೊಲ್ಲಾಪುರ.
ಸಂಸ್ಥಾಪನೆ : ೧೭-೧೦-೧೯೭೪
ಪುರಸ್ಕರ್ತರು ಕಾಡಾದಿ ವೀರಶೈವ ಧರ್ಮಾದಾಯ ನಿಧಿ, ಸೊಲ್ಲಾಪೂರ-೨



# ಶರಣ

ವೀರಶೈವ ಧರ್ಮ ಸಮಾಜ ವಾಙ್ಮಯಗಳಿಗೆ ಮೀಸಲಾದ ತ್ರೈಮಾಸಿಕ ಪತ್ರಿಕೆ

ಸಂಪಾದಕರು :
**ಶರಣ ಬಿ. ಎಸ್. ಕಲ್ಯಾಣಿ**
ಗೌರವ ಸಂಪಾದಕರು :
**ಶರಣ ಎಸ್. ಬಿ. ಹಳಕಟ್ಟಿ**
ಸಹಾಯಕ ಶಿಕ್ಷಣಾಧಿಕಾರಿ (ನಿವೃತ್ತ)
೩೮, ಶುಕ್ರವಾರಪೇಠ, ಧಾರವಾಡ.

ಸೊಲ್ಲಾಪುರ
[ ಸಂಪುಟ ೧೯ ]  ನಾಗರ ಪಂಚಮಿ ೧೯೯೩  [ ಸಂಚಿಕೆ ೪ ]
ಬಸವ ಶಕೆ ೮೮೭.

## ಅನುಕ್ರಮಣಿಕೆ

೧ ಸಂಪಾದಕೀಯ — ಗೌ. ಸಂಪಾದಕರು ೧೪೧
೨ ವಚನ ಸಂಪಾದನೆಯ ಪಿತಾಮಹ ಫ. ಗು. ಹಳಕಟ್ಟಿ — ಪ್ರೊ. ಎಸ್. ಆರ್. ರೋಹಿಡೇಕರ, ಬೆಂಗಳೂರ ೧೪೩
೩ ಧರ್ಮದ ನಿಜಸ್ವರೂಪ — ಶ್ರೀ ಈರಯ್ಯ ನಿಂ. ಕಿಲ್ಲೇದಾರ ೧೪೯
೪ ವಚನ — ಜೆ. ವಿ. ಚನ್ನಯ್ಯ ಹಿರೇಮಠ ೧೫೩
೫ ಶರಣ ಸಿದ್ಧಾಂತ — ವಾಂಶದ ಬಸವಯ್ಯನವರು ಪುಣ್ಯದಕಟ್ಟಿ ೧೫೪
೬ ಶಿವಲಿಂಗವು — ಶ್ರೀ ಮೃತ್ಯುಂಜಯ ವ್ಹಿ. ಅಂಗಡಿ, ಕಡಕೋಳ ೧೫೯
೭ ಷಟ್‌ಸ್ಥಲಧ್ವಜ ಒಂದು ಪರಿಚಯ — ಶರಣ ಮತ್ತೀಹಳ್ಳಿ ರೇವಣಪ್ಪ, ದಾವಣಗೆರೆ ೧೬೬
೮ ವಿಶ್ವಧರ್ಮದ ಧ್ವಜಗೀತೆ — ಕೃಪೆ ಶರಣ ವಿ. ಸಿದ್ಧರಾಮಣ್ಣನವರು ೧೬೮
೯ ವಚನಕಾರ ಅಮ್ಮಿದೇವ — ಎಸ್. ಎಸ್. ಭೂಸರಡ್ಡಿ ಧಾರವಾಡ ೧೭೦
೧೦ ವಚನಗಳು — ಜೆ. ವಿ. ಚನ್ನಯ್ಯ ಹಿರೇಮಠ ೧೭೫
೧೧ ವಚನ ತತ್ವಸಾರ — ಶ್ರೀ ಸಿದ್ಧರಾಮೇಶ್ವರ ಶರಣರು (ಬೆಲ್ದಾಳ) ೧೭೬
೧೨ ಗುರುಧರ್ಮ ನಿರೂಪಣೆ — ಶ್ರೀ ವೀರಪ್ಪ ಬಸಪ್ಪ ಬಿಳಿಅಂಗಡಿ ಹುಬ್ಬಳ್ಳಿ ೧೮೧
ಬಸವ ಜೋಗುಳ — ಶ್ರೀಮತಿ ಶಾಂತಾದೇವಿ ಶಾ. ಹಳಕಟ್ಟಿ ಧಾರವಾಡ ಕವ್ಹರ-೩

### ಚಂದಾದಾರರಿಗೆ ಸೂಚನೆ

ಆಜೀವ ಸದಸ್ಯರನ್ನು ಹೊರತುಪಡಿಸಿ ಮಿಕ್ಕುಳಿದ ಚಂದಾದಾರರು
ತಮ್ಮ ಚಂದಾ ಹಣ ರೂ. ೧೦/-ನ್ನು
ಸೆಕ್ರೆಟರಿ ಡಾ॥ ಹಳಕಟ್ಟಿ ರಿಸರ್ಚ ಇನ್‌ಸ್ಟಿಟ್ಯೂಟ ೫೫೩ ಮಂಗಳವಾರಪೇಠ
(ಪಶ್ಚಿಮ) ಸೊಲ್ಲಾಪೂರ-೨
ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

### ವಾಚಕರಲ್ಲಿ ವಿನಂತಿ

ಇಂದಿನ ಸಂಚಿಕೆಯೊಂದಿಗ ಪತ್ರಿಕೆಯು ತನ್ನ ಹತ್ತೊಂಭತ್ತನೆಯ ವರುಷವನ್ನು ಮುಗಿಸಿ ಇಪ್ಪತ್ತನೆಯ ವರ್ಷಕ್ಕೆ ಕಾಲಿರಿಸುತ್ತಿದೆ. ಈ ಶುಭ ಸಂದರ್ಭದಲ್ಲಿ ಪತ್ರಿಕೆಯ ಬಗ್ಗೆ ವಾಚಕರ ಅಭಿಪ್ರಾಯ ತಿಳಿಯಲು ಆತುರರಾಗಿದ್ದೇವೆ. ಕಾರಣ ವಾಚಕರು ಪ್ರಾಂಜಲ ಮನಸ್ಸಿನಿಂದ ಪತ್ರಿಕೆಯ ಅಭ್ಯುದಯವನ್ನು ಅನುಲಕ್ಷಿಸಿ ಒಳಿತು ಕೆಡಕುಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕೆಳಗಿನ ವಿಳಾಸಕ್ಕೆ ತಿಳಿಸಿ ನಮ್ಮ ಈ ದಾಸೋಹಕ್ಕೆ ನೆರವಾಗಬೇಕಾಗಿ ಕೋರಲಾಗಿದೆ.

**ಎಸ್. ಬಿ. ಹಳಕಟ್ಟಿ** ಗೌ. ಸಂಪಾದಕರು ಶರಣ ತ್ರೈಮಾಸಿಕ ಪತ್ರಿಕೆ
೩೮, ಶುಕ್ರವಾರ ಪೇಠ ಧಾರವಾಡ-೫೮೦೦೦೧

ಅಕ್ಕರ ವಚನ ಪರುಷ ಕಂಡಾ ಕೂಡಸಂಗಮದೇವಾ !

# ಶರಣ



ಡಾ. ಹಳಕಟ್ಟಿ ಸಂಶೋಧನ ಸಂಸ್ಥೆಯ
ತ್ರೈಮಾಸಿಕ ಮುಖಪತ್ರಿಕೆ
ಸ್ಥಾಪನೆ : ೧೭-೧೦-೧೯೭೪

ಪುರಸ್ಕರ್ತರು : ಕಾಡಾದಿ ವೀರಶೈವ ಧರ್ಮಾದಾಯ ನಿಧಿ. ಸೊಲ್ಲಾಪುರ

"ಅರಿದರೆ ಶರಣ: ಮರೆದರೆ ಮಾನವ"

ಸಂಪಾದಕರು : ಶರಣ ಬಿ. ಎಸ್. ಕಲ್ಯಾಣಿ

ಗೌ. ಸಂಪಾದಕರು : ಶರಣ ಎಸ್. ಬಿ. ಹಳಕಟ್ಟಿ

| ಸಂಪುಟ : ೧೯ | ನಾಗರಪಂಚಮಿ ಜುಲೈ ೧೯೯೩ | ಸಂಚಿಕೆ : ೪ |
|---|---|---|

## ಸಂಪಾದಕೀಯ

ನಾಗರಪಂಚಿಮಿ ಮಣ್ಣು ಪೂಜೆಯ ಮುಕ್ತಾಯದ ಒಂದು ಹಂತ. ಸಾಧಕ ಜೀವನದಲ್ಲಿ "ಐದಕ್ಕೆ" ಒಂದು ಮಹತ್ವದ ಸ್ಥಾನವಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ನಾವು ರೂಪುಗೊಂಡಿರುವುದು ಪೃಥ್ವಿ ಅಪ್, ತೇಜ, ವಾಯು, ಆಕಾಶಗಳೆಂಬ ಐದು ತತ್ವಗಳಿಂದ. ಸಾಧನೆಗೈಯುವುದು ಪಂಚ ಆಚಾರಗಳಿಂದ. ಕೊನೆಹೊಂದುವುದು "ಪಂಚತ್ವವನ್ನು" -ಐದು ತತ್ವಗಳಲ್ಲಿ ಒಂದುಗೂಡುವುದು. ಆದಕ್ಕೆಂದೇ ನಮ್ಮ ಪೂರ್ವಜರು ಈ ಐದೂ ತತ್ವಗಳನ್ನು ಉಪಾಸನೆ ಮಾಡುತ್ತಿದ್ದರು. ಜ್ಞಾನ-ವಿಜ್ಞಾನ ಬೆಳೆದಂತೆಲ್ಲ ಇವುಗಳಿಗಿರುವ ಸ್ಥಾನಮಾನ ಕಡಿಮೆಯಾಗುತ್ತ ಹೋಯಿತು. ಇತ್ತೀಚೆಗೆ ಈ ತತ್ವಗಳ ಕಡೆಗೆ ಕಂಡುಬಂದ ಅಲಕ್ಷದ ಮೂಲಕ ಸೃಷ್ಟಿಯ ಸಮತೋಲನವೇ ತಪ್ಪಿ, ನಿತ್ಯ ನೈಮಿತ್ತಿಕ ಕಾರ್ಯಗಳಲ್ಲಿ ವ್ಯತ್ಯಾಸ ಉಂಟಾಗಿ ಜೀವನವೊಂದು ದುರ್ಭರ ಸ್ಥಿತಿಗೆ ಬಂದಿತು. ಆಗ ಪುನಃ ಇವುಗಳ ಬಗ್ಗೆ ಗಮನ ಹರಿಯಿಸುವ ಪ್ರಸಂಗ ಪ್ರಾಪ್ತವಾಯಿತು. ನಮ್ಮ ಅಲಕ್ಷ ಹಾಗೂ ನಿಯಮ ಬಾಹಿರ ಕೃತಿಗಳ ಮೂಲಕ ಅವುಗಳು ಮಾಲಿನ್ಯಗೊಂಡುದರಿಂದ ಶುದ್ಧೀಕರಣದತ್ತ ದೃಷ್ಟಿಹರಿಯಿಸುವ ಪರಿಸ್ಥಿತಿ ಉಂಟಾಗಿದೆ. ಅಷ್ಟೇ ಅಲ್ಲದೆ ಆದಿಸೆಯಲ್ಲಿ ಜನತೆಯ ದೃಷ್ಟಿಯನ್ನು ಹರಿಯಿಸುವ ಕಾರ್ಯದತ್ತ ಸಾಗಬೇಕಾಗಿ ಬಂದುದು ದುರ್ದೈವದ ಸಂಗತಿಯಾಗಿದೆ, ಇದು ಯಾವದೊಂದು ದೇಶಕ್ಕೆ ಸೀಮಿತವಾಗಿರದೆ ಜಾಗತಿಕ ಸಮಸ್ಯೆಯಾಗಿ ಪರಿಣಮಿಸಿ ಎಲ್ಲರನ್ನೂ ಜಾಗ್ರತಗೊಳಿಸಲು ಪರಿಸಮಾಲಿನ್ಯ ನಿವಾರಣಾ ದಿನಾಚರಣೆಯಾಗಿ ರೂಪುಗೊಂಡಿದೆ,

ಈ ಮಾಲಿನ್ಯವು ಕೇವಲ ಪರಿಸರಕ್ಕಷ್ಟೇ ಸೀಮಿತವಾಗಿರದೆ ಮಾನವರ ಮನದಾಳಕ್ಕೂ ಇಳಿದುದು ಒಂದು ಶೋಚನೀಯ ಸಂಗತಿಯಾಗಿದೆ. ಜಗತ್ತಿಗೆ ಆಧ್ಯಾತ್ಮಿಕ ಸಂದೇಶವನ್ನು ನೀಡಿ ಎಲ್ಲರನ್ನೂ ಒಳಿತಿನ ಮಾರ್ಗದತ್ತ ಒಯ್ಯುಬಲ್ಲ ಆಧ್ಯಾತ್ಮ "ಶ್ರೀ"ಯನ್ನು ಹೊಂದಿದ ದೇಶವಿಂದು ಎಲ್ಲ ರಂಗಗಳಲ್ಲಿಯೂ ಅಧೋಗತಿಯತ್ತ ಧಾವಿಸುತ್ತಿರುವುದು ನಮ್ಮನ್ನು ಚಿಂತನೆಗೆ ಒಳಮಾಡಿದೆ. ನಾವಿಂದು ಈ ಸ್ಥಿತಿಯಿಂದ ಕಿತ್ತೆದ್ದು ಒಳಿತಿನೆಡೆಗೆ ಸಾಗುವಂತೆಮಾಡುವ ಯಾವುದಾದರೂ ಶಕ್ತಿಯನ್ನು ಕುರಿತು ವಿಚಾರಿಸಬೇಕಾಗಿದೆ. ಆ ಶಕ್ತಿ ಇಂದು ಶರಣ ಸಾಹಿತ್ಯದಲ್ಲಿ ನಮಗೆ ಲಭ್ಯವಿದೆಯೆಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಬಹಳಷ್ಟು ಜನರು ಶರಣ ಸಾಹಿತ್ಯ ಹಾಗೂ ಅವರ ವಿಚಾರಧಾರೆಯನ್ನು ಒಂದು ಜಾತಿಯ ಒಳಕಟ್ಟಿಗೆ ಒಳಪಡಿಸಿ ಕಾಮಣಿಪೀಡಿತ ಕಣ್ಣಿನಿಂದ ನೋಡುತ್ತಿರುವುದರಿಂದ ಅವರಿಗೆ ಆ ರೀತಿ ಭಾಸವಾಗುತ್ತಿದೆ. ದೇಶ ಸಮಾಜದ ಸುಧಾರಣೆ ಮೂಲತಃ ತನ್ನಿಂದಲೇ ಪ್ರಾರಂಭವಾಗಬೇಕಾಗುತ್ತದೆ. ಅದಕ್ಕೆಂದೇ ಶರಣರು ಮೊದಲು ವ್ಯಕ್ತಿಯನ್ನು ಸಂಸ್ಕಾರಕ್ಕೆ ಒಳಪಡಿಸಿ ಅವನನ್ನು ಸಾಧನೆಗೆ ಹಚ್ಚಲು ಬಾಹ್ಯಕುರುಹನ್ನು (ಇಷ್ಟಲಿಂಗವನ್ನು) ಅಂತರಂಗದ ಅರಿವಿನಿಂದ ಚಿತ್‌ಪ್ರಭಾಚೈತನ್ಯಶಕ್ತಿಯನ್ನು ಹೊರತಗೆದು ಅಂಗೈಯಲ್ಲಿಡುತ್ತಾರೆ. ಬಾಹ್ಯದಿಂದ ಪ್ರಾರಂಭವಾದ ಈ ಆಚರಣೆ ಕ್ರಮೇಣ "ಪ್ರಾಣ" "ಭಾವ"ದ ಮಟ್ಟಕ್ಕಿಳಿದು ಅವನನ್ನು ಸಂಪೂರ್ಣವಾಗಿ ಪರಿವರ್ತನಗೊಳಿಸುತ್ತದೆ. ಈ ಪರಿವರ್ತನದಿಂದ ಅವನು ತನ್ನ ಮೊದಲಿನ ಸ್ಥಿತಿಗೆ ಇಳಿಯಲಾರನು. ಏಕೆಂದರೆ

ಮಣ್ಣಮಡಕೆ ಮಣ್ಣಾಗದು ಕ್ರೀಯೆಳಿದು;
ಬೆಣ್ಣೆಕರಗಿತುಪ್ಪವಾಗಿ, ಮರಳಿ ತುಪ್ಪ ಬೆಣ್ಣೆಯಾಗದು ಕ್ರೀಯಳಿದು,
ಹೊನ್ನು ಕಬ್ಬುನವಾಗದು ಕ್ರೀಯಳಿದು,
ಮುತ್ತು ನೀರಲ್ಲಿ ಹುಟ್ಟಿ ಮತ್ತೆನೀರಾಗದು ಕ್ರೀಯಳಿದು
ಕೂಡಲ ಸಂಗನ ಶರಣನಾಗಿ ಮರಳಿಮಾನನಾಗನು ಕ್ರೀಯಳಿದು;

ಎಂದು ಬಸವಣ್ಣನವರು ನುಡಿದುದು ಸತ್ಯವಾಗಿ ಪರಿಣಮಿಸುತ್ತದೆ. ಇದರ ಪರಿಣಾಮ ತನ್ನ ಹಾಗೂ ಸುತ್ತಲಿನ ಪರಿಸರ ಹಾಗೂ ಸಮಾಜದ ಮೇಲೆ ಬೀರಿ ಎಲ್ಲವನ್ನೂ ಒಳಿತಿನೆಡೆಗೆ ಸಾಗಿಸುತ್ತದೆ. ಇಲ್ಲಿ ಅನುಸರಿಸಲಾಗುವ "ಕಾಯಕ ತತ್ವ" ಹಾಗೂ ''ದಾಸೋಹಂ" ಭಾವ ಅವನನ್ನು ಈ ಮಾಲಿನ್ಯದಿಂದ ಮೇಲಕ್ಕೆತ್ತಿ ಅವನ್ನು ಒಳ್ಳೆಯ ಬದುಕನ್ನು ಬದುಕುವಂತೆ ಮಾಡುತ್ತಿದೆ. ಶರಣ ಧರ್ಮವೊಂದು ಜೀವನ ವಿಧಾನವೇ ಹೊರತು ಅದು ಜಾತಿಯ ಕಟ್ಟುಪಾಡಿಗೆ ಸಿಲುಕಿ ಎಲ್ಲರನ್ನೂ ತೊಂದರೆಗೀಡು ಮಾಡುವ ಶುಷ್ಕ ಆಚರಣಾ ವಿಧಾನವಲ್ಲ. ಆದುದರಿಂದ ನಾವು ನಮ್ಮ ಆಚಾರ-ವಿಚಾರಗಳನ್ನು ಆದಿಸೆಯತ್ತ ಸಾಗುವಂತೆ ಪರಿವರ್ತನೆ ಗೈಯುವುದು ಸೂಕ್ತವಾದುದಲ್ಲವೇ !

—ಗೌ. ಸಂಪಾದಕರು

# ವಚನ ಸಂಪಾದನೆಯ ಪಿತಾಮಹ ಫ. ಗು. ಹಳಕಟ್ಟಿ

ಲೇಖಕರು:- ಪ್ರೊ. ಎಸ್. ಆರ್. ರೋಹಿಡೇಕರ. ಬೆಂಗಳೂರ.

[ವಚನ ಪಿತಾಮಹರ ೧೪೩ನೆಯ ಜನ್ಮ ದಿನೋತ್ಸವದ (೨-೭-೧೮೮೦) ನಿಮಿತ್ತ ಈ ಲೇಖನವನ್ನು ಪ್ರಕಟಿಸಲಾಗಿದೆ. ಪ್ರಸ್ತುತ ಲೇಖನವು ಶ್ರೀಯುತರ ಜೀವನದ ಮೇಲೆ ಹೊಸ ಬೆಳಕನ್ನು ಚೆಲ್ಲಲಿದೆ.]

ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಅದರ ಪರಂಪರೆ ತುಂಬ ಪ್ರಾಚೀನವಾದದ್ದು. ಒಂಬತ್ತರಿಂದ ಹನ್ನೆರಡನೆಯ ಶತಮಾನದ ಅಂತ್ಯದವರೆಗೆ ವಿಶೇಷವಾಗಿ ಜೈನಕವಿಗಳಿಂದ ಚಂಪೂ ಕಾವ್ಯಗಳು ರಚಿತವಾದವು. ಹನ್ನೆರಡನೆಯ ಶತಮಾನದಿಂದ ಹದಿನೈದನೆಯ ಶತಮಾನದವರೆಗಿನ ಅವಧಿಯಲ್ಲಿ ಪ್ರಧಾನವಾಗಿ ವೀರಶೈವ ಕವಿಗಳಿಂದ ವಚನ, ತ್ರಿಪದಿ, ರಗಳೆ, ಷಟ್ಪದಿ ಛಂದೋ ರೂಪಗಳಲ್ಲಿ ಸಾಹಿತ್ಯ ನಿರ್ಮಾಣವಾಗಿದೆ. ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಧಾರ್ಮಿಕ. ಸಾಮಾಜಿಕ ಕ್ರಾಂತಿ ಸಾಹಿತ್ಯ ಕ್ರಾಂತಿಯಾಗಿಯೂ ರೂಪುಗೊಂಡು ವಚನ ಸಾಹಿತ್ಯದ ಶ್ರೀಮಂತ ಪರಂಪರೆಗೆ ನಾಂದಿಯಾಯಿತು. ನಮ್ಮ ರಾಜ್ಯ ಸರ್ಕಾರ ಸಮಗ್ರ ವಚನ ಸಾಹಿತ್ಯದ ೧೫ ಸಂಪುಟಗಳನ್ನು ಡಾ, ಎಂ. ಎಂ. ಕಲಬುರ್ಗಿ ಅವರ ಸಂಪಾದಕತ್ವದಲ್ಲಿ ಇತ್ತೀಚೆಗೆ ಪ್ರಕಟಿಸಿದೆ. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯದ ಬಗೆಗೆ ಸಂಶೋಧನೆ, ಸಂಗ್ರಹಗಳನ್ನು ಆರಂಭಿಸಿದ ಮಹನೀಯರಲ್ಲೊಬ್ಬರಾದ ಫ. ಗು. ಹಳಕಟ್ಟಿ ಅವರ ನೆನಪು ಈಗ ಪ್ರಸ್ತುತ.

ಕರ್ನಾಟಕದ ಮತ್ತು ಹಿಂದಿನ ಮುಂಬೈ ರಾಜ್ಯದ ಹಲವೆಡೆಗಳಲ್ಲಿ ಹುದುಗಿದ್ದು. ಬಹುಶಃ ಕಾಲಕ್ರಮೇಣ ಹಾಳಾಗಿ ಹೋಗಬಹುದಾಗಿದ್ದ ಅಮೂಲ್ಯ ವಚನ ಸಾಹಿತ್ಯ ಹಾಗೂ ಶಿವಭಕ್ತರ ಜೀವನ ಚರಿತ್ರೆಗಳನ್ನು ಶ್ರಮಪಟ್ಟು ಹುಡುಕಿ ತಂದು ಕ್ರೋಢೀಕರಿಸಿ, ತಿದ್ದಿ, ರೂಪಕೊಟ್ಟು ತಮ್ಮ ಹಿತಚಿಂತಕ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಿ ಸ್ವಂತ ಖರ್ಚಿನಲ್ಲಿ ಪ್ರಕಟಿಸಿ ಜನತೆಗೆ ಪರಿಚಯಿಸಿದ ಮಹಾನುಭಾವರು ಅವರು. ಅವರ ಈ ಅಪೂರ್ವ ಸಾಹಿತ್ಯ ಸೇವೆಯನ್ನು ಮನ್ನಿಸಿ. ಕನ್ನಡ ಸಾಹಿತ್ಯ ಪರಿಷತ್ತು ಅನೇಕ ವರ್ಷಗಳ ಹಿಂದೆಯೇ ಅವರನ್ನು ಕನ್ನಡ ಸಮ್ಮೇಲನಾಧ್ಯಕ್ಷರನ್ನಾಗಿ ಮಾಡಿ ಗೌರವಿಸಿದದು ಔಚಿತ್ಯಪೂರ್ಣವಾಗಿದೆ.

ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರು. ಹುಟ್ಟಿದ್ದು (೧೮೮೦ ಜುಲೈ ೨) ಧಾರವಾಡದಲ್ಲಿ. ಹಳಕಟ್ಟಿಯವರು ವೃತ್ತಿಯಿಂದ ವಕೀಲರು ಆದರೆ ಪ್ರವೃತ್ತಿಯಿಂದ ಸಾಹಿತ್ಯ ಪ್ರೇಮಿಗಳು. ಶಿವಭಕ್ತರು ಹಾಗೂ ಸಮಾಜ ಹಿತಚಿಂತಕರು.

ತಮ್ಮದೇ ಆದ ಪ್ರಿಂಟಿಂಗ್ ಪ್ರೆಸ್ಸಿಗೆ 'ಹಿತಚಿಂತಕ ಪ್ರಿಂಟಿಂಗ್ ಪ್ರೆಸ್' ಎಂದು ಹೆಸರಿಟ್ಟಿದದು ಯಥೋಚಿತವಾದುದು. ಅವರ ಸಾಹಿತ್ಯ ಸೇವೆ ಮುಖ್ಯತಃ 'ಶಿವಾನುಭವ' ಪತ್ರಿಕೆಯಿಂದ ಪ್ರಾರಂಭವಾಯಿತೆನ್ನಬಹುದು. ಅವರ ಸಾಹಿತ್ಯ ಕೃಷಿ ಗಂಭೀರವೂ ಸತ್ಯಶೋಧಕವೂ ಆಗಿ ಶಿವಾನುಭವದಲ್ಲಿ ಸಂಶೋಧನಾತ್ಮಕ ವಿಷಯಗಳಿಗೇ ಪ್ರಾಧಾನ್ಯ. ಅದರಲ್ಲಿಯೂ ವೀರಶೈವ ಧರ್ಮ ಜಾಗೃತಿ. ಶಿವಶರಣರ ಜೀವನ ಚರಿತ್ರೆ ಹಾಗೂ ವಚನ ಸಂಗ್ರವೇ ಎದ್ದು ಕಾಣುವ ವಿಚಾರಾತ್ಮಕ ವಸ್ತುಗಳು. ಅವರ ಈ ಸೇವೆಯನ್ನು ಮೆಚ್ಚಿ, ೧-೯-೧೯೨೬ ರಂದು ಹುಬ್ಬಳ್ಳಿಯ ಶರಣಸೇವಕ ವಿರುಪಾಕ್ಷಪ್ಪ ಶಿವಲಿಂಗಪ್ಪ ಪಾವಟೆ ಅವರು ಹಳಕಟ್ಟಿಯವರಿಗೆ ಬರೆದ ಪತ್ರವು ಗಮನಾರ್ಹವಾಗಿದೆ. ಅದರಲ್ಲಿ ಕೆಲವು ವಾಕ್ಯಗಳನ್ನು ಈ ಮುಂದೆ ಉಲ್ಲೇಖಿಸಿದ್ದೇನೆ : ಈಗ ತಾವು ಪ್ರಯಾಸಪಟ್ಟು ನಮ್ಮ ಶರಣ ಸಮುದಾಯದ ಹಿತವಚನಗಳ ಸಾರವನ್ನೂ, ವೀರಶೈವರಲ್ಲಿ ಒಂದಾನೊಂದು ಕಾಲದಲ್ಲಿ ಬಹುಘನತೆಗೇರಿ ರಾಜ್ಯಭಾರ ಮಾಡಿದ ಶೂರ ಸ್ತ್ರೀ ಪುರುಷರ ಚರಿತ್ರೆಗಳನ್ನೂ ಒಳಗೊಂಡಿರುವ ತಮ್ಮ ಸಂಪಾದಕತ್ವದಲ್ಲಿ ಹೊರಡುತ್ತಿರುವ 'ಶಿವಾನುಭವ'ದ ಮೂರು ಸಂಚಿಕೆಗಳು ನನ್ನ ಕೈ ಸೇರಿ ನೋಡಲಾಗಿ ಆನಂದಭರಿತನಾದೆನು.... ಸರ್ವಾಂಗ ಸುಂದರ, ಸರ್ವೋತ್ಕೃಷ್ಟ ಶಿವಾನುಭವವು ಚಿರಾಯುವಾಗಿ ನಡೆಯಬೇಕಾದರೆ ದ್ರವ್ಯ ಸಹಾಯವು ಅವಶ್ಯವಾಗಿ ಬೇಕು.... ಶಿವಲೋಕವನ್ನೈದಿದ ನನ್ನ ತಂದೆ-ತಾಯಿಗಳ ಉಪಕಾರ ಸ್ಮರಣಾರ್ಥಕ್ಕಾಗಿ... ಸನ್ ೧೯೧೮ನೇ ಇಸ್ವಿಯಲ್ಲಿ ಇಂಡಿಯಾ ಪ್ರಾವಿಡೇಂಟ್ ಇನ್‌ಶೂರೆನ್ಸ ಕಂಪನಿ ಕಲಕತ್ತಾ ಇದರಲ್ಲಿ ನಾನು ಉತಾರಿಸಿದ ೯೧೮೦ ನೇ ನಂಬರಿನ ಪಾಲಿಸಿ ಹಕ್ಕನ್ನು ಸಂಪೂರ್ಣವಾಗಿ ತಮ್ಮ 'ಶಿವಾನುಭ' ಕ್ಕೆ ನಿರ್ಮಲ ಮನಸ್ಸಿನಿಂದ ಭಕ್ತಿ ಪೂರ್ವಕವಾಗಿ ಅರ್ಪಣೆ ಮಾಡುತ್ತೇನೆ, ದಯಮಾಡಿ ಸ್ವೀಕರಿಸಬೇಕೆಂದು ಬಹು ನಮ್ರತೆಯಿಂದ ಬೇಡಿಕೊಳ್ಳುತ್ತೇನೆ. ಈ ದಾನಿಯ ಸದ್ವಿನಯವು ತುಂಬ ಮೆಚ್ಚುವಂತಹದಾಗಿದೆ. ವಚನಗಳ ಪ್ರಕಟಣೆಗೆ ಆ ಹಣ ವಿನಿಯೋಗವಾಗಬೇಕೆಂದು ದಾನಿಗಳು ಅಪೇಕ್ಷಿಸಿದ್ದರು. ಮುಂದೆ ಫೆಬ್ರುವರಿಯಲ್ಲಿ ಆ ಪಾಲಿಸಿ ಹಣ ರೂ. ೨೫೦ ಈ ಮೊತ್ತವು ಹಳಕಟ್ಟಿಯವರಿಗೆ ಬಂದಿತು. ಪ್ರಸ್ತಾವನೆಯಲ್ಲಿ ಹಳಕಟ್ಟಿಯವರು ಪಾವಟೆಯವರಿಗೆ ಕೃತಜ್ಞತ ತೋರಿಸಿ ಪಾವಟೆ ಕುಟುಂಬದ ಸಂಕ್ಷಿಪ್ತ ವಿವರನ್ನೂ ನೀಡಿದ್ದಾರೆ.

ಸಾಹಿತ್ಯ ಸಂಶೋಧನೆಯೊಂದಿಗೆ, ಅವರು ಅನೇಕ ಸಾಮಾಜಿಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೇಂದ್ರ ಬಿಂದುವಾಗಿದ್ದರು. ಅವರದು ಅಬ್ಬರದ ಪ್ರಚಾರ ರಹಿತ ಶಾಂತ ಚಿತ್ತದ ಬದುಕು ಎಂಬುದನ್ನು ತೀರ ಹತ್ತಿರದಿಂದ ಹಲವಾರು ವರ್ಷ ನಾನು ನೋಡಿದ್ದೇನೆ. ಉದಾಹರಣೆಗೆ. ರೈತರ ಹಿತಚಿಂತನೆ- ಆಗಿನ ಕಲೆಕ್ಟರ್ ಆಗಿದ್ದ ವ್ಹಿ. ಎಚ್. ನಾಯಕ (ಇವರ ಮಗ ಬಿ. ವಿ. ನಾಯಕ



ಕೆಲಕಾಲ ಮುಂದೆ ಸಂಸತ್ ಸದಸ್ಯರಾಗಿದ್ದರು) ಅವರ ಸಂಯೋಗದೊಂದಿಗೆ ಬರಗಾಲಕ್ಕೆ ಹೆಸರಾದ ವಿಜಾಪೂರ ಜಿಲ್ಹೆಯ ರೈತರ ಉದ್ಧಾರಕ್ಕಾಗಿ Anti famine ಸಂಸ್ಥೆಯನ್ನು ಕಟ್ಟಿ ಬೆಳಿಸುವುದರಲ್ಲಿ ಮುಖ್ಯ ಪಾತ್ರವಹಿಸಿದರು. ಜಿಲ್ಲಾ ಸ್ಕೌಟ್ ಸಂಸ್ಥೆಯಲ್ಲಿಯೂ ಅವರ ಮಹತ್ವದ ಪಾತ್ರವಿತ್ತು. ಹೋಮ್‌ಗಾರ್ಡ್ಸ್ ಸಂಘಟನೆಯಲ್ಲಿ ಅಮೋಘ ಸೇವೆ ಅವರದಾಗಿತ್ತು. ಹಾಗೆಯೇ ಆಗಿನ ಹಿಂದೂ ಮಹಾಸಭೆಯ ವಿಜಾಪುರ ಜಿಲ್ಹಾ ಘಟಕದಲ್ಲಿಯೂ ಅವರು ಶಾಂತಿಯುತ ರಚನಾತ್ಮಕ ಸಲಹೆಗಳನ್ನು ನೀಡುತ್ತಿದ್ದರು. ಬಡ ಮಕ್ಕಳ ಶಿಕ್ಷಣಕ್ಕಾಗಿ ವಿಜಾಪುರ ಜಿಲ್ಲಾ ಲಿಂಗಾಯತ (ಈಗ ಲಿಬರಲ್) ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಲ್ಲೊಬ್ಬರಾಗಿ, ಉಪಾಧ್ಯಕ್ಷರಾಗಿ, ಆರ್ಥಿಕ ಮುಗ್ಗಟ್ಟಿನ ಸ್ಥಿತಿಯಲ್ಲಿ ಅದನ್ನು ಕೈ ಹಿಡಿದು ನಡೆಸಿ ಬೆಳೆಸಿದರು. ಆ ಸ್ಥಿತಿಯಲ್ಲಿದ್ದ ಶ್ರೀ ಸಿದ್ದೇಶ್ವರ ಹೈಸ್ಕೂಲ್‌ನಲ್ಲಿ ಇಂಗ್ಲೀಷ್ ವಿಷಯದ ಶಿಕ್ಷಕನೆಂದು ನನಗೆ ೧೯೩೮ ರಲ್ಲಿ ನೌಕರಿ ಕೊಟ್ಟು. ಶಿಕ್ಷಣ ಕ್ಷೇತ್ರಕ್ಕೆ ಪ್ರಪ್ರಥಮವಾಗಿ ನಾನು ಕಾಲಿಡುವುದಕ್ಕೆ ಫ. ಗು. ಹಳಕಟ್ಟಿಯವರೇ ಕಾರಣೀಭೂತರು. ಅವರ ವೈವಿಧ್ಯಮಯ ಹಾಗೂ ಶಾಂತಿಯುತ ಸಾರ್ವಜನಿಕ ಸೇವೆಯನ್ನು ಮೆಚ್ಚಿ ಆಗಿನ ಮುಂಬಯಿ ಸರಕಾರದವರು ಅವರಿಗೆ 'ರಾವ್ ಸಾಹೇಬ' ಬಿರುದನ್ನು ದಯಪಾಲಿಸಿದರು. ಅಂತೆಯೇ ಅವರು ಸಂಪಾದಿಸಿದ 'ವಚನಗಳ ಪುಸ್ತಕ'ಗಳ ಹೊದಿಕೆ ಪುಟದಲ್ಲಿ ಸಂಪಾದಕರು ಎಂಬದರಡಿ. ರಾ. ಸಾ. ಫ. ಗು. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ವಕೀಲ ಎಂಬ ಬಿರುದು ಸಹಿತ ನಾಮಾಂಕಿತವಿದೆ.

ವಚನ ಗಾಯನದ ಆದ್ಯ ಪ್ರವರ್ತಕ ಉತ್ತೇಜಕರು ೧೯೩೯ ರಲ್ಲಿ ಶ್ರೀ ಸಿದ್ದೇಶ್ವರ ಹೈಸ್ಕೂಲಿನಲ್ಲಿ ಇಂಗೀಷ್ ಶಿಕ್ಷಕ ಹಾಗೂ ಎಸ್. ಎಸ್. ಎಲ್. ಸಿ. ಕ್ಲಾಸಿಗೆ ವರ್ಗ ಶಿಕ್ಷಕನನ್ನಾಗಿ ನೇಮಿಸಿದುದು ಆಚ್ಚರಿಯ ವಿಷಯವಾಗಿತ್ತು ಅದು ನನ್ನ ಶಿಕ್ಷಕ ಜೀವನದ ಪ್ರಥಮ ವರ್ಷ: ನಾನು ಟ್ರೇಂಡೂ ಆಗಿರಲಿಲ್ಲ. ಆಗ ನನಗೆ ನಾಟಕ ಬರೆಯುವ ಆಡುವ. ಆಡಿಸುವ ಗೀಳು ಇತ್ತು. ಸಮಗ್ರ-ಸಂಗೀತಮಯ ನಾಟಕ ನಮ್ಮವು. ಆ ವರ್ಷ ಶಾಲಾಮಕ್ಕಳಿಗಾಗಿ ನಾನು ಬೇಕಾರಿ ಬಿ. ಎ. ಎಂಬ ನಾಟಕ (ಏಕಾಂಕ) ಬರೆದೆ. ಹೆಡ ಮಾಸ್ತರ ಗಣಪತ್‌ರಾವ್ ಪುರಾಣಿಕ. ಶಿಕ್ಷಕರಾದ ಟಿ. ಜಿ. ಹಿರೇಮಠ ಹಾಗೂ ವಿಣಜಗಿ. ಇವರೆಲ್ಲರ ಆಸಕ್ತಿಯಿಂದ ಶಾಲೆಯಲ್ಲಿ ನೃತ್ಯ ನಾಟಕ ಸಂಗೀತಗಳ ಕ್ಲಬ್ಬು ಆಸ್ತಿತ್ವಕ್ಕೆ ಬಂತು ನಮ್ಮ ಸಂಗೀತ ನಾಟಕಗಳ ಆಸಕ್ತಿಯನ್ನು ಮೆಚ್ಚಿ ಫ. ಗು. ಹಳಕಟ್ಟಿಯವರು. ಅದೇ 'ಸಂಸಾರ ನೌಕಾ ನಾಟಕದಲ್ಲಿ ಬಹುಕಾಲ ಸ್ತ್ರೀಪಾತ್ರ ವಹಿಸಿ ನಿವೃತ್ತಿಯಾಗಿ ಒಂದ ಪಾಟೀಲ ಪರಪ್ಪ ಅವರನ್ನು ಸಂಗೀತ ಶಿಕ್ಷಕರಾಗಿ ನೇಮಿಸಿದ್ದಲ್ಲದೆ. ಕಾಲ್‌ಪೇಟಿ. ತಬಲಾಸೆಟ್ಟು ಮತ್ತು ಇತರ ವಾದ್ಯಗಳನ್ನು ಖರೀದಿಸಿಕೊಟ್ಟರು. ಅನುಷಂಗಿಕವಾಗಿ "ವಚನಗಳನ್ನು ಧಾಟಿ ಹಚ್ಚಿ ಹಾಡಲು ಸಾಧ್ಯವೇ ಎಂಬುದನ್ನು ಯತ್ನಿಸಿ ನೋಡಿರಿ ಎಂದು ಉತ್ಸಾ

ಹಿಸಿದರು. ಆಗ ನನಗೆ ನಾಟಕಗಳ ಹಾಡುಗಳನ್ನು ಹಾಡುವ ಗೀಳು ಇತ್ತು. ನಮ್ಮ ತಂದೆ ಶಾಸ್ತ್ರೀಯ ಸಂಗೀತ ಕಲಿಯುತ್ತಿದ್ದರು. ಕೆಲವು ದಾಸರ ಹಾಡುಗಳನ್ನು ಅವರಿಂದ ನಾನು ಕಲಿತಿದ್ದೆ. ಜ್ಯೂ. ಬಿ. ಎ, ನಲ್ಲಿ ಕಲಿಯುವಾಗ ಆರು ತಿಂಗಳು ಕೊಲ್ಲಾಪುರದಲ್ಲಿ ಉಮಾಮಹೇಶ್ವರ ಬುವಾ ಅವರಲ್ಲಿ ಸಂಗೀತಾಭ್ಯಾಸ ಮಾಡಿದ್ದೆ. ಈ ಹಿನ್ನೆಲೆಯಲ್ಲಿ Trial and error ವಿಧಾನದಿಂದ ಬಸವಣ್ಣನವರ ವಚನಗಳಿಗೆ ಧಾಟಿಹಚ್ಚುವ ಗುಂಗಿನಲ್ಲಿ ಒಂದು ವಾರ ಕಳೆದ ಒಂದು ದಿನ ಥಟ್ಟನೆ ಒಂದು ನಾಟಕದ ಹಾಡಿಗೆ ಸರಿಹೋಂದುವಂತೆ ಕಂಡು ಬಂದಿತು. "ಉಷಾ ಸ್ವಯಂವರ" ನಾಟಕದಲ್ಲಿ ಅನಿರುದ್ಧನ ಪಾತ್ರದಲ್ಲಿ ಬಸವರಾಜ ಮನಸೂರ (ಮಲ್ಲಿಕಾರ್ಜುನ ಮನಸೂರರ ಅಣ್ಣ) ಪಟದೀಪ ರಾಗದಲ್ಲಿ ಹಾಡಿದ "ನಯನಾಂಜನಾ ಮನ್ಮನಾ...." ಎಂಬ ಹಾಡು ಅದನ್ನು ಮನೆಯಲ್ಲಿಯೇ ಮನಸ್ಸಿನಲ್ಲಿ ಗುಣಗುಣಿಸುತ್ತ.

ನಯನಂಜನಾ ಮನ್ಮನಾ ಮೋಹನಾ
ದಯವಿಲ್ಲದ ಧರ್ಮವು ಅವುದಯ್ಯಾ
ವಿದ್ಯುತ್ ಸಮಾನಾ ಚಿತ್ತ ಸನ್ನಿಧಾನಾ
ದಯವೇಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ವಿಮಲಾ ವಿಶಾಲಾ, ಮಹಾಮೋಹಲೀಲಾ
ದಯವೇ ಧರ್ಮದ ಮೂಲವಯ್ಯಾ
ಚದುರಾ ಸುಶೀಲಾ ಮಹಾ ಮಂಗಲಾ
ಕೂಡಲ ಸಂಗಮ ನಂತಪ್ಪನೊಲ್ಲನಯ್ಯಾ

ನನ್ನ ಬದುಕಿನಲ್ಲಿ ಅನಿರ್ವಚನೀಯ ಆನಂದದ ಕ್ಷಣ ಅದು. ಅಂದು ಶಾಲೆಗೆ ಹೋಗಿ ಪಾಟೀಲ ಮಾಸ್ತರರಿಗೆ ಪೇಟಿ ಬಾರಿಸುತ್ತ ಹೋಗಲು ಹೇಳಿ. ಕಡೆಗೆ ಅವರಿಂದಲೇ (ಅವರ ಕಂಠ ಮಾಧುರ್ಯ ಸ್ತ್ರೀಪಾತ್ರ ಮಾಡಿ ಮಾಡಿ ಗಟ್ಟಿಯಾಗಿತ್ತು) ಹಾಡಿಸಿ ಆನಂದಿಸಿದೆ. ನಮ್ಮ ಕ್ಲಬ್ಬಿನವರೆಲ್ಲ ಕೇಳಿ ಆನಂದಿಸಿದರು, ಈ ಸಾಧನೆಯನ್ನು ಹಳಕಟ್ಟಿಯವರಿಗೆ ತಿಳಿಸಿದೆವು. ಇನ್ನು ಕೆಲವು ವಚನಗಳಿಗೆ ಧಾಟಿ ಹಚ್ಚಲು ಪ್ರೋತ್ಸಾಹಿಸಿದರು. ಸುಮಾರು ೩೬ ವಚನಗಳಿಗೆ ರಾಗದಾರಿ ಹಚ್ಚಿದ ಸಾಧನೆ ಕ್ಲಬ್ಬಿನದು. ಅದರಲ್ಲಿ ಭೈರವಿ ರಾಗದಲ್ಲಿ "ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ" ಬಹು ಸೊಗಸಾಗಿ ಬಂತು. ಹಳಕಟ್ಟಿಯವರು H. M. V. ಗ್ರಾಮೊಫೋನ್ ರೆಕಾರ್ಡ್ ಕಂಪನಿಗೆ ಬರೆದು ಪರಪ್ಪ ಪಾಟೀಲರಿಂದ ಹಾಡಿಸಿದರು ದಯವಿಲ್ಲದ ಧರ್ಮವಾವುದಯ್ಯಾ.... ಇತ್ಯಾದಿಯಾಗಿ ಚಕೋರಂಗೆ ಚಂದ್ರಮನ.... ಈ ವಚನಗಳೇ ವಚನಗಾಯನದ ಪ್ರಪ್ರಥಮ ರೆಕಾರ್ಡುಗಳೆಂದು ನನ್ನ ನಂಬಿಕೆ ಹಾಗೇ ನಾನು ಬರೆದ ನಾಟಕ ಬೇಕಾರಿ ಬಿ. ಎ. ಇದನ್ನು ಧಾರವಾಡದ ಲಿಂಗಾಯಿತ ಟೌನ್ ಹಾಲ್, ಕರ್ನಾಟಕ ಕಾಲೇಜು, ಮುರುಘರಾಜೇಂದ್ರ ಮಠದಲ್ಲಿ ನನ್ನ ಕ್ಲಬ್ಬು ಅಭಿನಯಿಸಿದ್ದು ಈಗ ಇತಿಹಾಸ.



## ವಚನಗಳ ಪ್ರಥಮ ಮುದ್ರಣದ ಪ್ರತಿಗಳು

ವಚನಗಳಿಗೆ ಧಾಟಿಹಚ್ಚುವ ನನ್ನ ಆಸಕ್ತಿಯನ್ನು ಮೆಚ್ಚಿ. ಹಳಕಟ್ಟಿಯವರು ನನಗೆ ಪ್ರಥಮ ಮುದ್ರಣದ ಕೆಲವು ವಚನಗಳ ಪುಸ್ತಕಗಳನ್ನು ಕೊಟ್ಟರು (೧೯೩೮ ೩೯ ರಲ್ಲಿ) ಅವುಗಳಲ್ಲಿ, 'ಗಣದಾಸಿ ವೀರಣ್ಣನ ವಚನಗಳು (೧೯೨೬). ಘನಲಿಂಗನ ವಚನಗಳು (೧೯೨೭). ಹಡಪದಪ್ಪಣ್ಣನ ವಚನಗಳು' (೯೨೯). ಲಿಂಗಮ್ಮನ ವಚನಗಳು (೧೯೨೯). ಸಕಲೇಶ ಮಾದರಸನ ವಚನಗಳು (೧೯೩೨). ಚನ್ನಬಸವೇಶ್ವರನ ವಚನಗಳು (೧೯೩೨) ಇನ್ನೂ ನನ್ನ ಮೆಚ್ಚಿನ ಪುಸ್ತಕ ಸಂಗ್ರಹಗಳಲ್ಲಿ ಉಳಿದಿವೆ.

'ಶಿವಾನುಭವ' ಪತ್ರಿಕೆ ಮತ್ತು ವಚನಗಳ ಪ್ರಕಟನಾ ಕಾರ್ಯವನ್ನು ಅವರು ಶಿವನ ಸೇವೆಯೆಂದೇ ಬಗೆದಿದ್ದರು ಲಾಭದ ಆಸೆ ಎಳ್ಳಷ್ಟು ಅವರಲ್ಲಿ ಇರಲಿಲ್ಲ. ಅಂತೆಯೇ ಅವುಗಳಿಗೆ ಗಾತ್ರಕ್ಕೆ ಅನುಸಾರವಾಗಿ ತೀರ ಕಡಿಮೆ ಬೆಲೆಯನ್ನೇ ಇಟ್ಟಿದ್ದರು. ಉದಾಹರಣೆಗೆ, 'ಯೋಗಾಚರಣೆ' (೧ ಆಣೆ.) ಲಿಂಗಪೂಜೆಯ ತತ್ವಗಳು (೨ ಆಣೆ). 'ಲಿಂಗಮ್ಮನ ವಚನಗಳು' (೩ ಆಣೆ). ಗಣದಾಸಿ ವೀರಣ್ಣನ ವಚನ (೪ ಆಣೆ) ಸಕಲೇಶ ಮಾದರಸನ ವಚನಗಳು (೩ ಆಣೆ), ಮಹಾದೇವಿಯಕ್ಕನ ವಚನಗಳು (೯ ಆಣೆ), ದೇವರ ದಾಸಿಮಯ್ಯನ ವಚನಗಳು, (೧೦ ಆಣೆ,) ಬಸವೇಶ್ವರ ವಚನಗಳು (ಒಂದೂ ಕಾಲು ರೂಪಾಯಿ).

ಹಿಂದಿನ ಕವಿ ಚರಿತಕಾರರು ಗುರುತಿಸಿದ್ದುದು ಕೇವಲ ೫೦ ವಚನಕಾರರನ್ನು, ಆದರೆ ಹಳಕಟ್ಟಿಯವರು ೨೫೦ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದರು. ಎಂದರೆ ಅವರ ಗ್ರಂಥ ಸಂಪಾದನೆ ಮಹತ್ವ ಯಾರಿಗಾದರೂ ಅರಿವಾದೀತು. ಅವರು ವಚನ ಸಂಗ್ರಹ ಹಾಗೂ ಸಂಪಾದಕತ್ವದಲ್ಲಿ ಸತ್ಯವನ್ನು ಕಠೋರವಾಗಿ ಪಾಲಿಸಿದರು. ಆಧಾರ ರಹಿತವಾದ ಯಾವ ಮಾತನ್ನೂ ಅವರು ಹೇಳುತ್ತಿರಲಿಲ್ಲ. ಉದಾಹರಣೆಗೆ ಸಕಲೇಶ ಮಾದರಸನ ವೃತ್ತಾಂತ ಶೋಧನೆಯಲ್ಲಿ ಬಸವಪುರಾಣ ಹಾಗೂ ಪದ್ಮರಾಜ ಪುರಾಣ ಇವೆರಡನ್ನೂ ಹೋಲಿಸಿ ಸತ್ಯಾಂಶವನ್ನು ಕಂಡುಹಿಡಿದು. ೧೨ನೇ ಶತಮಾನದಲ್ಲಿ ವೀರಶೈವ ಧರ್ಮ ಜಾಗೃತಿಯ ಕಾರ್ಯವು ಬಸವೇಶ್ವರನಕ್ಕಿಂತಲೂ ಪೂರ್ವದಲ್ಲಿಯೇ ಪ್ರಾರಂಭವಾಗಿತ್ತೆಂದು ತೋರುತ್ತದೆ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಹಾಗೆಯೇ ತಾವೇ ಸಂಪಾದಿಸಿದ ಸಕಲೇಶ ಮಾದರಸನ ವಚನಗಳಲ್ಲಿ ೮೪ರಿಂದ ಮುಂದಿನವುಗಳಿಗೆ ಬಹಳ ಅಶುದ್ಧ ವಚನಗಳು ಎಂದೇ ಶೀರ್ಷಿಕೆ ಕೊಟ್ಟಿದ್ದಲ್ಲದೇ, ಪ್ರಸ್ತಾವನೆಯ ಕೊನೆಯ ಪ್ಯಾರಾದಲ್ಲಿ "ನಾವು ಈಗ ಪ್ರಸಿದ್ಧಿಸಿದ ವಚನಗಳಲ್ಲಿ ಅನೇಕವು ಬಹು ಅಶುದ್ಧವಿವೆ, ಅವುಗಳ ಶುದ್ಧ ಪಾಠಗಳು ನಮಗೆ ದೊರಕದ್ದರಿಂದ ಅವುಗಳನ್ನು ಇದ್ದಕಿದ್ದ ಹಾಗೆಯೇ ಪ್ರಸಿದ್ಧಿಸಿದ್ದೇವೆ ಎಂದು ಪ್ರಾಂಜಲವಾಗಿ ಬರೆದಿದ್ದಾರೆ,

## ಹಳಕಟ್ಟಿಯವರ ೧೯೪೦ ರ ಡೈರಿ

ಐತಿಹಾಸಿಕ ಮಹತ್ವದ ದಾಖಲೆಗಳಲ್ಲಿ ಒಂದಾಗಬಹುದಾದ ಈ ಡೈರಿ (ದಿನಚರಿ ಪುಸ್ತಕ) ನನ್ನ ಸಂಗ್ರಹದಲ್ಲಿ ಬಂದಿದೆ. ನನ್ನ ಹೆಂಡತಿಯ ತಂದೆ ಉಡಚಿರಾವ ಹೊದಲೂರರು ಒಳ್ಳೇ ಲೇಖಕರಾಗಿದರು ಅವರು ೧೯೨೫-೩೨ ರ ಅವಧಿಯಲ್ಲಿ ಹಿತ ಚಿಂತಕ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಭಾಷಾದೋಷ ತಿದ್ದುವಿಕೆ ಪ್ರೂಫ್ ಕರೆಕ್ಷನ್‌ಗಳಲ್ಲಿ ಮತ್ತೂ ಕೆಲವು ಲೇಖನ ಬರಹಗಳಲ್ಲಿ ಹಳಕಟ್ಟಿಯವರಿಗೆ ಸಹಾಯಕರಾಗಿದರು. ಆದರೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜೈಲು ಸೇರಿ ದುರ್ದೈವದಿಂದ ಮೃತರಾದರು. ಚಿಕ್ಕ ವಯಸ್ಸಿನಲ್ಲಿ ಬೋಳು ತಲೆ ವಿಧವೆಯಾದ ನನ್ನ ಅತ್ತೆಗೆ ಪ್ರಾಥಮಿಕ ಶಾಲಾ ಶಿಕ್ಷಕಿಯ ಕೆಲಸವನ್ನು ಹಳಕಟ್ಟಿಯವರೆ ಕೊಡಿಸಿದರು. ಟ್ರೇನಿಂಗ ಪಡೆದು ಬಂದ ಮೇಲೆ (೧೯೪೨) ಅವರನ್ನು ಹಳಕಟ್ಟಿಯವರೇ ಮನಗೂಳಿಯಿಂದ ವಿಜಾಪುರಕ್ಕೆ ವರ್ಗಮಾಡಿಸಿಕೊಟ್ಟದ್ದು. ಅನೇಕ ಸಲ ಅವರ ಭೇಟಿಗಳಲ್ಲಿ ಹಳೆಯದಾಗಿ ಬಿದ್ದಿದ್ದ ೧೯೪೦ನೇ ಇಸ್ವಿಯ ಹಳಕಟ್ಟಿಯವರ ಡೈರಿ ಆಗ ಶಾಲಾ ವಿದ್ಯಾರ್ಥಿನಿಯಾಗಿದ್ದ ನನ್ನ ಹೆಂಡತಿಯ ಕೈಗೆ ಬಂದಂತೆ ತೋರುತ್ತದೆ. ಯಾಕೆಂದರೆ ಕೆಲವು ಪುಟಗಳಲ್ಲಿ ಖಾಲಿ ಜಾಗದಲ್ಲಿ ಅವಳ ಹಸ್ತಾಕ್ಷರದ ಅಸ್ತವ್ಯಸ್ತ ಅಂಕಿಗಳೂ. ಶಬ್ದಗಳೂ ಇವೆ.

ಅವರ ಈ ಡೈರಿಯಿಂದ ತಿಳಿದು ಬರುವ ಕೆಲವು ವಿಷಯಗಳೆಂದರೆ. ಹಳಕಟ್ಟಿಯವರು ಆಗ ಪದೇ ಪದೇ ಅನಾರೋಗ್ಯಕ್ಕೆ ಒಳಗಾಗುತ್ತಿದ್ದು. ಡಾ. ಕರಮರಕರ ಡಾ. ಪಡುಬಿದ್ರಿ, ಡಾ. ಅವದಾನಿ ಮುಂತಾದವರ ಹತ್ತಿರ ಚಿಕಿತ್ಸೆ ಪಡೆಯುತ್ತಿದ್ದುದು ತಮ್ಮ ಹಿರಿಯ ಮಗ ಚಂದ್ರುನ ಶಿಕ್ಷಣ, ನೌಕರಿ, ಮದುವೆ ವಿಚಾರಗಳು, ಸಾರ್ವಜನಿಕ ಜೀವನದ ಸೇವಾಕಾರ್ಯಕ್ಕೆ ಸಂಬಂಧಿಸಿದ ಸಂಗತಿಗಳು ಮತ್ತು ಮುಖ್ಯವಾಗಿ 'ಶಿವಾನುಭವ' ಪತ್ರಿಕೆ ಹಾಗೂ ಶಿವಾನುಭವ ಸಂಸ್ಥೆಗಳ ಸ್ಥಾಪನೆ ಇವುಗಳನ್ನು ಕುರಿತ ದಾಖಲೆಗಳಿವೆ. ೨೯. ಆಗಸ್ಟ್ ೧೯೪೦ ರ ಅವರ ದಿನಚರಿಯಲ್ಲಿ I wrote letters. to several places to establishing shivanubhava societies ಎಂದು ಒಂದೇ ವಾಕ್ಯವಿದೆ. ಶಿವಾನುಭವದ ಬಗ್ಗೆ ಅವರ ಉತ್ಕಟೇಚ್ಛೆಯನ್ನು ಇದು ತೋರಿಸುತ್ತದೆ. ವಿಶೇಷವಾದ ಸಂಗತಿಯೆಂದರೆ. ಅವರು ತಮ್ಮ ದಿನಚರಿಯನ್ನು ಇಂಗ್ಲಿಷ್ ಭಾಷೆಯಲ್ಲಿ ಇಟ್ಟಿದ್ದಾರೆ. ಅದು ಆ ಕಾಲದ ವಿದ್ಯಾವಂತರ ರೂಢಿಯಾಗಿತ್ತು.

ಇಂದು ವಚನ ಸಾಹಿತ್ಯ ಹೆಮ್ಮರವಾಗಿ ಬೆಳೆದು ನಿಂತಿದೆ. ಇನ್ನೂ ಬೆಳೆಯುತ್ತಲೂ ಇದೆ. ಇದರ ಮೂಲ ಬೇರುಗಳನ್ನು ಪತ್ತೆಹಚ್ಚಿ. ನೀರೆರೆದು ಕೃಷಿಮಾಡಿ. ಸತ್ವಯುತವಾಗಿ ನೆಲೆನಿಲ್ಲಿಸಿದ ಬಿಜಾಪುರದ ವಚನ ಪಿತಾಮಹ ಫ. ಗು. ಹಳಕಟ್ಟಿಯವರ ಹೆಸರು ವಾಚನ ಸಾಹಿತ್ಯ ಪ್ರಪಂಚದಲ್ಲಿ ಅಜರಾಮರವೆಂಬುದರಲ್ಲಿ ಸಂದೇಹವೇ ಇಲ್ಲ.

(ಪ್ರಜಾವಾಣಿ ದಿನಪತ್ರಿಕೆ ದಿನಾಂಕ ೨೩-೪-೯೭ರ ಕೃಪೆಯಿಂದ,)

## ಧರ್ಮದ ನಿಜಸ್ವರೂಪ

ಲೇಖಕರು : ಶ್ರೀ ಈರಯ್ಯ. ನಿಂ. ಕಿಲ್ಲೇದಾರ
ಕವಿತಾ ಪ್ರಕಾಶನ ಗುಡಿಕಟ್ಟಿ–೫೯೧೧೦೪

ಇಂದು ಬಹಳಷ್ಟು ಧರ್ಮಗಳು ಹುಟ್ಟಿಕೊಂಡಿವೆ. ಹೆಸರನ್ನೂ ಪಡೆದಿವೆ. ನಮ್ಮ ದೇಶವಂತೂ ಧರ್ಮ ದೇವರುಗಳಿಗೆ ತವರೂರಾಗಿದೆ. ಧರ್ಮದ ಜೊತೆಗೆ, ಹುಟ್ಟುತ್ತಿರುವ ದೇವರುಗಳೂ ಅಸಂಖ್ಯಾತವಾಗಿವೆ, ಧರ್ಮ. ದೇವರು ಈ ಎರಡರಲ್ಲೂ ಒಂದೇ ಗುಣ ಇರುವದು ಆದೇಕದರೆ ಅವುಗಳೆನ್ನು ನಂಬಿಕೊಂಡವರನ್ನು ಕಿಡಕಿ, ಬಾಗಿಲುಗಳು ಮುಚ್ಚಿದ ನಾಲ್ಕು ಗೋಡೆಗಳ ನಡುವೆ ಬಂಧಿಸಿಡುವ ಗುಣ ಇದು ನಮ್ಮ ದೇವರು, ಈತ ಅಂಥವ ಇಂಥವ, ಈ ಧರ್ಮ ನಮ್ಮದು, ಈ ಧರ್ಮ ಬಹಳ ಪುರಾತನವಾದದ್ದು, ಭವ್ಯ ಪರಂಪರೆ ಇತಿಹಾಸ ಹೊಂದಿದ್ದು ಎಂಬ ಹೆಮ್ಮೆ ಮನದಲ್ಲಿ ಮಾಂಷವದರ ಜೊತೆಗೆ ಅಮಲೇರಿ ಬಿಡುತ್ತದೆ. ಆಗ ಬೇರೆಯವರ ಧರ್ಮ ಹಾಗೂ ದೇವರು ಬೇರೆಯವರ ಧರ್ಮ ಗುರುಗಳು ಯಾರೂ ಇವರ ಕಣ್ಣಿಗೆ ಕಾಣುವದಿಲ್ಲ. ಅಷ್ಟೇ ಅಲ್ಲ ಕಂಡರೂ ಅವರು ಕೀಳಾಗುತ್ತಾರೆ. ಹೀಗೆ ಧರ್ಮ ಮತ್ತು ದೇವರ ಕುರಿತು ವ್ಯಾಖ್ಯಾನ ಮಾಡುವದು ಮಡಿವಂತರಿಗೆ ಹಿಡಿಸಲಾರದು. ಅವರ ಮಾತಿನಲ್ಲಿ ಧರ್ಮ ದೇವರುಗಳು ರಕ್ಷಿಸುವವರನ್ನು ರಕ್ಷಿಸುತ್ತವೆ. ಎಂಬ ನಂಬಿಕೆ ಬೇರು ಬಿಟ್ಟಿದೆ. ಯಾವುದು ನಿಜವಾದ ಧರ್ಮ ? ಧರ್ಮದ ನಿಜ ಸ್ವರೂಪ ಏನಿದೆ ನಾವೀಗ ಆಚರಿಸುತ್ತಿರುವ ಧರ್ಮ ಎಂತಾದ್ದು ? ಎಂಬ ಬಗ್ಗೆ ಸ್ವಲ್ಪವಾದರೂ ಚಿಂತನೆ ಮಾಡಿದರೆ ಇಂದಿನ ಗೊಂದಲಗಳು ಪರಿಹಾರವಾದಾವು. ಆಗ ಎಲ್ಲರಿಗೂ ಸುಖ ಸಂತಸ ಸಮಾಧಾನ ದೊರಕೀತು. ಈ ಹಿನ್ನೆಲೆಯಲ್ಲಿ ಧರ್ಮದ ನಿಜ ಸ್ವರೂಪ ಕುರಿತು ಇಲ್ಲಿ ವಿವರಿಸಲಾಗಿದೆ.

ಮನುಷ್ಯ ಸಮಾಜ ಜೀವಿ, ಮನಸ್ಸುಳ್ಳವ ಮನುಷ್ಯ, ಮನುಷ್ಯನಿಗೆ ವಿಚಾರ ಶಕ್ತಿ ಇದೆ. ಹೀಗಾಗಿ ಮನುಷ್ಯ 'ಅರಿವಿನ ಪ್ರಾಣಿ' ಎನಿಸಿದ್ದಾನೆ. ಮನುಷ್ಯನ ವಿಚಾರ ಶಕ್ತಿ ಆತ ದೈಹಿಕವಾಗಿ ಬೆಳೆದಂತೆ ವಿಕಾಸ ಹೊಂದುತ್ತದೆ. ಈ ಪ್ರಕೃತಿ ದೇವರು, ತತ್ವ, ಆಧ್ಯಾತ್ಮ, ಸಮಾಜ, ಹುಟ್ಟು ಸಾವು ಮತ್ತು ಪುನರ್ಜನ್ಮ ಇತ್ಯಾದಿಯಾಗಿ ವಿಚಾರ ಮಾಡುತ್ತಾನೆ. ಕೆಲ ಸಂದರ್ಭದಲ್ಲಿ. ಅಂದರೆ ಪ್ರಕೃತಿ, ವಿಕೋಪದ ಸಂದರ್ಭದಲ್ಲಿ ಭಯ ಪಟ್ಟು ಆಂತಕಗೊಳ್ಳುತ್ತಾನೆ. ಕಾಣದ ಶಕ್ತಿಯೊಂದಿರುವದು, ಆದರ ಕೈವಾಡ (ಲೀಲೆ) ಎಂದು ದೇವರ ಮೇಲೆ ಭಾರ ಹಾಕಿ ಸಮಾಧಾನ ಪಡುತ್ತಾನೆ. ಸುಖ ಬಂದಾಗ ಹಿಗ್ಗುವದು ದುಃಖ ಬಂದಾಗ ಕುಗ್ಗುವದು ಮನುಷ್ಯನ ಸ್ವಭಾವ. ಆನಂದವಾದಾಗ ನನಗೆ ಮರಣವೇ

ಒರಬಾರದೆಂದೂ ಕಷ್ಟಗಳು ಬಂದಾಗ ಸಾಯುವದೇ ಒಳಿತೆಂದೂ ನಿರ್ಣಯಕ್ಕೆ ಬರುತ್ತಾನೆ. ಕೆಲ ಸಂಗತಿಗಳು ಮನ ಬುದ್ಧಿಗೆ ಹೊಳೆಯುತ್ತವೆ. ಕೆಲ ಸಂಗತಿಗಳು ಮನ ಬುದ್ಧಿಗಳಿಗೆ ಅಗೋಚರವಾಗಿರುತ್ತವೆ. ಹಲವಾರು ಸಂಗತಿ ಮತ್ತು ಘಟನೆಗಳ ಸತ್ಯಾಸತ್ಯತೆಗಳ ಬಗ್ಗೆ ವಿಚಾರಿಸಿ, ವಿಮರ್ಶಿಸಿ, ಬುದ್ಧಿಯ ಒರೆ ಹಚ್ಚಿ ನಿರ್ಣಯಕ್ಕೂ ಬರುತ್ತಾನೆ. ಅದು ಅನುಭವದ ಫಲ. ಅನುಭವಿಸಿದ ಫಲ. ಆಗ ಅದೊಂದು ತತ್ವವಾಗುತ್ತದೆ ದರ್ಶನವಾಗುತ್ತದೆ. ಅನುಭವದ ಚಿಂತನೆ ಮುಂದುವರೆದಾಗ ಆತನೊಬ್ಬ ದಾರ್ಶನಿಕನಾಗುತ್ತಾನೆ. ವಿಚಾರ–ಅನುಭವ–ತತ್ವ ಹಾಗೂ ಚಿಂತನೆ ಫಲವಾಗಿ ಬಾಳಿಗೊಂದು ಚೌಕಟ್ಟನ್ನು ಪಡೆದ ಮನುಷ್ಯ ಒಳಿತು ಕೆಡಕುಗಳ ವಿಮರ್ಶೆ ಮಾಡಿ ಒಳಿತು ಮಾಡುವ ಭಾವನೆ ಹೊಂದಿ ಒಳ್ಳೆ ಬಾಳು ಬಾಳುತ್ತಾನೆ. ಆತ ಮಾನವೀಯ ಗುಣ ಹೊಂದಿರುವದರಿಂದ ನೀತಿವಂತ ನೆನಿಸುತ್ತಾನೆ. ಹೀಗೆ ನೀತಿಯ ಆಚರಣೆಯಿಂದ ಧರ್ಮಪಾಲನೆ ಮಾಡುತ್ತಾನೆ. ಇದೇ ಧರ್ಮ ಹುಟ್ಟಿ ಬೆಳೆದು ಬಂದ ದಾರಿ

ಧರ್ಮ ಕುಲಧರ್ಮ. ರಾಷ್ಟ್ರಧರ್ಮ, ವೃತ್ತಿ ಧರ್ಮ ಎಂದು ಕರೆಯಲ್ಪಡುತ್ತದೆ. ಆದರೆ ಈ ಧರ್ಮಗಳು ಕೇವಲ ಮತೀಯ ಧರ್ಮದ ಚೌಕಟ್ಟಿನಲ್ಲೇ ಉಳಿಯುತ್ತವೆ. ಮತೀಯ ಧರ್ಮವನ್ನು ಹೊರತು ಪಡಿಸಿದರೆ ವಿಶ್ವ ಧರ್ಮದ ಪಟ್ಟಿ ಪಡೆಯಲು ಸಾಧ್ಯ. ವಿಶ್ವಧರ್ಮಕ್ಕೆ ಮಾನವೀಯತೆಯೆ ಆಧಾರ ಇಂದಿನ ಸಂದರ್ಭದಲ್ಲಿ ಹಿಂದೂ, ಸೀಖ್ ಮುಸ್ಲಿಂ ವೀರಶೈವ (ಲಿಂಗಾಯತ) ಕ್ರೈಸ್ತ, ಪಾರ್ಸಿ, ಜೈನ, ಬೌದ್ಧ ಹೀಗೆ ಹಲವಾರು ಧರ್ಮಗಳ ಪಟ್ಟಿಯೆ ನಮ್ಮ ಮುಂದಿದ್ದು ಅವರೆಲ್ಲ ಆರಾಧಿಸುವ ದೇವರುಗಳು ಬೇರೆ ಬೇರೆಯಾಗಿದ್ದು ಆಚರಿಸುವ ಧರ್ಮಗಳೂ ಬೇರೆಯಾಗಿವೆ. ಆಯಾ ಧರ್ಮ (ಮತ)ಗಳನ್ನು ಸ್ಥಾಪನೆ ಮಾಡಿದ ಮಹಾತ್ಮರನ್ನು ಇಂದಿನ ಅವರ ಅನುಯಾಯಿಗಳು ದೇವರೇ ಎಂದು ಪೂಜಿಸುತ್ತಿದ್ದಾರೆ. ಹೀಗಾಗಿ ನಮ್ಮ ಧರ್ಮ, ನಮ್ಮ ಧರ್ಮಗುರುಗಳೆ ಶ್ರೇಷ್ಠ ಎಂಬ ನಿರ್ಧಾರಕ್ಕೂ ಬಂದಿದ್ದಾರೆ ಮನುಷ್ಯನಿಗೆ ಮನುಷ್ಯ (ಮಾನವ) ಅಥವಾ ಮಹಾಮಾನವ ಎಂದು ಕರೆದ ಮಾನವರನ್ನು ಸಜೀವ (ಜಂಗಮ) ಎನ್ನದೆ ನಿರ್ಜೀವ (ಸ್ಥಾವರ) ಎಂದು ಗದ್ದುಗೆ ಗೋಪುರ ಕಟ್ಟಿಸಿ ಪೂಜಿಸುತ್ತ ಮಾನವೀಯತೆಯನ್ನೇ ಮರೆತೆವು ಅಪ್ಪನಿಗೆ 'ಅಪ್ಪಾ' ಎನ್ನದ ನಾವು ಇಂದು ಚಾರಿತ್ರ್ಯ ಹೀನರನ್ನು ಅವರ ಜೀವಂತ ಅವಧಿಯಲ್ಲಿ ಇಂದ್ರ, ಚಂದ್ರ. ಎಂದು ಹೊಗಳಿ ದೇವರನ್ನಾಗಿ ಮಾಡುತ್ತೇವೆ. ಇನ್ನೊಂದು ರೀತಿಯಿಂದ ಸಚ್ಚಾರಿತ್ರ್ಯವುಳ್ಳ ಸಮಾಜ ಸುಧಾರಕರನ್ನು ಅವರಿದ್ದಾಗ ಹುಚ್ಚನೆಂದು ತುಚ್ಛ ಮಾಡಿ ಅವರು ಸತ್ತ ಮೇಲೆ ಹೊಗಳಿ ಲೀಲೆ ಪವಾಡ ಅವರ ಹೆಸರಿಗೆ ಕಟ್ಟಿ ಮಠ, ಮಂದಿರ, ಪೀಠ ಸ್ಥಾಪಿಸಿ ಪೂಜಿಸುತ್ತೇವೆ. ರಾಜ ಮಹಾರಾಜರನ್ನು ಅಧಿಕಾರ ದರ್ಪ ಇರುವವರನ್ನು ಇರುವಾಗಲೆ ದೇವರೆಂದರೆ ಬಸವ, ಬುದ್ಧ, ಪೈಗಂಬರ, ಏಸು



ಇವರನ್ನೆಲ್ಲಾ ಸತ್ತ ಮೇಲೆ ದೇವರೆಂದು ಪೂಜಿಸುತ್ತಿದುದರಿಂದ ಧರ್ಮ ಮತ್ತು ಧರ್ಮ ಗುರುಗಳ ಬಗ್ಗೆ ಮೂಢನಂಬಿಕೆ ಹೊಂದಿದಂತಾಗಿದೆ. ಅವರು ಹೇಳಿದ ಆಚರಿಸಿದ ತತ್ವಾದರ್ಶಗಳನ್ನು ಮರೆತು ಮತ್ತೆ ಅವರ ಹೆಸರಿನಲ್ಲೆ ಕಂದಾಚಾರ ನಡೆಸುವದು ಅವರಿಗೆ ದ್ರೋಹ ಬಗೆದಂತೆ ಅಷ್ಟೇ ಅಲ್ಲ ಅವರನ್ನು ಕೊಲೆ ಮಾಡಿದಂತೆ ಆಗುತ್ತದೆ.

ಧರ್ಮ ಮತ್ತು ದೇವರ ಕಲ್ಪನೆಗಳ ವಿರುದ್ಧ ಮಾತಾಡಿದರೆ ಅದು ಅಪರಾಧ. ಬರೆಯಲು ಭಯ. ದೇವರ ಹೆಸರಿನಲ್ಲಿ ಮಾನವನಿರ್ಮಿತವಾದ ವೇದ ಪುರಾಣ ಶಾಸ್ತ್ರಗಳ ವಿರುದ್ಧ ನಿಲ್ಲುವದು ಪ್ರವಾಹದ ವಿರುದ್ಧ ಈಜುವದು ಎರಡೂ ಒಂದೇ. ಪೂಜ್ಯವೂ ಪವಿತ್ರವೂ ಎಂದು ಕರೆಯಲ್ಪಡುವ ಗ್ರಂಥಗಳಲ್ಲಿ ಇರುವ ಅಸಂಬದ್ಧ, ದುಷ್ಟತನ ಮತ್ತು ಮಾನವ ವಿರೋಧಿ ನೀತಿ ಇದ್ದರೂ ಅಂಥ ಪುರಾಣದ (ಕತೆಯ) ನಾಯಕನನ್ನೇ ನಾವು ಪುರುಷೋತ್ತಮ (ಲೀಲಾ ಪುರುಷ) ಎಂದಿದ್ದೇವೆ. ಅದನ್ನೇ ಮುಂದಿನ ತಲೆಮಾರಿಗೂ ಬೋಧಿಸುತ್ತೇವೆ. ಒಟ್ಟಿನಲ್ಲಿ ಹೀಗೆ ನಾವು ನಮ್ಮ ಸಂಸ್ಕೃತಿ, ಸಮಾಜ, ಧರ್ಮ ಮತ್ತು ಜಾತಿಗಳ ಬಂಧನದಲ್ಲಿ ತಿಳಿಯದೆಯೆ ಸಿಕ್ಕಿಹಾಕಿಕೊಂಡು ಬೀಳುತ್ತೇವೆ. ಅಲ್ಲಿಂದ ನಮಗೆ ಹೊರ ಬರಲು ಆಗದು. ಹೊರಬಂದು ಹೊರಗಿನ ಪ್ರಪಂಚವನ್ನು ಪ್ರಪಂಚದ ಧರ್ಮವನ್ನು ತಿಳಿದುಕೊಳ್ಳುವದು ಕನಸಿನ ಮಾತೇ ಆದೀತು.

ಹೃದಯ ಶುದ್ಧಿ ಮತ್ತು ಭಾವಶುದ್ಧಿಗೆ ಯಾವ ಧರ್ಮದಲ್ಲಿ ಮೊದಲ ಪ್ರಾಶಸ್ತ್ಯವಿದೆ ? ಅದು ವಿಶ್ವಧರ್ಮ ಎನಿಸಲಾರದೆ ? ದಿಟ್ಟಿಸಿ ನೋಡಿದಾಗ ವಿಮರ್ಶಿಸಿ ನೋಡಿದಾಗ ಪ್ರಶ್ನೆ ಮಾಡುವ ಸಾಮರ್ಥ್ಯ ಬಂದಾಗ ನಮ್ಮ ಧರ್ಮ ಎಂತಾದ್ದು ? ಬೇರೆಯವರ ಧರ್ಮದಲ್ಲಿ ವಿಶೇಷವೇನಿದೆ. ನಮ್ಮಲ್ಲಿರುವ ಕೊರತೆಗಳೇನು ಅಲ್ಲಿರುವ ಪೂರ್ಣತೆಗಳಾವು? ಎಂಬುದು ಹೊಳೆಯಬಲ್ಲದು. ಎಲ್ಲರಿಗೂ ತಮ್ಮ ಬೆನ್ನು ತಮಗೆ ಕಾಣಿಸದಿರುವದರಿಂದ ತಮ್ಮ ಬೆನ್ನು ಹೇಗಿದೆ ಎಂಬುದನ್ನು ಬೇರೆಯವರೆ ಹೀಗಿದೆ ಎಂದು ತಿಳಿಸಿಕೊಟ್ಟಾಗ ಮಾತ್ರ ತಿಳಿಯುವದು. ಸಮಾಜ ಸುಧಾರಣೆಗೆ ಧರ್ಮವನ್ನು ಬಳಸಿಕೊಂಡ ಎಷ್ಟೋ ಸಂತರು ಅನುಭಾವಿಗಳು ಆಗಿ ಹೋಗಿದ್ದಾರೆ. ಬೇರೆ ಸಮಾಜದವರು ಇಂಥ ಸಮಾಜ ಸುಧಾರಕ (ಇಂಥ ಧರ್ಮ) ಶ್ರೇಷ್ಠ ಎಂದು ಪ್ರಾಮಾಣಿಕ ಭಾವನೆಯಿಂದ ಅಭಿಪ್ರಾಯಪಟ್ಟಾಗ ಆಧರ್ಮ ಹಾಗೂ ಆಧರ್ಮದ ಸ್ಥಾಪಕ ಶ್ರೇಷ್ಠನೆನಿಸುತ್ತಾನೆ. ಅಂತಹ ಸಮಾಜ ಸುಧಾರಕರಲ್ಲಿ ಧರ್ಮಸ್ಥಾಪಕರಲ್ಲಿ ೧೨ ನೇ ಶತಮಾನದ ಶ್ರೀಬಸವಣ್ಣನವರು ಕ್ರಾಂತಿಕಾರಿ ಎನಿಸಿದ್ದಾರೆ.

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ।
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ ।

ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ ||

ಈ ವಚನದಲ್ಲಿ ಬಸವಣ್ಣ ನಿಜವಾದ ಧರ್ಮದ ಸ್ವರೂಪವನ್ನೇ ವಿವರಿಸಿದ್ದಾನೆ ನಿಜವಾದ ಧರ್ಮಕ್ಕೆ ತಳಹದಿ ಎಂದರೆ ನೀತಿ. ಆ ನೀತಿಯಲ್ಲಿ ಏಳು ಸೂತ್ರಗಳು ಅಡಕವಾಗಿವೆ. ಏಳೂ ಸೂತ್ರಗಳನ್ನು ಅರಿತು ಆಚರಿಸಿ ನಿಜಜೀವನದಲ್ಲಿ ಅಳವಡಿಸಿಕೊಂಡು ಪರರಿಗೆ ಮಾದರಿಯಾಗುವಂತೆ ಜೀವನ ನಡೆಸಿದರೆ ಅವನ ಅಂತರಂಗ ಹಾಗೂ ಬಹಿರಂಗಗಳು ಶುದ್ಧಿಯಾಗುತ್ತವೆ. ಅದೇ ಹೃದಯ ಶುದ್ಧಿ ಅದೇ ಭಾವಶುದ್ಧಿ ಹಾಗೂ ಲೌಕಿಕದ ಶುದ್ಧಿ ಆಗ ಪಾರಮಾರ್ಥಿಕ ಸಿದ್ಧಿ ದೊರಕುವದು. ಅದನ್ನೇ ಬಸವಣ್ಣ ದೇವರನೊಲಿಸುವ ಪರಿ ಎಂದು ಹೇಳಿದ್ದಾರೆ.

'ದಯುವೇ ಧರ್ಮದ ಮೂಲ' ಎಂದಿರುವ ಬಸವಣ್ಣ ಇನ್ನೂ ಒಂದು ಮಹತ್ವದ ತತ್ವ ರೂಪಿಸಿದ್ದಾನೆ. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು ? ಎಲ್ಲ ಜೀವರಾಶಿಗಳಿಗೆ ಒಳಿತನ್ನು ಬಯಸುವ ಶರಣರೆ ಶ್ರೇಷ್ಟ ಕುಲದವರು. ನಿಜವಾದ ಧರ್ಮದವರು ಯಾವದೇ ಸಂದರ್ಭದಲ್ಲಿ ಯಾರೇ ಬಂದರೂ ಬಂದವರಿಗೆ ನಮ್ಮಲ್ಲೇನೂ ಅವರಿಗೆ ಕೊಡಲು ಇರದಿದ್ದರೂ 'ಬನ್ನಿ ಹದುಳವೇ ಕುಳಿತುಕೊಳ್ಳಿ' ಎಂಬ ಸದುವಿನಯದ ಮಾತುಗಳಾದರೂ ನಮ್ಮಲ್ಲಿರಲಿ ಎಂದು ಆದರ್ಶ ಜೀವನದ, ಸಾರ್ಥಕ ಬಾಳುವೆಯ, ಸುಸಂಸ್ಕೃತ ಸಮಾಜ ಜೀವಿಯ ನಡೆ ಹೀಗಿರಲಿ ಎಂದು ಅಂತೆ ಬಾಳಿ ಬೆಳಗಿದ್ದಾರೆ ಶರಣರು. ಸದುವಿನಯವೆ ಸದಾಶಿವನ ಒಲುಮೆ ಎಂದು ತಿಳಿಸಿಗ ಬಸವಣ್ಣ ಇನ್ನೂ ಮುಂದುವರೆದು ಸದಾಚಾರದ ಪಾಲನೆ ಮಹತ್ವದ್ದೆಂದು ಹೇಳಿದ್ದಾನೆ. ವಿಚಾರದಂತೆ ಆಚಾರ ಬೇಕು. ಒಳ್ಳೆ ವಿಚಾರ, ಒಳ್ಳೆ ಆಚಾರವಿರಬೇಕು. ಕೇವಲ ವಿಚಾರ ಹೇಳಲು ಮಾತ್ರವಿದ್ದು ಆಚರಣೆಯಲ್ಲಿಲ್ಲದಿದ್ದರೆ ಅದು ಡಂಭಾಚಾರವಾಗುತ್ತದೆ. ಅದನ್ನೇ 'ಕಲ್ಲನಾಗರ ಕಂಡರೆ ಹಾಲನೆರೆವರು ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ' ಎಂದು ಡಾಂಭಿಕ ಜನರ ವೃತ್ತಿಯನ್ನು ತನ್ನ ವಚನದಲ್ಲಿ ಖಂಡಿಸಿದ್ದಾರೆ.

'ನುಡಿ-ನಡೆ' ಒಂದಾಗಿರಬೇಕೆಂದು ತಿಳಿಸಿದ ಬಸವಣ್ಣ ನುಡಿದಂತೆ ನಡೆದು ತೋರಿಸಿದ್ದಾನೆ. ನಡೆಯಲ್ಲಿ ತಪ್ಪಿ ನುಡಿಯಲ್ಲಿ ಎಚ್ಚರವಹಿಸಿದರೆ ಕೈಯಲ್ಲಿ ಹಿಡಿದ ಲಿಂಗವೆ ಘಟಸರ್ಪವಾಗುವದೆಂದು ಎಂಥ ಗಂಭೀರ ಎಚ್ಚರಿಕೆಯನ್ನು ಕೊಟ್ಟಿದ್ದಾನೆ. ಬಸವಣ್ಣ. ಇದನ್ನೆಲ್ಲ ಮನಗಂಡು ಮಹಾತ್ಮಾಗಾಂಧೀಜಿಯವರು ಧರ್ಮವನ್ನು ಕುರಿತು ಆತ್ಮದೃಷ್ಟಿಯಿಂದ ಆಚರಿಸಿದ ನೀತಿಯೆ ಧರ್ಮ' ಎಂದಿರುವರು. ಆತ್ಮ



ದೃಷ್ಟಿ ಇರುವಲ್ಲಿ ಪರಪೀಡೆ ಇರದು. ಅಲ್ಲಿ ಸಕಲ ಜೀವಾತ್ಮರಿಗೆ ಲೇಸ ಬಯಸುವ ವೃಷ್ಟಿ ಇರುತ್ತದೆ. ಆತ್ಮ ದೃಷ್ಟಿಯಿಂದ ಆಚರಿಸುವ ನೀತಿಯೆ ಸದಾಚಾರವಾಗುತ್ತದೆ. ಅಲ್ಲಿ ಸದುವಿನಿಯ, ಇರುತ್ತದೆ. ಅಲ್ಲಿ ನಡೆ-ನುಡಿ ಒಂದಾಗಿರುತ್ತದೆ. ಅಲ್ಲಿ ಧರ್ಮದ ನಿಜ ಸ್ವರೂಪ ಕಾಣುತ್ತದೆ. ಅದು ಮಾನವೀಯತೆಯುಳ್ಳ ವಿಶ್ವಧರ್ಮ ಎನಿಸುತ್ತದೆ.

ಹಿಂದಿನ ಕಾಲದಿಂದಲೂ ಧರ್ಮ ಮತ್ತು ಮತಗಳ ಹೆಸರಿನಲ್ಲಿ ಏನೆಲ್ಲ ನಡೆದಿವೆ. ಅಕ್ರಮವನ್ನು ಕಾನೂನಿನ ಚೌಕಟ್ಟಿನಲ್ಲಿ ಸಕ್ರಮಗೊಳಿಸುವಂತೆ. ಧರ್ಮದ ಹೆಸರಿನಲ್ಲಿ ಕೊಲೆ, ಹಿಂಸೆ ಹಾಗೂ ಯುದ್ಧಗಳೆ ಜರುಗಿದ್ದು ಅವನ್ನೆಲ್ಲಾ ಒಳಗೊಂಡಿರುದ ಧರ್ಮಗಳು ಧರ್ಮಗಳೇ ? ಧರ್ಮ ಮತ್ತು ಯುದ್ಧ ಪರಸ್ಪರ ವಿರುದ್ಧವಾಗಿದ್ದರೂ ಧರ್ಮಯುದ್ಧ ಎಂದು ಹೆಸರು ಕೊಡಲಾಗಿದೆ. ಒತ್ತಾಯ, ಆಶೆ, ಆಮಿಷ ಹಾಗೂ ಬಲಾತ್ಕಾರದ ಮೂಲಕ ತಮ್ಮ ಧರ್ಮ ಬೆಳೆಸುವ ಹುಚ್ಚಿನಲ್ಲಿ ಮತಾಂತರಗಳಾಗಿಲ್ಲವೆ ? ಒಲುಮೆಯಿಂದ ಆ ಧರ್ಮದಲ್ಲಿರುವ ಒಳ್ಳೆಯ ತತ್ವಗಳ ಆಕರ್ಷಣೆಯಿಂದ ಆ ಧರ್ಮ ಸ್ವೀಕರಿಸಬೇಕೆಂಬ ಭಾವನೆ ಹುಟ್ಟಿದಾಗ ನಿಜವಾದ ಧರ್ಮ ಬೆಳೆಯುವದು ಮತ್ತು ಉಳಿಯುವದು.

ಧರ್ಮದ ಬಗ್ಗೆ ಜನತೆಗಿರುವ ಅಜ್ಞಾನ, ಮೂಢನಂಬಿಕೆಗಳು ದೂರಾಗಬೇಕು. ಅದಕ್ಕೆ ಶರಣರ ವಚನಗಳನ್ನು ಅಧ್ಯಯನ ಮಾಡಿದರೆ ಮಾತ್ರ ಜನರಿಗೆ ಧರ್ಮದ ಅರ್ಥ ಹೊಳೆಯುವದು. ಬೇರೆ ಧರ್ಮಗಳಲ್ಲಿಯ ಒಳ್ಳೆಯ ಅಂಶಗಳನ್ನು ತಿಳಿದುಕೊಂಡರೆ ಇಂದು ದೇಶದಲ್ಲಿ ಕದಡಿದ ನೆಮ್ಮದಿ ತಿಳಿಯಾದೀತು. ನಮ್ಮ ದೇವರು ಧರ್ಮ ಯಾಕೆ ಶ್ರೇಷ್ಟ ಎಂಬುದನ್ನು ಅರಿತು ಕೊಂಡರೆ ಮಾತ್ರ ಸಾಮಾಜಿಕ ನೆಮ್ಮದಿ, ಶಾಂತಿ ಸಾಧ್ಯ-ಆಗ ಧರ್ಮ ಪವಿತ್ರವೂ ಗೌರವಯುತವೂ ಆದೀತು.

---

—ವಚನ—

೧

ಅಂಗನಗುರಿ ಶಿವನೊಡನೆ ಸಮರಸವಯ್ಯಾ,
ಶಿವಾನಂದ ಶಿವಭಾವದಿಂದ
ಜೀವರಿಗೆ ಪೂರ್ಣ ಸ್ವಾತಂತ್ರ್ಯವಯ್ಯಾ
ಭವಬಂಧನದಿಂದ ಬಿಡುಗಡೆಯಯ್ಯಾ
ಅವಂಗೆ ಜಗದ ಮಾಯಾಪಾಶವಿಲ್ಲವಯ್ಯಾ
ಜೀವರು, ಸತ್ವದ ಜೀತಪೋಗು ವಾಗಳು
ಮಹಾಪ್ರಕಾಶ ಮಹಾಲಿಂಗದಿಂದ ಹೊರಬಂದವಯ್ಯಾ
ನಿಯಂತ್ರಿತ ಕಾರ್ಯ (ಜೀವನ) ಮುಗಿದೊಡನೆ
ಯಾವ ಪರವಸ್ತುವಿನಿಂದ ಹೊರಬಂದ ಅದೇ ಪರವಸ್ತುವಿನಲ್ಲಿ
ಲೀನರಯ್ಯಾ ಆ ಪರವಸ್ತುವೇ ಸ್ಥಲವಯ್ಯಾ ಶಿವಲಿಂಗೇಶ.

ಜಿ. ವಿ. ಚನ್ನಯ್ಯಾ ಹಿರೇಮಠ

# ಶರಣ ಸಿದ್ಧಾಂತ

**ವಚನ ಪಿತಾಮಹ ಹಳಕಟ್ಟಿ ಅನುಭವ ಪುತ್ರಮಠದ ಬಸವಯ್ಯನವರು**
**ಶಿವಶರಣರ ಕಿಂಕರರ ಕಿಂಕರ ಪುಣ್ಯದಕಟ್ಟಿ ತಾ. ಹರಪನಹಳ್ಳಿ ಜಿಲ್ಲಾ ಬಳ್ಳಾರಿ.**

ಈ ಲೇಖನ ವಚನ ಪಿತಾಮಹರಾದ ಡಾ. ಫ. ಗು. ಹಳಕಟ್ಟಿಯವರ ವಚನ ಶಾಸ್ತ್ರಸಾರ ಭಾಗ ೨ ಇದರ ಆಧಾರವಾಗಿರುತ್ತದೆ.

## " ಕರಣ ಹಸಿಗೆ "

### ಮನತ್ರಯಗಳು.

ಇನ್ನು ಮನ, ಮನನ. ಮನನೀಯ ಇಂತಿವು ಮನತ್ರಯಂಗಳು ಇವಕ್ಕೆ ವಿವರ—

ಮನವೆಂಬಲ್ಲಿ ತನ್ನ ಹೇಳುವುದು. ಜ್ಞಾತೃಸ್ವರೂಪವಾದ ಆತ್ಮ ಲಕ್ಷಣ ಒಂದನ್ನೇ ಕುರುಹಿಡುವುದು. ಮನನವೆಂಬಲ್ಲಿ ಆತ್ಮನಿಂದ ಅರಿವ ಜ್ಞಾನವನು ಹೇಳುವುದು. ಅರಿವು ಲಕ್ಷಣ ಒಂದನ್ನೇ ಕುರುಹಿಡುವುದು. ಮನನೀಯವೆಂಬಲ್ಲಿ ಅರಿವಿನಿಂದ ತಿಳಿಸಿಕೊಳ್ಳುವ ವಸ್ತು ಒಂದನ್ನೇ ಹೇಳುವುದು. ಘಟಪಟಾದಿ ಪದಾರ್ಥಗಳನ್ನೇ ಕುರುಹಿಡಿವುದು. ಮನ ಮನನ ಮನನೀಯವೆಂದರೂ. ತತ್ಪದ ತ್ವಂಪದ ಅಸಿಪದವೆಂದರೂ, ಜ್ಞಾತೃ, ಜ್ಞಾನ, ಜ್ಞೇಯವೆಂದರೂ ಒಂದೇ ನಾಮ ಪರ್ಯಾಯವಾಗಿಪ್ಪವು.

### ತ್ರಿಕರಣಗಳು

ಇನ್ನು ಮಾನಸ ವಾಚಕ ಕಾಯಕ ಇಂತಿವು ತ್ರಿಕರಣಂಗಳು ಇವಕ್ಕೆ ವಿವರ.

ಮಾನಸವೆಂದಡೆ ಮನದಲ್ಲಿನೆನೆವುದು. ವಾಚಕವೆಂದರೆ ನುಡಿವುದು. ಕಾಯಕವೆಂದಡೆ ಕೈಮುಟ್ಟಿ ಮಾಡುವುದು. ಇಂತಿವು ತ್ರಿಕರಣಂಗಳ ಭೇದ.

ಮಾನಸವೆಂದಡೆ ಮನದಲ್ಲಿ ನೆನೆವುದು. ಆವುದಾನೊಂದು ಕಾರ್ಯವನ್ನು ತನ್ನಂತರಂಗದೊಳಗೆ ಯೋಚಿಸುವುದು. ವಾಚಕವೆಂದಡೆ ತನ್ನಂತರಂಗದೊಳಗೆ ಯೋಚಿಸುವಂಥ ಕಾರ್ಯವನ್ನು ಪರರ ಕೂಡೆ ಹೇಳುವುದು. ಕಾಯಕವೆಂದಡೆ ತನು ಮುಟ್ಟಿ ಮಾಡುವುದು. ಅವರವರ ಕೂಡೆ ಹೇಳಿದಂತಹ ಕಾರ್ಯವನ್ನು ತನ್ನಂಗವ ಬಳಲಿಸಿ ಆಯಾಸಂಬಟ್ಟು ಅನುಗೈಯ್ವುದು.

ಈ ತ್ರಿಕರಣಂಗಳು ಪರಶಿವನಿಂದುಂಟಾದ. ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳೇ ಲೋಕದ ಆತ್ಮರುಗಳಲ್ಲಿ ಮಾನಸ, ವಾಚಕ ಕಾಯಕವೆಂಬ ತ್ರಿಕರಣಂಗಳಾಗಿರುತಿಹವು,



### ಷಟ್‌ಚಕ್ರಗಳು.

ಆಧಾರಾದಿ ಷಟ್‌ಚಕ್ರಂಗಳ ವಿವರವೆಂತೆಂದೊಡೆ ಆಚಾರಕ್ಕಾಶ್ರಮಂಗಳೇ ಆಧಾರವು. ಅದು ಬ್ರಹ್ಮಚರ್ಯಾದಿ ಚತುರ್ದಳಂಗಳಿಂದೊಪ್ಪುತ್ತಿಹುದು. ತದಾಚಾರ ಸೇವಕನೇ ಭಕ್ತನು. ಶ್ರದ್ಧೆಯೇ ಚೈತನ್ಯವು. ಚಿತ್ತವೇ ಹಸ್ತ. ಚಿತ್ತವೆಂದರೆ ನಿಯಮ ಜ್ಞಪ್ತಿಜ್ಞಾನ ಆಶ್ರಮಂಗಳಿಗೆ ಪೃಥ್ವಿಯೇಮೂಲ. ಇವಕ್ಕೆ ಪ್ರಾಣವೇ ಆಧಾರವಾಗಿ ನಾಸಿಕವನನು ಸರಿಸಿರ್ಪುದು. ಗುದವೇಸ್ಥಾನ. ಇದಕ್ಕೆ ವಾದಿಸಾಂತವೇ ಬೀಜವು. ಗುರುವಿಗೆ ಷಟ್ಕರ್ಮಂಗಳೇ ಸ್ವಾದಿಷ್ಠಾನವು. ಯಜನಾದಿ ಷಡ್‌ದಳಂಗಳಿಂದ ಒಪ್ಪುತ್ತಿಹುದು. ಬಾದಿಲಾಂತವೇ ಬೀಜ. ತದ್ಗುರು ಸೇವಕನೇ ಮಹೇಶ್ವರನು ನಿಷ್ಠೆಯೇ ಚೈತನ್ಯವು. ಬುದ್ಧಿಯೇ ಹಸ್ತವು. ಕರ್ಮಕ್ಕೆ ಜಲವೇ ಮೂಲವಾದುರಿಂದ. ಉಪದೇಶಕತ್ವವಾದುದರಿಂ ಜಿಹ್ವೆಯನನುಭವಿಸು ತ್ತಿರ್ಪುದು, ಪಾತ್ರಾಪಾತ್ರ ವಿವೇಕ ಪರಿಶುದ್ಧಿಯಿಂ ಗುಹ್ಯವೇ ಸ್ಥಾನವಾಯಿತ್ತು. ಶಿವನಿಗೆ ದಶೇಂದ್ರಿಯಂಗಳೇ ಮಣಿಪೂರಕ ಡಾದಿಫಾಂತವಾದ ಬೀಜದಿಂ ಶ್ರೋತ್ರಾದಿ ದಶ ದಳಂಗಳಿಂದೊಪ್ಪುತ್ತಿಹುದು ತಚ್ಛಿವ ಪೂಜಕನೇ ಪ್ರಸಾದಿಯು. ವಿದ್ಯೆಯೇ ಚೈತನ್ಯವು. ಅಹಂಕಾರವೇ ಹಸ್ತವು. ಇಂದ್ರಿಯಂಗಳಿಗೆ + ಅಗ್ನಿಯೇ ಮೂಲ. ದಿಙ್ಮುಖದಿಂ ಬಂದ ಸಕಲಪದಾರ್ಥಗಳನ್ನು ಇಂದ್ರಿಯ ಮುಖಂಗಳಲ್ಲಿ ಪೂಜಿಸುತ್ತಿರ್ಪುದರಿಂ ನೇತ್ರವನನು ಸರಿಸುತ್ತಿರ್ಪುದು. ಇದಕ್ಕೆ ಉದರವೇ ಸ್ಥಾನ, ತತ್ಪೂರಣವೇ ಮಣಿಪೂರಕ. ಮಣಿಪೂರಕವೆಂದರೆ. ತೇಜೋಭರಿತ. ತೇಜಸ್ಸೆಂದರೆ. ಕಳಾಪದಾರ್ಥ ಕಳೆಯೆಂದರೆ ರುಚಿ. ಭರಿತವೆಂದರೆ ಅನುಭವ. ರುಚ್ಯನುಭವವೇ ಮಣಿಪೂರಕವು. ಜಂಗಮಕ್ಕೆ ದ್ವಾದಶಭಾವಂಗಳೇ ಅನಾಹತವು. ತನ್ವಾದಿದ್ವಾದಶ ಭಾವಂಗಳೇ ದಳಗಳು. ಕಾದಿಠಾಂತವೇ ಬೀಜ. ತಜ್ಜಂಗಮ ಪೂಜಕನೇ ಪ್ರಾಣಲಿಂಗಿಯು, ಅನುಭಾವವೇ ಚೈತನ್ಯವು, ಮನವೇ ಹಸ್ತ. ಪ್ರಾಣವಾಯುವೇ ಮೂಲ, ದ್ವಾದಶ ಭಾವಂಗಳು ಅನುಭವ ಮಾಡುದರಿಂದ ತ್ವಕ್ಕನ್ನನುಸರಿಸಿರ್ಪುದು. ಇದಕ್ಕೆ ಮನೋನಿಗ್ರಹದಿಂ ಹೃದಯವೇ ಸ್ಥಾನವು. ಉಪದೇಶ ತತ್ವವೇ ಪ್ರಸಾದವು. ಆ ಪ್ರಸಾದಕ್ಕೆ ಷೋಡಶ ಪದಾರ್ಥವೇ ವಿಶುದ್ಧಿ. ಪ್ರಮಾಣ ಪ್ರಮೇಯಾದಿ ಷೋಡಶ ಭೇದಂಗಳೇ ದಳಂಗಳು ಅಕಾರಾದಿ ಷೋಡಶ ಸ್ವರಂಗಳೇ ಬೀಜ. ತತ್ + ಪ್ರಸಾದ ಸೇವಕನೇ ಶರಣನು. ಆನಂದವೇ ಚೈತನ್ಯವು. ಜ್ಞಾನವೇ ಹಸ್ತವು ಆಕಾರವೇ ಮೂಲ. ಶಬ್ದಮುಖದಿಂತತ್ವವಂ ಗ್ರಹಿಸುತ್ತಿರ್ಪುದರಿಂ ಶ್ರೋತ್ರವವನುಸರಿಸಿರ್ಪುದು. ತತ್ + ಶಬ್ದಂಗಳಿಗೆ ಕಂಠವೇ ಸ್ಥಾನವು ಆ ಪರತತ್ವದಿಂ ಪರಿಶುದ್ಧಿಯಾಗಿರ್ಪುದೇ ವಿಶುದ್ಧಿಯು. ಮಹಪ್ರಕಾಶಕ್ಕೆ ಇಷ್ಟಪ್ರಾಣಂಗಳೇ ಆಜ್ಞೇಯವು. ಬಹಿರಂತರ್ + ವ್ಯಾಪಕಂಗಳೇ ದಳಂಗಳು ಅದಕ್ಕೆ ಹಂಕ್ಷಂವೇ ಬೀಜ. ತದನುಸಂಧಾನಿಯೇ ಐಕ್ಯನು, ಸಮರಸವೇ. ಚೈತನ್ಯವು. ಭಾವವೇ ಹಸ್ತ. ಆತ್ಮವೇ ಮೂಲ, ವಿವೇಕ ಮುಖ

ದಿಂದಾಚರಿಸುತ್ತಿರ್ಪುದರಿಂ ಮನವನನು ಸರಿಸಿರ್ಪುದು. ಇದಕ್ಕೆ ಲಲಾಟವೇ ಸ್ಥಾನ. ನಮಸ್ಕಾರ ಭಸ್ಮಧಾರಣ ಕ್ರಿಯೆಗಳಿಗೆ ಕಾರಣ ವಾಗಿರ್ಪುದರಿಂದಲೂ ಬೀಜಾಕ್ಷರಂಗಳಿಗೆ ಸ್ಥಾನ ವಾಗಿರ್ಪುದರಿಂದಲೂ. ಲಲಾಟವೇ ಕಾರಣವು. ಅಲ್ಲಿ ಮಹಾಪ್ರಕಾಶವಾಗಿರ್ಪ ಆತ್ಮನನ್ನು ಚನ್ನಾಗಿ ತಿಳಿಯ ತಕ್ಕದ್ದೇ ಆಜ್ಞೇಯವು. ಆ ಮಹದಲ್ಲಿ ಚಿಚ್ಛಕ್ತಿ ಬೆರಯಲು ಆಜ್ಞೇಯದಲ್ಲಿ ಇಷ್ಟಪ್ರಾಣಂಗಳೆಂಬ ದ್ವಿದಳಂಗಳು ಪ್ರಕಾಶಮಾದವು. ಪ್ರಸಾದದೊಳ್ ಪರಾಶಕ್ತಿ ಬೆರೆಯಲು, ಷೋಡಶಪ್ರದಾರ್ಥಂಗಳೆಂಬ ಷೋಡಶ ದಳಂಗಳು ವಿಕಸನವಾದವು. ಸ್ಥಾಣುವಾಗಿರ್ಪ ಶಿವನು ಆದಿಶಕ್ತಿಯೊಳಗೆ ಕೂಡಿ ಜಂಗಮ ರೂಪಾದಲ್ಲಿ ದ್ವಾದಶ ಭಾವಂಗಳೆಂಬ ದ್ವಾದಶ ದಳಂಗಳು ಪರಿಶುದ್ಧ ಮಾದುವು. ಇಚ್ಛಾಶಕ್ತಿಶಿವನೊಳಗೆ ಬೆರೆಯಲು ದಶೇಂದ್ರಿಯಂಗಳೆಂಬ ದಶದಳಂಗಳು ಪೂರ್ಣಮಾದವು. ಮಂತ್ರಶಕ್ತಿಗುರುವಿನಲ್ಲಿ ನೆರೆಯಲು ಷಟ್ಕರ್ಮಂಗಳು ಚೇತನ ಮಾದವು ಕ್ರಿಯಾಶಕ್ತಿ ಆಚಾರದೊಳಗೆ ಬೆರೆಯಲು ಆಶ್ರಮಧರ್ಮಂಗಳು ಸಾಂಗ ಮಾಯಿತ್ತು ಇಂತಿಪ್ಪ.ಆಶ್ರಮ ಧರ್ಮಕ್ಕೆ ಕರ್ಮವೇ ಕಾರಣವು. ಆ ಕರ್ಮಕ್ಕೆ ಇಂದ್ರಿಯಂಗಳೇ ಕಾರಣವು. ಆ ಇಂದ್ರಿಯಂಗಳಿಗೆ ಭಾವವೇ ಕಾರಣವು.ಆ ಭಾವಕ್ಕೆ ತತ್ವವೇ ಕಾರಣವು. ಆ ತತ್ವಕ್ಕೆ ಮಹಾಪ್ರಕಾಶವೇ ಕಾರಣವು ಆ ಮಹಾ ಪ್ರಕಾಶಕ್ಕೆ ತತ್ವವೇ ಮೂಲ ಆ ತತ್ವಕ್ಕೆ ಜಂಗಮವೇ ಮೂಲವು. ಆ ಜಂಗಮಕ್ಕೆ ಲಿಂಗವೇ ಮೂಲ. ಆಲಿಂಗಕ್ಕೆ ಗುರುವೇ ಮೂಲವು. ಅಂತಪ್ಪ ಗುರುವಿಗೆ ಆಚಾರವೇ ಮೂಲ ಆಚಾರಕ್ಕೆ ನಿವೃತ್ತಿಯೆ ಕಳೆ ಗುರುವಿಗೆ ಪ್ರತಿಷ್ಠೆಯೇ ಕಳೆ ಲಿಂಗಕ್ಕೆ ವಿದ್ಯೆಯೆ ಕಳೆ ಜಂಗಮಕ್ಕೆ ಶಾಂತಿಯೇ ಕಳೆ. ಪ್ರಸಾದಕೆ ಶಾಂತಾತೀತವೆ ಕಳೆ. ಮಹಕ್ಕೆ ಉತ್ತರವೇ ಕಳೆ. ಪೃಥ್ವೀ ಮೂಲವಾದ ಆಧಾರವೇ ಪಶ್ಚಿಮ ಜಲ ಮೂಲವಾದ ಸ್ವಾಧಿಷ್ಠಾನವೇ ಉತ್ತರ. ತೇಜೋ ಮೂಲವಾದ ಮಣಿ ಪೂರಕವೇ ದಕ್ಷಿಣ ವಾಯು ಮೂಲವಾದ ಅನಾಹತದೇ ಪೂರ್ವ ಸಕಲ ದಿಕ್ಕುಗಳಲ್ಲಿರ್ಪ ಸಕಲ ಚಕ್ರಂಗಳಂವ್ಯಾಪಿಸಿ ಆಕಾಶ ಮೂಲವಾಗಿ ಆಕಾಶದಂತೆ ವಿಶುದ್ಧ ಮಾಗಿರ್ಪುದೇ ವಿಶುದ್ಧಿಚಕ್ರವು. ಪೃಥ್ವೀಜಲಗಳೆರಡು ಸೃಷ್ಟಿ. ಅಗ್ನಿವಾಯುಗಳೆರಡು ಸ್ಥಿತಿ. ಆಕಾಶವೇ ಸಂಹಾರ ಇಂತಪ್ಪ ಸೃಷ್ಟಿಸ್ಥಿತಿ ಸಂಹಾರಂಗಳಂ ಮೀರಿರ್ಪ ಆತ್ಮನೇ ಹೃದಯ ಮಧ್ಯದೊಳಾಜ್ಞೇಯದಲ್ಲಿ ಮಹವಾಗಿ ಪ್ರಕಾಶಿಸು ತಿರ್ಪನು. ಆದೇ ತೂರ್ಯ ಮಿಕ್ಕವೆಲ್ಲ ಅವಸ್ಥಾತ್ರಯಂಗಳಾಗಿರ್ಪವು. ಪೂರ್ವ ಪಶ್ಚಿಮ ಚಕ್ರಂಗಳಲ್ಲಿ ಪೂರ್ವಪಶ್ಚಿಮ ರೂಪವಾಗಿ ಆದ್ಯಂತಗಳನನುಸರಿಸಿರ್ಪ ಕಾದಿಶಾಂತವ ಶಾಂತಂಗಳೇ ಬೀಜಗಳಾದವು. ಮೊದಲನನುಸರಿಸಿರ್ಪುದೇ ದಕ್ಷಿಣವು ಕಡೆಯನನುಸರಿಸಿರ್ಪುದೇ ಉತ್ತರವು. ಆದುದರಿಂದಕ್ಷಿಣೊತ್ತರಂಗಳಲ್ಲಿರ್ಪಮಣಿ ಪೂರಕ ಸ್ವಾಧಿಷ್ಠಾನಂಗಳಿಗೆ ಡಾದಿಫಾಂತ ಬಾದಿಲಾಂತವೇ ಬೀಜಂಗಳಾಗಿರ್ಪವು. ದಿಕ್ಕುಗಳಲ್ಲಿ ಕೋಣಗಳು ವ್ಯಾಪ್ತವಾಗಿರ್ಪಂತೆ ವ್ಯಂಜನಗಳಲ್ಲಿ ಸ್ವರಂಗಳು ವ್ಯಾಪ್ತವಾಗಿರ್ಪುದರಿಂ ವಿರುದ್ಧಿಗೆ ಷೋಡಶ ಸ್ವರಂಗಳೇ ಬೀಜಂಗಳಾಗಿ



ರ್ಪವು. ಅಂತ್ಯಕ್ಕೂ ಅಂತ್ಯವಾಗಿ ಅಮೃತಾರ್ಥವಂ ಕೊಡುತ್ತ ಪಂಚಾಕ್ಷರಪ್ರವಾಹಂಗಳಲ್ಲಿ ತಾನಿದಿರೇರಿ. ಅಂತರ್ಮುಖವಾಗಿ ಪವಿತ್ರಮಯವಾಗಿ ಸಕಲಮಂತ್ರ ಬೀಜಮಯವಾಗಿರ್ಪ ಹಂಕ್ಷಂಕಾರವೇ ಆಜ್ಞೇಯ ಬೀಜವಾಯಿತ್ತು. ಅಕ್ಷರಂಗಳು ಹೃದಯಮಧ್ಯದಲ್ಲಿ ಚಕ್ರಂಗಳನನುಸರಿಸಿ ಜಿಹ್ವಾ ಮುಖದಲ್ಲಿ ಸೃಷ್ಟಿಗೆ ಬರುವ ಹಾಗೆ ಪಂಚಭೂತಂಗಳನನುಸರಿಸಿ ಪಂಚವರ್ಗಗಳಾಗಿ ಸಪ್ತವರ್ಣಂಗಳು ಸಪ್ತಧಾತುಗಳಾಗಿ ಷೋಡಶಸ್ವರಂಗಳು ಅವಯವಂಗಳಾಗಿ ಆ ಹಂಕ್ಷಂವೇ ಜೀವಪರಮರಾಗಿ. ಸಕಾರವು ಚೈತನ್ಯ ರೂಪವಾಗಿರ್ಪುದು. ಹೃದಯದೇ ಪಿಂಡಾಂಡ ಜಿಹ್ವೆಯೇ ಬ್ರಹ್ಮಾಂಡ ಪಿಂಡಾಂಡ ದೋಳ್ + ಪಂಚಭೂತಂಗಳು ಸಮನಾಗಿರ್ಪಂತೆ ಜಿಹ್ವೆಯಲ್ಲಿ ಪಂಚವರ್ಣಗಳೂ. ಸಮಾನವಾಗಿರ್ಪವು. ಇಂತಪ್ಪ ಮೂರ್ತಿಯೇ ನಾದ ಪುರುಷನು ಇವಂಗೆ ಪ್ರಣವವೇ ಶಿಖಿಯು ಶಿವಾಯಾಕ್ಷರತ್ರಯಂಗಳೇ ಉಪವೀತವೂ ನವೇ ದಂಡಕಮಂಡಲಗಳೂ ಆಗಿರ್ಪವು ಇಂತು ಪ್ರಣವಪಂಚಾಕ್ಷರಿಯುಕ್ತ ಮಾದ ನಾದ ಪುರುಷನೇ ಪರಿಶುದ್ಧವಾಗಿ ಬ್ರಹ್ಮಸ್ವರೂಪವಾದ ವೇದಪುರುಷನಾಗಿ ತನು ಮನೋಭಾವಗಳಲ್ಲಿ ಸಂಚರಿಸುತ್ತಿಹನು. ಆಧಾರದಲ್ಲಾಚಾರ ರೂಪವಾಗಿರ್ಪ ಆಶ್ರಮವೇ ಅನಾಹತದಲ್ಲಿ ಜಂಗಮ ಪ್ರಕಾಶವಂಮಾಡಿತ್ತು ಸ್ವಾಧಿಷ್ಠಾನದಲ್ಲಿ ಗುರು ರೂಪವಾದ ಕರ್ಮವೇ ಮಣಿಪೂರಕದಲ್ಲಿ ಲಿಂಗಪ್ರಕಾಶವಂ ಮಾಡಿತ್ತು. ವಿಶುದ್ಧಿಯಲ್ಲಿ ಪ್ರಸಾದರೂಪ ವಾದ ತತ್ವವೇ ಆಜ್ಞೇಯದಲ್ಲಿ ಮಹಾಪ್ರಕಾಶವಂ ಮಾಡಿತ್ತು ಇಷ್ಟ ಪ್ರಾಣಮಧ್ಯದಲ್ಲಿರ್ಪ ಮಹವೇ ಸಹಸ್ರ ಮುಖವಾಗಿ ತೋರುತ್ತಿರ್ಪ ಭಾವ ಮಧ್ಯದಲ್ಲಿ ಪೂರ್ವಪ್ರಕಾಶವಾಗಿ ಎಲ್ಲವೂ ಒಂದೆಯಾಗಿ ತಾನೂ ಹೊಂದಿರ್ಪುದರಿಂ ಸಹಸ್ರದಳ ಕಮಲ ಮಧ್ಯದಲ್ಲಿರ್ಪ ಭಾವಲಿಂಗವಾಯಿತ್ತು. ಉನ್ಮೀಲನಾಪೆಗಳಿಂ ನಾಸಿಕಾಗ್ರವ ನೀಕ್ಷಿಸಿದಲ್ಲಿ ಬ್ರಹ್ಮಸ್ಥಾನ ಗೋಚರವಾಗಿ ಅಲ್ಲಿಭಾವ ಸಹಸ್ರ ಭೇದವಾಗಿ ಬ್ರಹ್ಮವಂ ವಿಚಾರಿಸುವದರಿಂ ಸಹಸ್ರ ದಳಕಮಲಕ್ಕೆ ಶಿರಸ್ಸೇ ಸ್ಥಾನವಾಯಿತ್ತು ಹೃದಯ ಮಧ್ಯಕ್ಕೂ ಬ್ರಹ್ಮಸ್ಥಾನಕ್ಕೂ ಏಕವಾಗಿ ಜ್ಯೋತಿರ್ಮಯವಾಗಿ ಪ್ರಕಾಶಿಸುತ್ತ ತತ್ವದಿಂ ತೋರುವ ಮಹಪ್ರಕಾಶವನ್ನು ಭಾವಹಸ್ತದಲ್ಲಿ ಗ್ರಹಿಸಿ ಭಾವ ಪೂಜೆಯಂ ಮಾಡುತ್ತಿರ್ಪುದೇ ಭಾವಲಿಂಗವು. ಶಿವನನ್ನು ಜ್ಞಾನ ಹಸ್ತದಲ್ಲಿ ಗ್ರಹಿಸಿ ಹೃತ್ಕಮಲ ಮಧ್ಯದಲ್ಲಿ ಜಂಗಮ ರೂಪದಲ್ಲಿ ಧ್ಯಾನ ಪೂಜೆಯಂ ಮಾಡುತ್ತಿರ್ಪದೇ ಪ್ರಾಣ ಲಿಂಗವು. ಆಚಾರವಿಡಿದು ಗುರು ಮುಖದಲ್ಲಿ ಗ್ರಹಿಸಿ ಕರ್ಮ ಪೂಜೆಯಂ ಮಾಡುತ್ತಿರ್ಪುದೇ ಇಷ್ಟ ಲಿಂಗವು ಇಂತಪ್ಪ ಇಷ್ಟಲಿಂಗವಂ ಪೂಜಿಸುವ ಸ್ಥೂಲವೇ ವಿಶ್ವ. ಪ್ರಾಣಲಿಂಗವಂ ಪೂಜಿಸುವ ಸೂಕ್ಷ್ಮ. ಶರೀರವೇ ತೈಜಸ ಭಾವಲಿಂಗವಂ ಪೂಜಿಸುವ ಕಾರಣ ಶರೀರ ವೇಪ್ರಾಜ್ಞ. ಪ್ರಾಜ್ಞಕ್ಕೆ ಯೋಗವೇ ಮುಖ. ಈ ಮುಖದಲ್ಲಾ ಲಿಂಗಕ್ಕರ್ಪಣವಾಗುವುದು. ಕೈ ನಿಜಸಕ್ಕೆ ಭೋಗವೇ ಮುಖ. ಈ ಮುಖದಲ್ಲಾ ಲಿಂಗಕ್ಕರ್ಪಣವಾಗುತ್ತಿಹುದು. ವಿಶ್ವಕ್ಕೆ

ತ್ಯಾಗವೇ ಮುಖ. ಈ ಮುಖದಲ್ಲಾ ಲಿಂಗಕ್ಕರ್ಪಣವಾಗುವುದು. ಆಚಾರ ಗುರು. ಶಿವ. ಚರ. ಶೇಷಮಹ ಸ್ವರೂಪವಾದ ಇಷ್ಟಲಿಂಗವೇ ಪ್ರಾಣ ಲಿಂಗವಾಗಿ ಒಳಗೂ ಹೊರಗೂ ತಾನೇ ಪ್ರಕಾಶಿಸಿ ಭಾವದಲ್ಲೆಲ್ಲವೂ ಒಂದೆಯಾಗಿ ತೋರುತ್ತಿರ್ಪ ಪರಿ ಪೂರ್ಣಾನಂದಮಯ. ನಿರ್ವಾಣ ಸುಖವನೆನಗಿತ್ತು ಸಲಿಹಾ. ಮಹಾಘನ ದೊಡ್ಡ ದೇಶಿಕಾರ್ಯ ಗುರು ಪ್ರಭುವೇ.

(ಮುಮ್ಮಡಿ ಕಾರ್ಯೇಂದ್ರ) (ಪುಟ ೧೧೪ ರಿಂದ ೧೧೯ ರವರೆಗೆ)

(ಮುಂದುವರೆಯುವುದು) ಇತಿ ಶರಣ ಸೇವಕ. ಮತ್ತು ಕಿಂಕರ ನೋಡಿ ಈ ಲೇಖನ ಬಹಳ ಸ್ವಾರಸ್ಯವಾಗಿದೆ. ಆಧಾರಾತಿ ಚಕ್ರಗಳು (ದಳಗಳು. ಎಷ್ಟು) ಯಾವ ಯಾವ ಪ್ರಣವಗಳು. ಯಾವ ಯಾವ ಶಕ್ತಿ. ಭಕ್ತಿ ಮುಖ ಪ್ರಸಾದ ಎಲ್ಲವೂ ವಶದವಾಗಿ ಶರಣರು ತಿಳಿಸಿದ್ದಾರೆ. ಇದನ್ನು ಅನೇಕ ಸಾರಿ ಓದಿ ಓದಿ ಮನನ ಮಾಡಿಕೊಳ್ಳಬೇಕು, ಮತ್ತು ಜೀವನ ಸಾರ್ಥಕ ಮಾಡಿಕೊಳ್ಳಬೇಕು. ನೋಡಿ ಈಗ ನಾನು ಅನೇಕ ಹಳ್ಳಿ ಗ್ರಾಮಗಳನ್ನು ತಿರುಗಿನೋಡುತ್ತಾ ಇದ್ದೇನೆ. ಇಂಥಾ ಧಾರ್ಮಿಕ ಪತ್ರಿಕೆಗಳನ್ನು ಜನ ತರಿಸುವುದೇ ಇಲ್ಲ. ಊರಿಗೆ ಒಂದಾದರೂ ಬರಬೇಕಲ್ಲ ಇಲ್ಲವೇ ಇಲ್ಲ. ಲಿಂಗಾಯತ ಧರ್ಮದ ಪ್ರಕಾರ ಪ್ರತಿಯೊಬ್ಬರೂ ದಿಕ್ಷಾ ಬದ್ಧರಾಗಬೇಕು ಆದು ಇಲ್ಲ. ಶರೀರದ ಮೇಲೆ ಲಿಂಗಗಳೇ ಇಲ್ಲ. ಯಲ್ಲಾ ಭವಿಗಳು. ಭವಿಗಳ ಮನೆಯಲ್ಲಿ ಉಂಡರೆ ನರಕ ಮತ್ತು ಶ್ವಾನಗರ್ಭದಲ್ಲಿ ಬರಬೇಕಾಗುತ್ತದೆ. ಅಂತ ಶಾಸ್ತ್ರ ಸಾರಿ ಸಾರಿ ಹೇಳುತ್ತಾ ಇದೆ. ಅದಕ್ಕೆ ಚನ್ನಬಸವೇಶ್ವರ ದೇವರ ವಚನ ನೊಸಲಲೊಂದು ಕಣ್ಣುಳ್ಳವನಾದಡೆ ಆಗಲಿ ಅವನ ಅಂಗದ ಮೇಲೆ ಲಿಂಗ ಸಂಬಂಧವಿಲ್ಲದಿರೆ. ಅವನ ಮನೆಯಲ್ಲಿ ಮಾಡಿದ ಪಾಕ ಶ್ವಾನನ ಮಾಂಸಕ್ಕೆ ಸರಿ ಎಂದುದಾಗಿ ಬಲ್ಲವರೊಲ್ಲರು. ಶಿವ ಭಕ್ತಕಲ್ಲದವರ ಮನೆಯಲ್ಲಿ ಉಂಡರೆ ಜನ್ಮ ಜನ್ಮಾಂತರ ಶ್ವಾನನ ಯೋನಿಯಲ್ಲಿ ಬಪ್ಪುದು. ಎಲೆ ಶಿವನೆ ನೀವಿಲ್ಲಿದವರ ಮನೆಯಲ್ಲಿ ತಿಂಬವಂಗೆ ಎನ್ನಮನ ಸೊಗಸದಯ್ಯೊ ಕೂಡಲ ಚನ್ನ ಸಂಗಮದೇವಾ" (ಚ|| ಬ|| ವಚನ ಆರ್. ಶಿ. ಹಿರೇಮಠ ವಚನ ೩೭೫) ಎಲ್ಲೆಲ್ಲಿಯೂಲಿಂಗಗಳೇ ಇಲ್ಲ. ನಾವೆಲ್ಲರೂ ಮತ್ತು ಎಲ್ಲಾ ಸ್ವಾಮಿಗಳೂ ಈ ಇಷ್ಟಲಿಂಗ ಧರಿಸುವ ಆಂದೋಲನ ನಡೆಯಿಸೋಣ. ಇಲ್ಲದಿದ್ದರೆ ಈ ಲಿಂಗವಂತ ಧರ್ಮ ಹೇಳ ಹೆಸರಿಲ್ಲದಂತೆ ನಶಿಸಿ ಹೋಗುವುದರಲ್ಲಿ ಸಂದೇಹವಿಲ್ಲ.

ಆಜೀವ ಚಂದಾದಾರರು

ಶ್ರೀ ಎಸ್. ಜಿ. ಹಳಕಟ್ಟಿ

ಮಹಾತ್ಮಾ ಬಸವೇಶ್ವರ ನಗರ (ಕೊಪ್ಪದಕೆರೆ) ಧಾರವಾಡ

## ಶಿವಲಿಂಗವು

ಸಂಗ್ರಾಹಕರು:- ಶ್ರೀ ಮೃತ್ಯುಂಜಯ ವ್ಹಿ. ಅಂಗಡಿ
ಕಡಕೋಳ. ತಾ. ಸವಣೂರ. ಜಿ. ಧಾರವಾಡ,

[ಶ್ರೀಯುತರಲ್ಲಿ ಶರಣೆ ನಿಲಲೋಚನೆಯು ಹಾಡಿದ ಕಾಲಜ್ಞಾನದ ವಚನದ ಪುಸ್ತಕದಿಂದ ಸಂಗ್ರಾಹಕರು ಈ ಲೇಖನವನ್ನು ಬರೆದು ಕಳಿಸಿರುವರು. ಪುಸ್ತಕದ ಮೇಲಿನ ಪಾನುಗಳು ಜೀರ್ಣವಾಗಿ ಕಳೆದು ಹೋದುದರಿಂದ ಸಂಪಾದಕರ ಬಗ್ಗೆ ಮಾಹಿತಿ ದೊರೆಯುವದಿಲ್ಲ ಸಂಪಾದಕರಿಗೆ ಕೃತಜ್ಞತೆಯೊಂದಿಗೆ ಈ ಲೇಖನವನ್ನು ಪ್ರಕಟಿಸಲಾಗಿದೆ. ಗೌ ಸಂಪಾದಕರು]

"ನೋಟವೇ ಪ್ರಾಣವಾಗಿ ಎಂದಿಪ್ಪೆನೋ ! ಕೂಟವೇ ಪ್ರಾಣವಾಗಿ ಎಂದಿಪ್ಪೆನೋ ! ಕೂಡಲ ಸಂಗಮದೇವಾ ಎನ್ನ ಅಂಗವಿಕಾರವಳಿದು" !! ಜೀವ ಜಾಲವೆಲ್ಲ ಪ್ರಕೃತಿಯ ಹಂಗಿನಲ್ಲಿ ಸಿಕ್ಕು ಭವ-ಭವಾಂತರಗಳಲ್ಲಿ ಎಂದಿನಿಂದ ತೊಳಲುತ್ತಿದ್ದಾಗ್ಯೂ, ಅಪ್ರಾಕೃತ ವೃತ್ತಿಯ ಕಡೆಗೆ ಅವುಗಳ ದೃಷ್ಟಿಯು ತಿರುಗಲೊಲ್ಲದು. ಅನಾದಿ ಕರ್ಮವಶದಿಂದ ನಾನಾ ಯೋನಿಗಳಲ್ಲಿ ಸಂಚರಿಸಿ, ಕಡೆಗೆ ಮಾನವ ಜನ್ಮವನ್ನು ಹೊಂದಿದ ಜೀವಾತ್ಮನು, ತನ್ನ ಜನ್ಮವನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದಾದರೆ, ಸೃಷ್ಟಿಯ ಸ್ವಾಭಾವಿಕ ಕ್ರಮದಲ್ಲಿ ಅಷ್ಟೊಂದು ವಿಕಾರದ ಗಡಬಿಡಿಯು ಉಂಟಾಗುವ ಸಂಭವವಿಲ್ಲ ! ಶ್ರೇಷ್ಠವಾದ ಮಾನವ ಜನ್ಮ ಹೊಂದಿ, ಅದರ ದುರುಪಯೋಗವನ್ನು ಮಾಡಿಕೊಳ್ಳುತ್ತಿರುವ ಆತ್ಮರುಗಳಿಂದಲೇ ಲೋಕದಲ್ಲಿ ಇಷ್ಟೊಂದು ವಿಕಾರವು ಹೊತ್ತೆದ್ದಿರುವದು. ಈ ವಿಕಾರವು ಸೃಷ್ಟಿಯ ಸ್ವಾಭಾವಿಕ ಕ್ರಮದಲ್ಲಿ ವ್ಯತ್ಯಾಸವನ್ನು ಮಾಡುತ್ತಿರುವದರಿಂದ, ಇಲ್ಲದ ತೊಂದರೆಗಳನ್ನು ಮೈ ಮೇಲೆ ತಂದುಕೊಳ್ಳುವುದಲ್ಲದೆ, ತನ್ನ ಸುತ್ತಲಿದ್ದ ಪ್ರಾಣಿಗಳನ್ನು ಸಂಕಟಗಳಿಗೀಡುಮಾಡುವನು. ಅದರಿಂದ "ಹೇಸಿಯ ಪಾಪವು ಸಂನ್ಯಾಸಿಗೆಂ"ಬ ನಾಣ್ಣುಡಿಯುಂಟಾಗಿರುವದು. ಮಾನವನು ಸ್ವಾಭಾವಿಕವಾದ ತನ್ನ ಮಾನವ ವೃತ್ತಿಯನ್ನಷ್ಟೇ ಕಾಯ್ದುಕೊಂಡು ಹೋಗುವದರಿಂದ ಲೋಕಕ್ಕೆ ಎಷ್ಟೇ ಅನಿಷ್ಟವು ಪರಿಹರಿಸಿ ಪರಮಾತ್ಮನು ಜೀವ ಜಾಲವನ್ನೆಲ್ಲ ಸ್ವಾಭಾವಿಕವಾಗಿ ಅನುಗ್ರಹಿಸುತ್ತಿರುವ ಹಿತವು ಒಡೆದು ತೋರಬಹುದು. ಅದೇ, ಮಾನವ ಕೋಟಿಯೇ ತನ್ನ ನಿಜವನರಿತು ತದನುಸಂಧಾನದಲ್ಲಿಯೇ ವರ್ತಿಸ ಹತ್ತುವದರಿಂದ ಎಂಥ ಸುಪರಿಣಾಮ ಉಂಟಾದೀತು ಅದನ್ನು ಸಾವಿರಾರು ನಾಲಿಗೆಗಳುಳ್ಳ ಮಹಾಶೇಷನಿಗೂ ಕೊಂಡಬಣ್ಣಿಸಲು ಅಸಾಧ್ಯವು! ಅಂತೇ ಹಿಂದಿನ ಶರಣರು ಕಾಲಜ್ಞಾನದಲ್ಲಿ ಮುಂದೆ ನಾವು ಧರೆಗೆ ಮತ್ತೊಮ್ಮೆ ಮರಳಿ ಬಂದ ಬಳಿಕ ಧರೆಯು ಭೂಕೈಲಾಸವಾಗುವದೆಂದು ನಾನಾ ವಿಧವಾಗಿ ಹಾಡಿಕೊಂಡಿರುವರು. ವಾಚಕರ ಅವಲೋಕನಾರ್ಥವಾಗಿ ಶ್ರೀ (ಶರಣೆ) ನೀಲಲೋಚನೆಯು ಹಾಡಿದ ಕಾಲ ಜ್ಞಾನವನ್ನು ಕೆಳಗೆ ಕೊಟ್ಟಿರುವದು.

ಸುವ್ವಿ ಬಾ ಲಿಂಗಯ್ಯ । ಸುವ್ವಿ ಬಾ ಸಂಗಯ್ಯ ।
ಸುವ್ವಿ ಬಾ ಚೆನ್ನಬಸವಯ್ಯ ಸುವ್ವಿ ॥ಪ॥

ಸಿಕ್ಕ ಶಕ್ಕಯ್ಯಗಳ ಒಕ್ಕ ಪ್ರಸಾದವು । ಅಕ್ಕನಾಗಮ್ಮನ ಶಿಶುವಾದ ಸುವ್ವಿ ॥
ಚೆನ್ನನ ಒಕ್ಕಣೆಪೆಸವ್ವ ಸುವ್ವಿ ॥೧॥

ಆಗ ನಿಗಮವಲ್ಲ ಯೋಗಸಾಧನೆಯಲ್ಲ । ಸಾಗರ ಪುರಾಣ ಕಥೆಯಲ್ಲ ಸುವ್ವಿ ॥
ಕಾಲಜ್ಞಾನ । ಈಗ ಅಲ್ಲಮನ ಕೃಪೆಯಿಂದ ಸುವ್ವಿ ॥೨॥

ತಮ್ಮ ಚೆನ್ನಬಸವ ನಿಮ್ಮವಾಕ್ಯಗಳನು । ಒಮ್ಮನದಿಂದ ಪೇಳ್ವಸುವ್ವಿ ॥
ಮುಂದಣ ಧರ್ಮದುನ್ನತಿಯ ಕಥನವ ಸುವ್ವಿ ॥೩॥

ಎಂದು ನುಡಿಗೇಳುತಾನಂದ ಸಂವತ್ಸರವು । ಎಂದು ಬಂದೀತೆಂದು ಹರುಷದೆ
ಸುವ್ವಿ ॥ ನೆನೆಯಲು । ನಂದದಿತೆರಳಿಬರುವನು ॥೪॥

ಬರ್ಪಸಂಭ್ರಮಗಳನೇನೆಂಬೆ ತ್ರಿಪುರಕೆ । ಕಪ್ಪುಗೊರಲನು ನಡೆದಂತೆ ಸುವ್ವಿ ॥
ಒಪ್ಪಲು । ಇಪ್ಪತ್ತುನೂರುದೀವಟಿಗೆಸುವ್ವಿ ॥೫॥

ದಾರೀಲಿ ಬರುವಾಗ ಊರೂರ ಮುಂದೆ । ನಾರೇರು ಎದುರುಗೊಂಡಾರು
ಸುವ್ವಿ ॥ ಮುತ್ತಿನ ಹಾರವನವರಿಗೆ ಕೊಡುವನು ಸುವ್ವಿ ॥೬॥

ಉಜ್ಜನಿ ಮಹಾಕಾಳಿ ವಜ್ರವೈಢೂರ್ಯದ । ಸಜ್ಜೆಯತಂದು ಉಲುಪೆಯ
ಸುವ್ವಿ । ಕೊಟ್ಟಾರು ಉಜ್ವಲ ಚೆನ್ನಬಸವಂಗೆ ಸುವ್ವಿ ॥೭॥

ರಾಜ ಬೀದಿಯಲಿ ಮಾರ್ಜನವ ಮಾಡಿಯಾರು ।
ತೇಜವು ಪ್ರಭುವಿನ ಕರುಣಾದೆ ಸುವ್ವಿ ।
ಹೆಚ್ಚಲು । ಉಜ್ವಲ ಭಕ್ತೀಲಿ ಮೂಲೋಕ ಸುವಿ ॥೮॥

ಮೂಲೋಕ ಜನಗಳು ಶೀಲವಂತರಹರು । ಕಾಲಾನುಕಾಲ ಶಿವಪೂಜೆಸುವ್ವಿ ॥
ಮಾಡ್ಯಾರು ಬಾಲೇರು ಮೊದಲಾಗಿ ಒಮ್ಮನದಿ ಸುವ್ವಿ ॥೯॥

ಶಿವಭಕ್ತರಾದಾರು ಕವಿಗಳು ಹೆಚ್ಚ್ಯಾರು । ಭುವನದಿ ಧರಿಸುತ ಲಿಂಗವ
ಸುವ್ವಿ ॥ ತುರುಕರು ಶಿವಭಕ್ತರಾಗಿ ನಡೆದಾರು ಸುವ್ವಿ ॥೧೦॥

ನಂದಿವಾಲವು ಮತ್ತೆಕೆಂದಾವರೆ ಸಂಪಿಗೆ । ಮಂದಾರ ಕರಿಯಮಲ್ಲಿಗೆಯ
ಸುವ್ವಿ ॥ ಹೆದ್ದುಂಬೆ । ಚಂದಿರಧಾರೆ ಕುಂಕುಮವ ಸುವ್ವಿ ॥೧೧॥

ಇಂತಪ್ಪ ಪುಷ್ಪವ ಸಂತತಕೊಯ್ತಂದು । ಕಂತುಹರನ ಶಿವಪೂಜೆ ಸುವ್ವಿ ॥
ಮಾಡ್ಯಾರು ಸಂತಸವನಾಂತು ವೈಭವದಿ ಸುವ್ವಿ ॥೧೨॥

ಸತ್ಯದ ನಡೆನುಡಿ ಭಕ್ತಿಯ ಮಾರ್ಗವು ॥ ತತ್ವವಿಡಿದು ನಡೆವರು ಸುವ್ವಿ ॥
ಲೋಕವು । ಇತ್ತಲು ಚೆನ್ನಬಸವಯ್ಯ ಸುವ್ವಿ ॥೧೩॥



ಶಿರದಲ್ಲಿ ಮಂತ್ರವು ಕರದಲ್ಲಿ ಶಿವಲಿಂಗ । ಉರುದೊಳು ಗುರುಧ್ಯಾನ ನೆಲಿಸಲು
ಸುವ್ವಿ ॥ ನೋಡಿದರೆ ಗುರುಲಿಂಗ ದೊಳಗೆ ಬೆರತಂತೆ ತನ್ನೊಳಗೆ ಪ್ರಭುದೇವ
ನೊಳು ತಾನು । ನನ್ನಿಯಾಗಿರ್ಪರು ಬಿಡದೆಲ್ಲ ಸುವ್ವಿ ॥೧೪॥

ಎಂದಿಗೆ ಬಂದಾನೆಂದು ಸಂದೇಹಗೊಳಬೇಡಿ । ನಂದನಕೆ ಎಂಟುವರುಷಕೆ
(ವಿಕಾರಸಂವತ್ಸರದಲ್ಲಿ ಉರಿಚಿಕ್ಕಿಮೂಡಿತ್ತು) ಸುವ್ವಿ ॥
ಉರಿಚಿಕ್ಕಿ । ಮುಂದೊಂದು ಬಿಡದೆ ಮೂಡೀತು ಸುವ್ವಿ ॥೧೫॥

ನೆಟನೆ ಚುಕ್ಕಿಯು ಮೂಡಲು ಚೆನ್ನಬಸವ । ಪಟ್ಟಕ್ಕೆ ತಾನು ಬರುವನು
ಸುವ್ವಿ ॥ ಎಂದೆನುತ । ಇಟ್ಟಾಳು ಲೋಕಕೆ ಮುಂಡಗಿಯ ಸುವ್ವಿ ॥೧೬॥

ಸಾರುತಬರುತದೆ ಸಟೆಯಲ್ಲ ಶಿವನಾಣೆ । ಸಾರಿಡಂಗುರವ ಹೊಯ್ಸ್ಯಾರು
ಸುವ್ವಿ ॥ ಚೆನ್ನಬಸವ । ಕಾರಣದ ಕಥೆಗೆಕೈವಲ್ಯ ಸುವ್ವಿ ॥೧೭॥

ಐದು ಅಕ್ಷರವಿಡಿದು ಐದುಗತಿಯನು ಹೇಳಿ । ಐದು ಮುಖದನ ಕೃಪೆಯಿಂದ
ಸುವ್ವಿ ॥ ಶಿವ ಭಕುತಿ । ಸಾಧ್ಯವಪ್ಪುದು ಜಗಕೆಲ್ಲ ಸವ್ವಿ ॥೧೮॥

ಸುರಿವವು ಬಯಸದೆ ಫಲಗಳು ತಾವಾಗಿ । ಗುರುಸಿದ್ಧ ದೇವನ ಕೃಪೆಯಿಂದ
ಸುವ್ವಿ ॥ ಧರೆಯಲ್ಲ ಗುರುರಾಜ್ಯವಾಗಿ ಸುಖ ಶಾಂತಿ ಸುವ್ವಿ ॥೧೯॥

ಮಾನವನು ತನ್ನ ಮಾನ ವೃತ್ತಿಯನ್ನು ಮೀರಿ, ಧರ್ಮವರಿತೂ, ಆ ಧರ್ಮದ ನುಡಿಗಳನ್ನೆಲ್ಲ ತನ್ನ ತನ್ನ ಹಿತವನ್ನು ಸಾಧಿಸುವ ಮೋಸದ ಕೃತಿಗಳಿಸಿ, ಲೋಕಕ್ಕೆ ಅನಿಷ್ಟ ವೃತ್ತಿಯ ಕಂಟಕಾಸುರನಾಗಿ, ಧರೆಯನ್ನು ಕುಕರ್ಮಯೋಗ ದಿಂದ ಯಮ ಲೋಕವನ್ನಾಗಿ ಮಾಡಿ ಬಿಟ್ಟಿರುವನು. ಸತ್ಯ ಶರಣರು ತಾವು ಪ್ರಕಟವಾಗಲು ಮೊನ್ನಿನ ಆನಂದದಿಂದ ಯುದ್ಧ, ಬರ, ಪಿಡುಗು, ಮುಂತಾದವುಗಳ ಭಾಧೆಯಿಂದ ಮಾನವನ ವಿಕಾರವನ್ನೂ ಆ ವಿಕಾರದಿಂದುಟಾದ ರಾಡಿಯನ್ನೂ ಒಂದೇ ಸವನೆ ತೊಳೆದು ಭೂಮಿಕೆಯನ್ನು ತಯಾರು ಮಾಡುತ್ತಿರುವರು. ಈ ಕಾರ್ಯದಲ್ಲಿ ಏಷ್ಟೋ ಶರಣರು ತಮ್ಮ ಕೃತಿಗಳಿಂದ ದೊಡ್ಡವರಾಗಿ ತೋರಿದರೂ ವಿಕಾರದ ವರ್ಗವು ತನ್ನ ಕಲ್ಯಾಣ ಕರ್ತರನ್ನೇ ಪ್ರತಿಬಂಧಿಸುವ ಕಾರ್ಯದಲ್ಲಿ ಯತ್ನಿಸುತ್ತಿರುವುದು. ಮೂರುವರೆ ಮೊಳದ ಶರೀರವನ್ನೂ ಆ ಶರೀರದ ಕಾರ್ಯ ಗಳನ್ನೂ, ಪ್ರತಿಬಂಧಿಸುವದರಿಂದ ತಮ್ಮ ಕಾರ್ಯವು ಗೆದೆಯುವದೆಂದು ಇದರ ಧೃಡ ಭಾವನೆಯು. ಆದರೆ ಸತ್ಯ ಶರಣರ ನಿಜಯೋಗ್ಯತೆಯು ವಿಕಾರದಿಂದಾದ ಮಬ್ಬಾದ ಜಂಗುಳಿಗೇನು ಗೊತ್ತು ! ಪ್ರತಿಯೊಬ್ಬ ಶರಣನು ನಿಜದ ಅನುಸಂಧಾನ ದಿಂದ ಪರವಸ್ತುವಿನ ಕೂಡ ಪರವಸ್ತುವಾಗಿ ಲೋಕದ ತುಂಬ ಇರಬಲ್ಲರು.

ಪ್ರಾಕೃತ ಸೃಷ್ಟಿಯಲ್ಲಿಯೇ ತನ್ನ ಹೆಚ್ಚಳವನ್ನು ಹೊಂದುವದಕ್ಕಾಗಿಯೇ ಹರಿದಾಡಿ ಆದರ ಒಡೆತನವನ್ನು ಹೊಂದಿದವರಿಗೆ ಇದುಗೊತ್ತಾಗಲಾರದು. ಲೋಕದವರ ಕೂಡ ಲೋಕದವರಂತೆ ಕಾಣಿಸಿಕೊಂಡು ಲೋಕೋಪಕಾರವನ್ನು ಗೈಯುವ ನಿಮಿತ್ತ್ಯದಿಂದ ಹೊಂದಿದ ಪ್ರಕೃತಿಯಂಶವೆನಿಸಿದ ತಮ್ಮ ಜಡ ತನುಗಳ್ನು, ಅವುಗಳ ಹಂಗು ಹರಿದೇ ಅವರ ಕೈಯ್ಯಲ್ಲಿ ಕೊಟ್ಟು ಬಿಟ್ಟಿರುವರು. ಆ ತಮ್ಮ ವಶವರ್ತಿಯಾದ ಜಡತನುಗಳನ್ನು ಪರಿಪರಿಯಾಗಿ ಪೀಡಿಸುವದರಿಂದ, ಒಡೆತನನ್ನು ಹೊಂದಲಿಕ್ಕೆ ಕಾರಣವಾದ ಪುಣ್ಯವನ್ನೇ ಹಾಳು ಮಾಡಿಕೊಳ್ಳುತ್ತಿರುವವೆಂಬ ಅರುವು ಅವರ ಕನಸು ಮನಸಿನಲ್ಲಿಯೂ ಕೂಡ ಬರಲೊಲ್ಲದು, ಇಷ್ಟಾದರು ಕಾಡುವವನ ಕಾಡಬೇಕೆಂಬ ಭಾವನೆಯು,ಅವರಪೀಡೆಗೊಳಪಟ್ಟ ಆ ಸತ್ಯಶರಣರಲ್ಲಿ ಎಷ್ಟು ದಿವಸ ಹುಡುಕಿ ನೋಡಿದರೂ ಒಂದು ರವಿಯಷ್ಟು ಕೂಡ ದೊರೆಯದು. ವಿಕಾರಿಗಳ ವಿಕಾರವನ್ನು ನಾಶ ಮಾಡುವ ನಿಜವಾದ ಶಿಕ್ಷಣದ ಮಾರ್ಗವೇ ಇದಾಗಿರುವದರಿಂದ, ತಮು ಶರೀರಗಳ ಹಂಗು ತೊರೆದು, ಆದನ್ನು ಆ ಒಡೆಯರ ಸ್ವಾಧೀನ ಮಾಡಿರುವರು. ಸತ್ಯಶರಣರು ತಮ್ಮ ಅಗಾಧವಾದ ಮಹಿಮೆಯಿಂದ ವಿಕಾರಿಗಳನ್ನು ಅವರವರ ಜಡ ತನುಗಳಿಂದ ಅಗಲಿಸಲು ಒಂದು ಕ್ಷಣ ಹೊತ್ತು ಹತ್ತುವದಿಲ್ಲ .ಆದರೆ ಅವರು ವಿಕಾರಿಗಳ ಜಡವಾದ ಸೃಷ್ಟಿಗೆ ಬುದ್ಧಿಗಲಿಸುವಷ್ಟು ತಿಳಿಗೇಡಿಗಳಲ್ಲ ! ಏನು ಮಾಡುವವೆಲ್ಲ ಆ ಜಡ ಸೃಷ್ಟಿಯಲ್ಲಿ ವಾಸಮಾಡಿಕೊಂಡಿರುವವು. ಆ ಆತ್ಮರ ಮನೆಗಳನ್ನು ಕೆಡಿಸುವದರಿಂದ ಅವುಗಳಿಗೆ ಬುದ್ಧಿಗಲಿಸಿದಂತೆ ಆಗಲಿಲ್ಲ ! ಜಡ ಸೃಷ್ಟಿಯ ಹೊರತಾ ಆತ್ಮರು ಶಿಕ್ಷಣಕಾರ್ಯಕ್ಕೆ ಅರ್ಹರಾಗುವದಿಲ್ಲ ! ಬಡಕೊಂಡ ದೆವ್ವಗಳನ್ನು ಮಂತ್ರಯೋಗದಿಂದ ಬಿಡಿಸಬಹುದು. ಆದರೆ ಅವು ಯಾವ ಆಶೆಯನ್ನು ಕಟ್ಟಿಕೊಂಡು ಪಿಶಾಚಜನ್ಮವನ್ನುಎತ್ತಿರುವವೋ, ಅವುಗಳನ್ನು ಬಿಡಿಸಲಿಕ್ಕೆ ಆಗುವದಿಲ್ಲಿ ಅಂತೆ ಅವುಗಳ ಆಶೆಗೆ ಆಹಾರವಿಟ್ಟು ಕಳಿಸಬೇಕಾಗುವದು. ಆತ್ಮನ ಉದ್ಧಾರವು ಜಡವಾದ ಮಾನವ ಸೃಷ್ಟಿಯ ಸಂಬಂಧದಿಂದಲೇ ಆಗುತ್ತಿರುವದರಿಂದ, ಆ ಸೃಷ್ಟಿಯ ಸಂಬಂಧವನ್ನು ಹರಿಸಬೇಕೆಂಬ ಕುಕಲ್ಪನೆಯು, ವಿಕಾರದ ಮೊತ್ತದಿಂದ ಮತ್ತರಾದ ಚಿತ್ತಗೇಡಿಗಳಿಗಲ್ಲದೆ ಸತ್ಯ ಶರಣರಲ್ಲಿ ಎಂದೂ ಬಾರದು. ಏರಿಕೆಯ ಬೇನೆಯ ರೋಗಿಗೆ ವೈದ್ಯನು, ಮೊದಮೊದಲು ಆ ಬೇನೆಯ ಏರಿಕೆಯ ಕಸುವು ಮುರಿಯುವವರಿಗೆ ಆ ಏರಿಕೆಯ ಸ್ಥಿತಿಗೆ ಅನುಕೂಲಿಸುವ ಔಷಧವನ್ನು ಕೊಟ್ಟು ಬೇಗನೆ ಅದರ ಕಸುವನ್ನು ಕುಂದಿಸಿ, ಬಳಿಕ ಇಳಿಕೆಯ ಔಷಧವನ್ನು ಪ್ರಯೋಗಿಸುತ್ತಿರುವಂತೆ ಸತ್ಯಶರಣರು ತಮ್ಮ ಯಾವ ಸತ್ಯವಾದ ಕೃತಿಗಳಿಂದ, ವಿಕಾರಿಗಳು ಮತ್ತಿಷ್ಟು ವಿಕಾರವು ತಲೆಗೇರಿದವರಾಗಿ ಮೈಮೇಲೆ ಬರುವರೋ ಅವುಗಳನ್ನೇ ಒಂದೇ ಸವನೆ ಮಾಡಿ ವಿಕಾರಿಗಳನ್ನು ಪಿತ್ತಿಗೆಬ್ಬಿಸಿ, ತಮ್ಮ ಒಡಲನ್ನು ಅವರ ವಿಕಾರದ ಕೃತಿಗೆ ಈಡು ಮಾಡಿ ಅವರ ವಿಕಾರದ ಕಸುವನ್ನು ಕುಂದಿಸಿ ಕಡೆಗೆ ಆ ಸತ್ಯವಾದ ಕೃತಿಗಳಿಂದಲೇ



ಎಳೆಗೆ ತರುವ, ಆ ಪರಮಾತ್ಮನ ಮೂಲ ಮಂತ್ರವನ್ನು ಪರಿಪೂರ್ಣವಾಗಿ ಅರಿತು ಅಟ್ಟುಂಡವರಾಗಿರುವರು.

(ತಾಸಾಂ ಮಾಹೇಶ್ವರೀ ಶಕ್ತಿಃ ಸರ್ವಾನು ಗ್ರಾಹಿಕಾ ಶಿವಾ ।)
(ಧರ್ಮಾನು ವರ್ತನಾ ದೇವ ಪಾಶ ಇತ್ಯುಪಚರ್ಯತೆ ॥)
(ಪರಿಣಾಮಯಲೇತಾಶ್ಚ ರೋಧಾಂತಂ ಕರ್ಕ-ಚಿತ್ವಿಪಾ ।)
(ಯದೋನ್ಮೀಲನ ಮಾಧತ್ತೆ ತದಾನು ಗ್ರಾಹಿ ಕೋಚ್ಯತೆ ॥)
(ಮೃಗೇಂದ್ರಾಗಮ)

ಶಿವಚೈತನ್ಯವು ಜಡವಾದ ಪ್ರಕೃತಿಯಲ್ಲಿ ಕಾರ್ಯ ಪ್ರವೃತ್ತಿಯನ್ನುಂಟು ಮಾಡುವದು. ಶಿವನ ಅನುಗ್ರಹದಿಂದಲೇ ಅಪ್ರಕೃತಿಯ ಕಾರ್ಯಗಳ ಉತ್ಪತ್ತಿ-ಸ್ಥಿತಿ- ಲಯ ತಿರೋಧಾನಾದಿಗಳು ತೋರುತ್ತಿರುವವು. ಆತ್ಮರುಗಳು ತಮ್ಮ ವಿಕಾರದ ಮಬ್ಬಿನ ಭರದಲ್ಲಿ ಈ ಸ್ವಾಭಾವಿಕ ಸೃಷ್ಟಿಯ ಕ್ರಮವನು ತಮ್ಮಿಚ್ಛೆಗನುಗುಣವಾಗಿ ಉಪಯೋಗಿಸಿ ಕೊಳ್ಳುವದರಿಂದ ಅವನ್ನೇ ಪಾಶವನ್ನಾಗಿ ಮಾಡಿಕೊಳ್ಳುವರು. ನಿಜವಾಗಿ ಆದು ಪಾಶವಲ್ಲ ಶಿವನ ಅನುಗ್ರಾಹಿಕೆಯು ಅದೇ ವಿಕಾರವು ಕುಂದಿ ನಿರ್ವಿಕಾರವು ತಲೆದೋರಿದಲ್ಲಿ ಅನುಗ್ರಾಹಿಕೆಯೇ ಅನುಗ್ರಾಹಿಕೆಯು.

ಇಂಥದ್ದೊಂದು ಶಿವನ ಅನುಗ್ರಹವೆನಿಸಿದ ಕ್ರಿಯಾ-ಜ್ಞಾನಗಳ ಸಾಮರಸ್ಯ ಯೋಗದಿಂದ ಕೂಡಿದ ಚೈತನ್ಯವು ಈ ಪ್ರಕೃತಿಯಲ್ಲಿದ್ದುದರಿಂದ ಆತ್ಮರ ಹೇಡದ ಗಡಿಗೆಗಳನ್ನು ಮಾಡುವ ಕುಂಬಾರನಾದ ಸೃಷ್ಟಿಕರ್ತ ಬ್ರಹ್ಮನ ಹೆಚ್ಚಳವು ! ಮತ್ತು ಆತ್ಮರ ಹೆಂಡದ ಗಡಿಗೆಗಳನ್ನು ಕಾಯುವ ಸೃಷ್ಟಿ ಪಾಲಕ ವಿಷ್ಣುವಿವ ಹೆಚ್ಚಳವು ! ಈ ಜಡ ಗಡಿಗೆಗಳನ್ನು ಒಡೆಯುವ ಕಟುಕನಾದ ಸೃಷ್ಟಿಸಂಹಾರಕ ರುದ್ರನ ಹೆಚ್ಚಳವು ಬ್ರಹ್ಮವಿಷ್ಣು-ರುದ್ರರೆಂಬ ತ್ರಿಮೂರ್ತಿಗಳು ಪ್ರಾಕೃತ ಇಷ್ಟಾರ್ಥವನ್ನು ಸಿದ್ಧಿಸುವ ಇಷ್ಟ ಮೂರ್ತಿಗಳಾಗಿರುವವು. ಪರಮಾತ್ಮನ ಶಕ್ತಿ ವಿಶಿಷ್ಟಾಂಶವಿಲ್ಲದೆ ತಮ್ಮ ಕಾರ್ಯವು ಏನೂಸಾಗಲಾರವೆಂಬವನ್ನು ಮರೆತು ಲೋಕವು. ಸ್ವಾಭಾವಿಕವಾಗಿ ತಮ್ಮ ಮರ್ಯಾದಿಸುತ್ತಿರುವ ಉಬ್ಬಿನಿಂದ ಕೊಬ್ಬಿದವರಾದ ಈ ತ್ರಿಮೂರ್ತಿಗಳೂ ಹೆಂಡದ ಗಡಿಗೇಗಳೇ ನಾವೇ ಎಂದು ಒಗೆದ ಆತ್ಮರುಗಳೂ, ಮಾಯಾಪಾಶಕ್ಕೆ ಒಳಪಟ್ಟವರಾದುದರಿಂದ, ಪ್ರಾಕೃತದ ಹಂಗು ಹರಿದು ಅಪ್ರಾಕೃತರಾದ ಶಿವಶರಣರು ಈ ತ್ರಿಮೂರ್ತಿಗಳನ್ನೂ, ಪಾಶಗೊಳಪಟ್ಟ ಪ್ರಾಕೃತ ಜೀವರನ್ನೂ ಎಂದೂ ಮರ್ಯಾದಿಸರು ಆದರೆ ಇವರನ್ನು ಪಾಶದಿಂದ ಬಿಡಿಸಬೇಕೆಂಬ ಪರವಸ್ತುವಿನ ಅನುಗ್ರಾಹಿಕೆಗೆ ಸರಿಯಾಗಿ ಲೋಕದವರಲ್ಲಿ ಅಂತಃಕರಣವುಳ್ಳವರಾಗಿರುವರು. ಇಂಥ ಸಹಜವಾದ ಅಪ್ರಾಕೃತಯೋಗವುಳ್ಳವರೇ ನಿಜ ಲೋಕಹಿತ ಸಾಧಕರು. ಪ್ರಾಕೃತರು ತಮ್ಮ ಪ್ರಾಕೃತಭಾವವನ್ನು ಹಿಂಗಿಸಿಕೊಳ್ಳಲು ಯತ್ನಿಸದೆ ಲೋಕಹಿತ

ಕಾರ್ಯದಲ್ಲಿ ಸೇರಿ, ತಮ್ಮ ಹೆಚ್ಚಳವನ್ನು ಪಡೆಯಬೇಕೆಂಬುವದು ನವಿಲು ಕುಣಿಯುವದೆಂದು ಬಕನೂ ಕುಣಿದಂತೆ ಯಾಗುವದು.

ಬ್ರಹ್ಮ-ವಿಷ್ಣು ಪದವಿಗಳನ್ನು ಹೊಂದಿ ತ್ರಿಮೂರ್ತಿಗಳೆಂದು ಹೆಸರು ಪಡೆದ ಲೋಕಪೂಜ್ಯರೂ ಸಹ, ತಮ್ಮ ನಿಜದ ಅರುಹಿನ ಅನುಸಂಧಾನದಿಂದಲೇ ಲೋಕ ಹಿತವನ್ನು ಸಾಧಿಸುವ ಅಧಿಕಾರವನ್ನು ಹೊಂದುವರಲ್ಲದೇ ಅವರಿಂದಲೂ ಸಾಧ್ಯವಲ್ಲ! ಲೋಕಹಿತ ಕಾರ್ಯವು ಗಡಿಗೆಗಳಲ್ಲಿಲ್ಲ ! ಆತ್ಮರುಗಳ ಜಡ ಸ್ಥಿತಿಯನ್ನು ಹಿಂಗಿಸುವದರಲ್ಲುಂಟು ತಮ್ಮ ಜಡತ್ವವನ್ನ ನೀಗಿಸಿಕೊಳ್ಳದವರು ಲೋಕವನ್ನೆತ್ತ ಉದ್ಧಾರ ಮಾಡುವರು ? ಅಂತೇ ಶ್ರೀ ಜಗದ್ಗುರು ಪ್ರಭು ದೇವರು ತಮ್ಮ ಒಂದು ವಚನದಲ್ಲಿ ಇವರ ಬಗ್ಗೆ ಹೇಗೆ ಹಾಡಿ ಕೊಂಡಿರುವದೆಂಬುದನ್ನು ತೋರಿಸುವದಕ್ಕಾಗಿ ಕೆಳಗೆ ಕೊಟ್ಟಿರುವದುನೋಡಿರಿ.

ಬ್ರಹ್ಮ ಘನವೆಂಬನೆ ಬ್ರಹ್ಮನನುಂಗಿತ್ತು ಮಾಯೆ.
ವಿಷ್ಣು ಘನವೆಂಬೆನೆ ವಿಷ್ಣುವಿನ ನುಂಗಿತ್ತು ಮಾಯೆ,
ರುದ್ರ ಘನವೆಂಬೆನೆ ರುದ್ರನನುಂಗಿತ್ತು ಮಾಯೆ,
ತಾ ಘನವೆಂಬೆನೆ ತನ್ನನುಂಗಿತ್ತು ಮಾಯೆ,
ಒಬ್ಬರನ್ನೊಳಕೊಳ್ಳದಿತ್ತ ಹೇಳಾ ಗುಹೇಶ್ವರಾ,

ಲೋಕದಲ್ಲಿ ಆತ್ಮರುಗಳು ಪ್ರಕೃತಿಗೆ ಮೋಹಿಸಿ, ಅದರ ಹಂಗು ಹಿಡಿದು ಈ ರೀತಿ ಸಾಭಾವಿಕವಾಗಿ ತೊಳಲುತ್ತಿರಲು, ಮೇಲೆನಿಸಿದ ಮಾನವನು, ದೇವಾನು ದೇವತೆಗಳಿಗಿಂತ ಹೆಚ್ಚಿನದಾದ ಮಾನವ ಜನ್ಮದ ಯೋಗ್ಯತೆಯನರಿಯದೆ ಪ್ರಾಕೃತ ಜೀವರಿಗಿಂತ ಪ್ರಾಕೃತನಾಗಿ ತನ್ನ ಅಮೌಲ್ಯವಾದ ದೇಣಿಗೆಗಳ ದುರು ಪಯೋಗದ ವಿಕಾರುಗಳೆಂಬ ಕೋಣಗಳಿಂದ, ಸಹಜವಾಗಿ ಶಿವಾನುಗ್ರಹಿಕೆಯಿಂದ ಕೂಡಿದ ಜೀವರ ಸೃಷ್ಟಿಯೆಂಬ ಸರೋವರವನ್ನು ಜೊಂಡೆಬ್ಬಿಸಿ, ಲೋಕಕಂಟಕನಾಗಿರುವದು ತನ್ನ ಸ್ವಾಭಾವಿಕವಾದ ಮೇಲು ತನಕ್ಕೆ ತಲೆಬಾಗಿಸುತದಾಗಿರುವದು. ತನಗೂ ಲೋಕಕ್ಕೂ ಅನಿಷ್ಟಕಾರಿಯಾದ ತನ್ನದುಷ್ಕೃತಿಗಳನ್ನು ತಿದ್ದಿ ಸೃಷ್ಟಿಯ ಸಹಜವಾದ ಇಷ್ಟ ಕಾರ್ಯಕ್ಕೆ ತನ್ನ ಹೆಚ್ಚಿನ ದೇಣಿಗೆಯ ಸಾಧನದಿಂದ ಸಮರಸ ಮಾಡಿಕೊಳ್ಳದಿದ್ದರೆ, ತನ್ನ ಮಾನವ ಜನ್ಮದ ಸಾರ್ಥಕವಾಗಲಿಲ್ಲೆಂದು ಗಟ್ಟಿಯಾಗಿನಂಬಿ ಆಚರಿಸತಕ್ಕದ್ದು,

ಪ್ರಾಕೃತರು ಪ್ರಕೃತಿಯ ಯಾವ ದೃಷ್ಟಿಯಿಂದಾಗಲಿ, ಎಂಥ ಜಾಣತನದ ವರ್ತನದಿಂದಾಗಲಿ ಅಹಂಕಾರವನ್ನು ಅಡಗಿಸಿಕೊಂಡು ನಿರ್ವಿಕಾರವನ್ನು ಸಾಧಿಸಲರಿಯರು. ಆದುದರಿಂದ ಮಾನವನು ತನ್ನ ನಿಜವಾದ ತಿಳಿಯಿಂದ, ಪ್ರಕೃತಿಗೆ ಮೋಹಿಸಿ ಅದರಲ್ಲಿ ನೆಟ್ಟ ದೃಷ್ಟಿಯನ್ನುಕಿತ್ತು, ತನ್ನ ನಿಜದಲ್ಲಿಯೇ ಇಟ್ಟ ಹೊರತು, ಆ ದೃಷ್ಟಿಯನ್ನು ವ್ಯತ್ಯಾಸ ಮಾಡುವ ಮನವನ್ನು ("ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು. ತೆರಹಿಲ್ಲದನಂಬುಗೆ, ತೆರಹಿಲ್ಲದ ಸ್ವಾನುಭಾವ ಸುಖ ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ ಕೂಡಲ ಸಂಗಮದೇವಾ"



ಎಂದು ಬಸವಣ್ಣನವರು ಹಾಡಿ ಕೊಂಡ ಮೇರೆಗೆ) ಪರಮಾತ್ಮಚಿಂತನೆಯೊಂದರಲ್ಲಿಯೇ ತೊಡಗಿಸಿಕೊಂಡ ಹೊರತು, ನಿಜವಕಂಡು ನಿಜಾನು ಸಂಧಾನದಿಂದ ಸಹಜ ನಿರ್ವಿಕಾರಿಯಾಗಿ ಲಿಂಗಮಯನಾಗಲಾರನು. ಈ ಬಗ್ಗೆ ಶ್ರೀ ಅಂಬಿಗರ ಚೌಡಯ್ಯನ ವಚನದಲ್ಲಿ ಹಾಡಿರುವದನ್ನು ನೋಡಿರಿ.

ಇಷ್ಟಲಿಂಗ ಪ್ರಾಣಲಿಂಗವೆನುತಿಪ್ಪರು
ಇಷ್ಟಲಿಂಗದ ಪ್ರಾಣಲಿಂಗದ ಸುದ್ದಿಯನಾರು ಬಲ್ಲರಯ್ಯ !
ಇಷ್ಟಲಿಂಗವನರಿವಡೆಅನಿಷ್ಟವ ಪರಿಹರಿಸಬೇಕು ನೋಡು !
ಪ್ರಾಣ ಲಿಂಗವನರಿವಡೆ ಪ್ರಪಂಚ ನಾಸ್ತಿಯಾಗಿರ ಬೇಕು ನೋಡು !

ಮನವು ಲಿಂಗದನುಸಂಧಾನವನ್ನು ಬಿಟ್ಟಿರುವನಕ, ತನಗ ದೃಷ್ಟವಾದ ಅಸ್ಥಿರ ಸೃಷ್ಟಿಯ ಚಿಂತನೆಗಳ ಕರ್ಮಯೋಗದಿಂದ, ಆತ್ಮನಿಗುಂಟಾದ ಜಡ ಭಾವದ ಕೂಟವಾಗಿರುವದು. ಅನಿಷ್ಟ ಪರಿಹರಿಸುವದೆಂದರೆ ಮನದೊಳಗಿನ ಅಸ್ಥಿರ ತೋರಿಕೆಗಳ ಚಿಂತನೆಯನ್ನೂ ಕರ್ಮಯೋಗದಿಂದ ಆಗ್ಗಾಗೆ ಬದಲಾಗುವ ಭಾವನೆಗಳನ್ನೂ ತಡೆಯುವದಾಗಿದೆ. ದೃಷ್ಟ ಚಿಂತನೆಗಳನ್ನು ಶಮೆಯಿಂದಲೂ ಭಾವದ ಜಡತ್ವವನ್ನೂ ದಮೆಯಿಂದಲೂ ತಡೆಯುವ ಉಪಾಯಗಳನ್ನು ಶಾಸ್ತ್ರಗಳು ಸಾರುವವು. ಪ್ರಸಂಗ ವಿಶೇಷದಲ್ಲಿ ಈ ಶಮೆದಮಾದಿಗಳು ಬಲವಾದ ಸಾಧನಗಳಾಗಲಾರವು. ಅಂತೇ ಬಾದರಾಯಣನು "ಬಲವಾನ್ ಇಂದ್ರಿಯ ಗ್ರಾಮೋಪಕರ್ಷತಿ" ಎಂದು ಹೇಳಿರುವನು. ಮನದೊಳಗಿನ ಎರಡೂ ಭಾಗಗಳನ್ನು ನಿರ್ದೋಷವಾಗಿ ಮಾಡಿಕೊಳ್ಳಲಿಕ್ಕೆ ಒಂದೇ ಒಂದು ಉಪಾಯವಿರುವದು. ಏಕೆಂದರೆ ನೋಟವು ಮನದ ಕೂಟಕ್ಕೂ, ಮನದ ಕೂಟವು ನೋಟಕ್ಕೂ ಅನ್ಯೋನ್ಯವಾಗಿ ಕಾರಣಗಳಾಗಿರುವವು.

ಆ ಉಪಾಯವು ಯಾವದೆಂದರೆ ಇಷ್ಟಲಿಂಗಧಾರಣೆಯು. ಮನವನ್ನೂ ದೃಷ್ಟಿಯನ್ನೂ ತಡೆಯಲಾರದ ಪೂಜೆಯು ಕರ್ಮವೆನಿಸುವದೇ ಹೊರತು ಶಿವಪೂಜೆಯಾಗಲಾರದು. ಮನವು ಆತ್ಮನ ಅಧಿಕಾರವನ್ನು ಸಹಜವಾಗಿ ಮುರಿಬಡಿದು ಇಂದ್ರಿಯಗಳನ್ನು ಆಳುತ್ತಿರುವದರಿಂದ, ಕರಣಗಳು ಸ್ವಾಭಾವಿಕವಾಗಿ ಅದರ ವಶವರ್ತಿಯಾದವು. ಆದುದರಿಂದ ಮನವು ಹರಿದಾಡಿದಲ್ಲೆಲ್ಲ ಕರಣಗಳು ಸಹಜವಾಗಿ ತೊಡಕಿಕೊಂಡಿರುವವು. ಈ ತೊಡಕಿಕೊಂಡ ಕರಣಗಳನ್ನು ಬಿಡಿಸಿಕೊಳ್ಳುವದು ಹಿಂದಿನಿಂದ ತಾಗಿದ ಮನಕ್ಕೆ ಜಡಹೋಗುವದು. ಆದುದರಿಂದ ಶಿವಪೂಜೆಯು ತನು-ಮನ-ಧನಗಳನ್ನು ಸೆಳಕೊಂಬುದಾಗಿರಬೇಕು. ಅಂದರೆ ಭಕ್ತಿ ಜ್ಞಾನ ವೈರಾಗ್ಯ ದಿಂದ ಕೂಡಿದ್ದಾಗಿರಬೇಕು. ವಿರಾಗವು ಅಳವಟ್ಟ ಪರಿಶುದ್ಧವಾದ ಜ್ಞಾನಾಂಶವನ್ನು ಅವಲಂಬಿಸಿರುವದು. ಅಳವಟ್ಟ ಜ್ಞಾನವು, ನೆಲೆಗೊಂಡ ಭಕ್ತಿಯ ಅಂಶವನ್ನು ಅವಲಂಬಿಸಿರುವದು ! ನೆಲೆಗೊಂಡ ಭಕ್ತಿಯು ಪರಿಶುದ್ಧವಾದ ಮನದ ಪರಿಶುದ್ಧತೆಯು ಇಷ್ಟಲಿಂಗದಲ್ಲಿ ನೆಟ್ಟ ದೃಷ್ಟಿ ಕೂಟಗಳನ್ನವಲಂಬಿಸಿರುವದು. ಅಂತೇ ಹರಗುರು ಬಸವಣ್ಣನು ನೋಟವೇ ಪ್ರಾಣವಾಗಿ........ವಿಕಾರಸಂಗವಳಿದು ಹಾಡನ್ನು ಹಾಡಿಕೊಂಡಿರುವನು.

# "ಷಟ್‌ಸ್ಥಲಧ್ವಜ" ಒಂದು ಪರಿಚಯ

ಲೇಖಕರು— ಶರಣ ಮತ್ತೀಹಳ್ಳಿ ರೇವಣಪ್ಪ
ವಿ. ಪ್ರ. ಗುರುಗಳು ೨೮೦ ಒಕ್ಕಲಿಗರ ಪೇಟೆ, ಬಸವೇಶ್ವರನಗರ, ದಾವಣಗೆರೆ,

ಪ್ರಾಣಪಾರೂಢನು ಪ್ರಣವಸ್ವರೂಪನು
ಪ್ರಣವಾ ಪ್ರಕೃತಿ ಸೌಜ್ಞಾರೂಪನು ।
ಪ್ರಣವ ಷಡಂಗಿ, ಸಮರಸ ಸಂಗ
ನಮ್ಮ ಕೂಡಲ ಸಂಗಮದೇವಾ ।।

ಪ್ರತಿಯೊಂದು ಸ್ವತಂತ್ರ ರಾಷ್ಟ್ರಗಳಿಗೆ, ತಮ್ಮದೇ ಆದ ರಾಷ್ಟ್ರೀಯ ಲಾಂಛನಗಳು ಇರುವಂತೆ ಪ್ರತಿಯೊಂದು ಸ್ವತಂತ್ರ ಧರ್ಮಗಳು ತಮ್ಮದೆ ಆದ ಧಾರ್ಮಿಕ ಲಾಂಛನಗಳನ್ನು ಹೊಂದಿರುತ್ತವೆ.

ಬಸವಾದ ಶಿವಶರಣದಿಂದ, ಅನುಭವ ಮಂಟಪದಲ್ಲಿ ಉದಯಿಸಿ ಬಂದ ಶರಣ ಧರ್ಮ ಅಥವ ಬಸವ ಧರ್ಮವು ಸ್ವತಂತ್ರ ಸಾರ್ವಭೌಮತ್ವ ಉಳ್ಳದುದಾಗಿದೆ. ಇದು ತನ್ನದೆ ಆಡ ಧಾರ್ಮಿಕ ಲಾಂಛನಗಳನ್ನು ಪಡೆದಿದೆ.

"ವಿಭೂತಿ, ರುದ್ರಾಕ್ಷಿ. ಇಷ್ಟಲಿಂಗ ಹಾಗು ಪಟಸ್ಥಲಧ್ವಜ" ಇವು ಸ್ವತಂತ್ರ ಶರಣ ಧರ್ಮದ ಧಾರ್ಮಿಕ ಲಾಂಛನಗಳು.

ಆದೇ ರೀತಿ ಅನುಭವ ಮಂಟಪದಲ್ಲಿ ನಿರೂಪಿತವಾದ

* "ವಚನ ಧರ್ಮದರ್ಶನಗಳೇ–ನಮ್ಮ ಗ್ರಂಥಗಳು,
* "ಓಂ ಶ್ರೀ ಗುರು ಬಸವಲಿಂಗಾಯನಮಃ ಎಂಬುದೆ ನಮ್ಮ ಪರಮ ಬೀಜ ಮಂತ್ರ"
* "ಶರಣ ಧರ್ಮದ ದೃಷ್ಟಾರ, ಜೀವ–ಜೀವಾಳ ವಿಶ್ವಗುರು ಬಸವಣ್ಣನೇ ನಮ್ಮ ಮೂಲಿಗ ಮತ್ತು ಮಂತ್ರ ಪುರುಷ"

ಶರಣರು ಕಟ್ಟಿದ್ದು ವರ್ಗ–ವರ್ಣ–ಶೋಷಣೆ ರಹಿತ ಸಮಾಜವನ್ನು ಮೇಲು–ಕೀಳು ಗಂಡು–ಹೆಣ್ಣು, ಒಡವ–ಬಲ್ಲದ, ಎಂಬ ಭೇದ ರಹಿತ, ಸರ್ವ ಸಮಾನತೆಯ ಮೌಲ್ಯಉಳ್ಳದ್ದು. ಯಾವ ಭೇದವಿಲ್ಲದೆ ಪ್ರತಿಯೊಬ್ಬ ಜೀವಿಯೂ, ದೇವನಾಗುವ ಅವಕಾಶವನ್ನು ಒದಗಿಸಿ ಸರ್ವಾಂಗೀಣ ಸಮಭಾವದ "ಮುಕ್ತ ಸಮಾಜ"ವನ್ನು ಭಕ್ತಿ–ಕಾಯಕ–ದಾಸೋಹದ ಅಡಿಯಲ್ಲಿ, ಎಲ್ಲಾ ದೀನ–ದಲಿತ–ಆರ್ತರನ್ನು ಸಂಘಟಿಸಿದುದು ಈ ಷಟ್‌ಸ್ಥಲ ಧ್ವಜದಡಿಯಲ್ಲಿ.



* ಮೌಢ್ಯ, ಅಂಧಾನುಕರಣೆ—ಕಂದಾಚಾರಗಳ ವಿರುದ್ಧ ಜನ ಸಮೂಹವನ್ನು ಜಾಗೃತಗೊಳಿಸಿದ್ದು "ಈ ಷಟ್‌ಸ್ಥಲ ಧ್ವಜದಡಿಯಲ್ಲಿ"
* ಧಾರ್ಮಿಕ ಶೋಷಣೆ, ಪುರೋಹಿತ–ಪೂಜಾರಿಗಳ ದಲ್ಲಾಳಿತವನ್ನು ವಿರೋಧಿಸಿ ನಿಂತುದು "ಈ ಷಟ್‌ಸ್ಥಲ ಧ್ವಜದಡಿಯಲ್ಲಿ".
* ಕೇವಲ ಕೆಲವೇ ಜನರ ಸ್ವತ್ತಾಗಿದ್ದ ಧರ್ಮವನ್ನು ಸಾಮಾನ್ಯ ಜನರ ಸ್ವತ್ತನ್ನಾಗಿ ಮಾಡಿದ್ದು '' ಈ ಷಟ್‌ಸ್ಥಲ ಧ್ವಜದಡಿಯಲ್ಲಿ''
* ಮಾನವ ಜನಾಂಗವನ್ನು ಹೆತ್ತ ಹೆಣ್ಣನ್ನು ಶೂದ್ರಳು–ಅಪವಿತ್ರಳು ಧರ್ಮಕಾರ್ಯಗಳಿಗೆ ನಿಷಿದ್ಧಳು, ಸಂಸ್ಕಾರಕ್ಕೆ ಅನರ್ಹಳೆಂದು ತನ್ನನ್ನು ಹೆತ್ತತಾಯಿಯನ್ನೇ ಕಡೆಗಾಣಿಸಿದೆ "ವರ್ಗಕ್ಕೆ" ಛೀಮಾರಿಹಾಕಿ, ಹೆಣ್ಣು–ಹೆಣ್ಣಲ್ಲ ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನನೆಂದು, ಮಹಿಳೆಯರಿಗೆ, ವಿದೆ , ಸಮಾನ ಗೌರವ–ಸ್ಥಾನ ಎಲ್ಲಕ್ಕೂ ಮಿಗಿಲಾಗಿ ಧರ್ಮ ದೀಕ್ಷಾ ಸಂಸ್ಕಾರ ಕೊಟ್ಟುದುದರ ಪರಿಣಾಮವಾಗಿ ಅನೇಕ ಅನುಭಾವಿ ಶರಣೆಯರು, ವಚನಕಾರ್ತಿಯರು ಬೆಳಕಿಗೆ ಬಂದುದು "ಈ ಪಟಸ್ಥಲ ಧ್ವಜ ದಡಿಯಲ್ಲಿ".

ಪರವಸ್ತುವಿನಿಂದ ಹೊರ ಹೊಮ್ಮಿದ ಅಂಗ–ಲಿಂಗಳು ಮೂರು–ಮೂರಾಗಿ, ಪುನಃ ಆರು–ಆರಾಗಿ, ನಂತರ ಮುವ್ವತ್ತಾರು–ಮುವ್ವತ್ತಾರಾಗಿ ಕೊನೆಗೆ ಇನ್ನೂರಾಹದಿನಾರು–ಇನ್ನೂರಾಹದಿನಾರಾಗಿ, ಪುನಃ ಒಂದರಲ್ಲಿ–ಒಂದು, ಒಂದು ಗೂಡುತ್ತಾ ಅಂತ್ಯದಲ್ಲಿ ಲಿಂಗದಲ್ಲಿ–ಅಂಗ ಏಕೀಭವಿಸಿ ಸಾಮರಸ್ಯ ಹೊಂದುವ ಮಾರ್ಗವೇ ಶರಣ ಮಾರ್ಗ, ಇದೇ ಲಿಂಗಾಂಗ ಸಾಮರಸ್ಯ. ಈ ಮಾರ್ಗಾನುಸಾರಣೆಯ ಲಾಂಛನವೇ "ಪಟಸ್ಥಲ" ಧ್ವಜ.

ಈ ಧ್ವಜವು ಎರಡು ವೃತ್ತಗಳಿಂದ ಕೂಡಿದೆ, ಹೊರಗಿನ ವೃತ್ತವೆ "ಅಂಗ ವೃತ್ತ" ಅಥವ ಅಂಗಕ್ಷೇತ್ರ, ಇದು ಸಾಧಕ ಜೀವಿಯನ್ನು ಪ್ರತಿನಿಧಿಸುವುದು, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತು ಐಕ್ಯ ಎಂದು ಆರು ಸ್ಥಲಗಳನ್ನು ಇದರಲ್ಲಿ ನಿರ್ದೇಶಿಸಿದೆ.

ಷಟ್ ಸ್ಥಲಾನುವರ್ತಿಯಾದ, ಷಡುಸ್ಥಲ ಬ್ರಹ್ಮ ಮೂರ್ತಿಯಾದವನ, ದೇಹ, ಆತ್ಮ, ಪ್ರಾಣ, ಇಂದ್ರಿಯ ಇಂದ್ರಿಯ ವಿಷಯಗಳು ಮತ್ತು ಇಂದ್ರಿಯ ತೃಪ್ತಿ ಇವುಗಳ ಪರಿವಿಡಿಯಿಂದ ಆತನ ದೇಹವೇ "ಆಚಾರಲಿಂಗ" ಆತನ ಆತ್ಮವೇ 'ಜಂಗಮಲಿಂಗ', ಆತನ ಪ್ರಾಣವೇ ಶಿವಲಿಂಗ ಆತನ ಇಂದ್ರಿಯಗಳೇ 'ಜಂಗಮ ಲಿಂಗ' ಆತನ ಇಂದ್ರಿಯ ವಿಷಯಗಳೇ "ಪ್ರಸಾದ" ಲಿಂಗ, ಮತ್ತು ಇಂದ್ರಿಯ ವಿಷಯ ತೃಪ್ತಿಯೇ "ಮಹಾಲಿಂಗ"ವಾಗಿರುವ ಲಿಂಗದೇಹಿಯ ಪ್ರತೀಕವೇ ಈ "ಅಂಗವೃತ್ತ".

ಎರಡನೆಯದಾಗಿ ಒಳಗಿನ ಷಟ್ ಕೋನಾಂತರ್ಗತ ವೃತ್ತವೇ "ಲಿಂಗ ಕ್ಷೇತ್ರ" ಇದರಲ್ಲಿ ಓಂ-ನ-ಮಃ-ಶಿ-ವಾ-ಯ ಎಂಬ ಪ್ರಣವ ಮಂತ್ರವನ್ನು ಗುರುತಿಸಿ ನಿರ್ದೇಶಿಸಿದೆ.

ಅಂಗನಲ್ಲಿ ನೆಲೆಗೊಂಡ "ಶ್ರದ್ಧಾದಿ" ಭಕ್ತಿಗಳಿಂದ, ಅಂತಃ ಕರಣಾದಿ ಹಸ್ತಗಳಿಂದ, ಲಿಂಗನಲ್ಲಿಯ "ಕ್ರಿಯಾದಿ" ಶಕ್ತಿಗಳೊಡನೆ, ಇಂದ್ರಿಯ ಮುಖಗಳ ಮುಖಾಂತರ ವಿಷಯಾದಿ ಪದಾರ್ಥಗಳನ್ನು ಅರ್ಪಿಸಿ, ಪ್ರಸಾದರೂಪವಾಗಿ ವಿಕಾಸಗೊಳ್ಳುತ್ತಾ ಸಾಗಿ, ಅಂಗನು-ಲಿಂಗನಲ್ಲಿ ಸಮರಸ ಹೊಂದುವ ಲಿಂಗಾಂಗ ಸಾಮರಸ್ಯದ ಅಂದರೆ ಪ್ರಣವ ಸ್ವರೂಪವಾಗುವ ಕುರುಹೆ ಈ ಷಟ್‌ಸ್ಥಲಧ್ವಜ.

ಈ ಧ್ವಜವು ಕೇವಲ ಬಣ್ಣದ ಬಟ್ಟೆಯಲ್ಲ. ಇದರಲ್ಲಿಯ ಅಕ್ಷರಗಳು ಬರಹವಲ್ಲ. ಇವು ಶರಣ ಧರ್ಮದ ತತ್ತ್ವಪತಾಕೆ ಯಾಗಿದೆಯಲ್ಲದೆ, ಶರಣ ಧರ್ಮದ ಜೀವ-ಜೀವಾಳವಾಗಿದೆ.

ವಿಶ್ವ ಧರ್ಮವಾಗಿರುವ ಶರಣ ಧರ್ಮದ ಪತಾಕೆ ಬಾನೆತ್ತರದಲ್ಲಿ ಹಾರಾಡುತ್ತಿರಲಿ.

---

## " ವಿಶ್ವಧರ್ಮದ ಧ್ವಜಗೀತೆ "

**ಕೃಪೆ ಶರಣ ವಿ ಸಿದ್ಧರಾಮಣ್ಣನವರು**
**ಸಂಚಾಲಕರು ಅನುಭವ ಮಂಟಪ ಬಸವಕಲ್ಯಾಣ,**

ವಿರುತಿದೆ-ಹಾರುತಿದೆ ।
ಷಟಸ್ಥಲ ಧ್ವಜವು ಮೆರೆಯುತಿದೆ ।
ವಿಶ್ವ ಜೀವರನು ತನ್ನಯ ಗರ್ಭದಿ ।
ಹೊತ್ತ ಬಸವ ಧ್ವಜವು ಹಾರುತಿದೆ । ॥ಪ॥
ಸಮತಾ ತತ್ತ್ವವ ಜಗದಲಿ ಸಾರಿದ ।
ಸತ್ಯ ಅಹಿಂಸೆಯ ನಡೆಯಲಿ ತೋರಿದ ।
ದಯವೇ ಧರ್ಮದ ಮೂಲವೆಂದುಲಿದ ।
ಕಲ್ಯಾಣ ಧ್ವಜವು ಹಾರುತಿದೆ । ॥೧॥
ಮೋಳಿಗೆ ಮಾರಯ್ಯಾ । ಮಡಿವಾಳ ಮಾಚಯ್ಯಾ ।
ಮಾದಾರ ಚನ್ನಯ್ಯಾ ಡೋಹಾರ ಕಕ್ಕಯ್ಯಾ ।
ಹರಳಯ್ಯ ಮೊದಲಾದ ಭಕ್ತರೆಲ್ಲ ।
ಜಂಗಮ ಸ್ಥಲಕೆ ಎತ್ತಿದ ಧ್ವಜವು । ॥೨॥





ಷಟ್‌ಸ್ಥಲ ಧ್ವಜ

ವ್ಯೋಮಕಾಯ ಸಿದ್ಧ ಅಲ್ಲಮ ಪ್ರಭುವು ।
ವೀರ ಗಣಾಚಾರಿ ಅಂಬಿಗ ಚೌಡಯ್ಯ ।
ಕಾಯಕ ಜ್ಯೋತಿ ನುಲಿಯ ಚಂದಯ್ಯ ।
ಅಗಣಿತ ಮಹಿಮರ ಪ್ರೀತಿಯ ಧ್ವಜವು । ॥೩॥

ಕ್ರಾಂತಿಯ ಗಂಗೋತ್ರಿ ಅಕ್ಕನಾಗಾಯಿ ।
ನಿರಂಜನ ಜ್ಯೋತಿ ನೀಲಮ್ಮ ತಾಯಿ ।
ಸತ್ಯಕ್ಕ-ನೀಲಮ್ಮ ಶರಣೆ ಮುಕ್ತಾಯಿ ।
ಜ್ಞಾನ ಗುರು ಅಕ್ಕ ಮಹಾದೇವಿಯ ಧ್ವಜವು । ॥೪॥

ವಚನ ಶಾಸ್ತ್ರದ ಹಾಲ್ಹೊಳೆ ಹರಿಸಿದ ।
ವಾದ ಭೇದವನು ಕಾಲಲಿ ಮೆಟ್ಟಿದ ।
ಕಾಯಕ ಕೈಲಾಸ ಮಂತ್ರ ಬೋಧಿಸಿದ ।
ಕರುಣಾಳು ಗುರು ಚನ್ನಬಸವನ ಧ್ವಜವು । ॥೫॥

ಪ್ರತಿಯೊಬ್ಬ ಶರಣ ಧರ್ಮೀಯರು ತಮ್ಮ ಮನೆಯಲ್ಲಿ ನಡೆಯುವ ವಿಶೇಷ ಸಂದರ್ಭದ ಸಮಾರಂಭಗಳಲ್ಲಿ ಹಾಗೂ ಕಾರ್ಯಕ್ರಮಗಳಲ್ಲಿ ಪ್ರಥಮವಾಗಿ ಈ "ಷಟಸ್ಥಲ ಧ್ವಜ"ವನ್ನು ಆರೋಹಣೆ ಮಾಡಿದ ನಂತರ ಈ "ವಿಶ್ವ ಧರ್ಮ ಧ್ವಜ"ಗೀತೆಯನ್ನು ಹಾಡುವುದರಿಂದ ಕಾರ್ಯಕ್ರಮ ಪ್ರಾರಂಭಿಸಿದರೆ ನಮ್ಮನ್ನು ನಾವೇ ಗೌರವಿಸಿ ಕೊಂಡಂತಾಗುತ್ತದೆ.

ಅಂಗ ← ಪರವಸ್ತು → ಲಿಂಗ

- ಅಂಗ
  - ತ್ಯಾಗಾಂಗ: ಭಕ್ತ, ಮಹೇಶ
  - ಭೋಗಾಂಗ: ಪ್ರಸಾದಿ, ಪ್ರಾಣಲಿಂಗಿ
  - ಯೋಗಾಂಗ: ಶರಣ, ಐಕ್ಯ
- ಲಿಂಗ
  - ಇಷ್ಟಲಿಂಗ: ಆಚಾರಲಿಂಗ, ಗುರುಲಿಂಗ
  - ಪ್ರಾಣಲಿಂಗ: ಶಿವಲಿಂಗ, ಜಂಗಮಲಿಂಗ
  - ಭಾವಲಿಂಗ: ಪ್ರಸಾದಲಿಂಗ, ಮಹಾಲಿಂಗ

ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ

### ಅಷ್ಟಾವಿಧಾರ್ಪಣ

| ಭೂತ | ಪ್ರಣವ | ಸ್ಥಲ | ಭಕ್ತಿ | ಲಿಂಗ | ಶಕ್ತಿ | ಮುಖ | ಹಸ್ತ | ಪದಾರ್ಥ | ಪ್ರಸಾದ |
|---|---|---|---|---|---|---|---|---|---|
| ಪೃಥ್ವಿ | ನ | ಭಕ್ತ | ಶ್ರದ್ಧಾ | ಆಚಾರಲಿಂಗ | ಕ್ರಿಯಾ | ನಾಶಿಕ | ಸುಚಿತ್ತ | ಗಂಧ | ಸುಗಂಧ |
| ಜಲ | ಮಃ | ಮಹೇಶ | ನಿಷ್ಠಾ | ಗುರುಲಿಂಗ | ಜ್ಞಾನ | ನಾಲಿಗೆ | ಸುಬುದ್ಧಿ | ರಸ | ಸುರಸ |
| ಅಗ್ನಿ | ಶಿ | ಪ್ರಸಾದಿ | ಅವಧಾನ | ಶಿವಲಿಂಗ | ಇಚ್ಛಾ | ನೇತ್ರ | ನಿರಹಂಕಾರ | ರೂಪ | ಸುರೂಪ |
| ವಾಯು | ವಾ | ಪ್ರಾಣಲಿಂಗಿ | ಅನುಭವ | ಜಂಗಮಲಿಂಗ | ಆದಿಶಕ್ತಿ | ಚರ್ಮ | ಸುಮನ | ಶಬ್ದ | ಸುಶಬ್ದ |
| ಆಕಾಶ | ಯ | ಶರಣ | ಆನಂದ | ಪ್ರಸಾದಲಿಂಗ | ಪರಾಶಕ್ತಿ | ಕಿವಿ | ಸುಜ್ಞಾನ | ಸ್ಪರ್ಶ | ಸುಸ್ಪರ್ಶ |
| ಆತ್ಮ | ಓಂ | ಐಕ್ಯ | ಸಮರಸ | ಮಹಾಲಿಂಗ | ಚಿತ್‌ಶಕ್ತಿ | ಹೃದಯ | ಸದ್ಭಾವ | ತೃಪ್ತಿ | ಮಹಾತೃಪ್ತಿ |

**ಅರ್ಪಣಾ ವಿಧಾನ :** "ಪೃಥ್ವ್ಯಾಂಗ" ದಲ್ಲಿಯ "ನ" ಕಾರ ಪ್ರಣವ ಯುಕ್ತನಾದ "ಭಕ್ತನು" " ಶ್ರದ್ಧಾ " ಭಕ್ತಿಯಿಂದೊಡಗೂಡಿ ಕ್ರಿಯಾ ಶಕ್ತಿ ಸಮೇತನಾದ "ಆಚಾಲಿಂಗಕ್ಕೆ" "ಸುಚಿತ್ತ"ಹಸ್ತದಿಂದ ನಾಶಿಕ ಮುಖದಲ್ಲಿ ಗಂಧ ಪದಾರ್ಥವನ್ನು ಅರ್ಪಿಸಿ "ಸುಗಂಧ" ಪ್ರಸಾದವನ್ನು ಪಡೆಯುವನು, ಇದೇ ರೀತಿ ಉಳಿದವುಗಳಿಗೂ ಅನ್ವಯಿಸಿಕೊಳ್ಳಬೇಕು,

# ವಚನಕಾರ ಅಮ್ಮಿದೇವ

ಲೇಖಕರು : ಪ್ರೊ. ಎಸ್. ಎಸ್. ಭೂಸರಡ್ಡಿ ಧಾರವಾಡ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ೧೨ ನೆಯ ಶತಮಾನ ಒಂದು ಅಪೂರ್ವವಾದ ಸುವರ್ಣಯುಗವೆಂದೇ ಹೇಳಬೇಕು. ಭಾರತದ ಇತಿಹಾಸದಲ್ಲಿಯೇ ವಿನೂತನ ಸಂಪುಟ ತೆರೆದವರು ಭಾಗ್ಯವಿದಾತ ಮಹಾನುಭಾವಿ ಬಸವಣ್ಣನವರು. ಜಗತ್ತಿನ ಧಾರ್ಮಿಕ ಮಹಾಪುರುಷರ ಶ್ರೇಣಿಯಲ್ಲಿ ಇವರಿಗೆ ಪ್ರಥಮ ಸ್ಥಾನ ಮೊಸಲು. ಸಮಾನತೆಯ ಉದಾತ್ತ ತತ್ತ್ವವನ್ನು ಯಥಾವತ್ತಾಗಿ ಆಚರಣೆಗೆ ತಂದ ಮಹಾಧೀಮಂತರು. ಲೋಕದ ಇತಿಹಾಸದಲ್ಲಿ ಮಹಿಳೆಯರಿಗೆ ಮೊದಲು ಬಾರಿಗೆ ಎಲ್ಲದರಿಂದಲೂ ಸಂಪೂರ್ಣವಾದ ಸಾತಂತ್ರ್ಯವನ್ನು ಉದ್ಘೋಷಿಸಿದ ಮಹಾ ಕ್ರಾಂತಿಕಾರಿ, ಯುಗಪ್ರವರ್ತಕ ಶಕ್ತಿ. ದೀನರನ್ನು ದಲಿತರನ್ನು ಒಡವರನ್ನು ಅಪ್ಪಿಕೊಂಡು ಎತ್ತಿಕೊಂಡು ಅವರ ಬಾಳಿಗೆ ಬೆಳಕಾದ ಮಹಿಮಾನ್ವಿತರು. ಅನುಭವ ಮಂಟಪವನ್ನು ಕಟ್ಟಿ ಕಾಯಕ ತತ್ತ್ವದ ದಿವ್ಯ ಸಂದೇಶವನ್ನು ಮೊಳಗಿಸಿದ ಬಸವಣ್ಣನವರು ಜಾತಿ ವರ್ಗ ವರ್ಣ ಭೇದಭಾವಗಳನ್ನು ಸುಟ್ಟುಹಾಕಿ ನೀತಿಯ ತಳಹದಿಯ ಮೇಲೆ ಮಾನವ ಧರ್ಮವನ್ನು ರೂಪಿಸಿದ ರೂವಾರಿ. ಮಾನವೀಯ ಚಿರಂತನ ಮೌಲ್ಯಗಳ ಪುನರುದ್ಧಾರಕ್ಕಾಗಿ ಪರಿಪೂರ್ಣ ಸರ್ವಾಂಗ ಸುಂದರ ನೂತನ ಸಮಾಜವನ್ನು ಕಟ್ಟಲು ಅವಿರತ ಅವಿಶ್ರಾಂತ ಹೋರಾಟ ಮಾಡಿದ ಮನುಕುಲದ ಮಹಾದೇವ, ಭಾರತದ ಪ್ರಪ್ರಥಮ ಸ್ವತಂತ್ರ ವಿಚಾರವಾದಿ. ಈ ಸಂದರ್ಭದಲ್ಲಿ ಅಸದೃಶ ಮಹಿಮಾನ್ವಿತರ ಗುಂಪೊಂದು ಒಂದೆಡೆ ಉದಯವಾಗಿ ಮಿಂಚಿನ ಸಂಚನ್ನು ಜನಜೀವನದಲ್ಲಿ ತುಂಬಿತು. ನವನವೋನ್ಮೇಷಶಾಲಿನಿಯಾದ ಜನಜೀವನ ಪ್ರಜ್ಞೆಯನ್ನು ಅರಳಿಸಿತು.

ಡಾ. ಎಲ್. ಬಸವರಾಜ ಅವರ ಮಾತಿನಲ್ಲಿ ಹೇಳುವದಾದರೆ, 'ಮುಂಗಾರ ಮೊದಲ ಹನಿ ಬಿದ್ದೊಡನೆಯೇ ಹಸಿರು ಮೊಳೆಯೊಡೆದು, ಸುಳಿದೆಗೆದು, ಗರಿಗರಿಯಾಗಿ, ಹಚ್ಚಹಸಿರಾಗಿ ಮೈದೋರುವಂತೆ ಬಸವನ ಅವತಾರದೊಡನೆಯೆ ಕನ್ನಡ ನಾಡಿನ ಗೆಣ್ಣುಗೆಣ್ಣುಗಳಲ್ಲಿ ಸುಧಾರಕರು. ಮೇಧಾವಿಗಳು, ದಾರ್ಶನಿಕರು, ಯೋಗಿಗಳು, ಕರ್ಮವೀರರು, ಕಡುಗಲಿಗಳು, ತ್ಯಾಗಿಗಳು, ವಿರಕ್ತರು, ಪರಿವ್ರಾಜಕರು, ಮುಗ್ಧರು–ನಾನಾ ವಿಧದ ಜನ ಹೆಣ್ಣೆನ್ನದೆ, ಗಂಡೆನ್ನದೆ, ಮೇಲೆನ್ನದೆ, ಕೀಳೆನ್ನದೆ ಆಳೆನ್ನದೆ, ಆಳ್ದನೆನ್ನದೆ, ಬಡವನೆನ್ನದೆ, ಬಲ್ಲದನೆನ್ನದೆ, ಮಾಣಿಯೆನ್ನದೆ, ಮರುಳೆನ್ನದೆ ನೂರಾರು ಸಂಖ್ಯೆಯಲ್ಲಿ ಬಸವನ ಭೂಕೈಲಾಸದ ಸ್ವಪ್ನವನ್ನು ಸತ್ಯವಾಗಿಸಲು ತಮ್ಮ ತಮ್ಮ ಕ್ಷೇತ್ರದಲ್ಲಿ ಆದರ್ಶವಾಗಿ ನಡಿದರು. ಆದರ್ಶವನ್ನು ನುಡಿ

ದರು. ಅವರು ನುಡಿದ ನುಡಿ, ಮುತ್ತಿನ ಹಾರ. ಮಾಣಿಕ್ಯದ ದೀಪ್ತಿ ಸ್ಫಟಿಕದ ಸಲಾಕೆ ತಮಂಧ ಘನವಾದ ಅಂದಿನ ಆವರಣದಲ್ಲಿ ವಿಚಾರದ ದೀಪಾವಳಿ ಬೆಳಗಿಸಿದ ಕೀರ್ತಿ ಇವರದು, ಆದುದರಿಂದ ಕರ್ಮ ಹೋಗಿ ಕ್ರಿಯೆಯಾಯಿತು, ಧರ್ಮ ದಯೆಯ ಸಾಕಾರ ಸ್ವರೂಪವಾಯಿತು. ಕಾಯಕವು ಸಮಾಜದ ನಾಡಿ ಯಾಯಿತು. ಈ ಶರಣರು ವಿಷಮತೆ, ಡಾಂಭಿಕತೆಯ ವಿರುದ್ಧ ಕ್ರಾಂತಿ ಮಾಡಿ ದರು. ಶಿವಭಕ್ತಿ ನಿಷ್ಠವಾದ ಹೊಸದೊಂದು ಜೀವನ ಮಾರ್ಗ ಬೋಧಿಸಿದರು; ಇದಕ್ಕೆ ವಚನವೊಂದು ಸಮರ್ಥ ಸಾಧನವಾಯಿತು. ತಮ್ಮ ಸ್ವಾನುಭವದ ವಾಣ ಯಾಗಿ ಜನಸಾಮಾನ್ಯರ ಅಂತಃಕರಣಕ್ಕೆ ತಟ್ಟಲಿ, ಮುಟ್ಟಲಿ, ಅವರ ಆಚಾರ ವಿಚಾರಗಳಲ್ಲಿ ಪಲ್ಲಟವಾಗಲಿ ಎಂಬುವದೇ ಅವರ ಹಿರಿಯ ಹಂಬಲ. ಕಾಲಮಾನ ಪರಿಸ್ಥಿತಿಗನುಸಾರವಾಗಿ ಅದು ಜನಾಭಿಮುಖವಾಯಿತು; ಜನಪರವಾಯಿತು. ಕನ್ನಡ ಕಾವ್ಯ ಪ್ರಪಂಚದಲ್ಲಿ ಸ್ವಾತಂತ್ರ್ಯದ ಹೊಸಗಾಳಿ ಬೀಸಿತು. ಆದುದರಿಂದಲೇ ಎಂ. ಆರ್. ಶ್ರೀಯವರು ತಮ್ಮ ವಚನ ಧರ್ಮಸಾರ [ ಪು. ೧ ] ದಲ್ಲಿ ಉಲ್ಲೇಖ ಸಿದ ಈ ಮುತ್ತಿನಂತಹ ಮಾತುಗಳು ಮನನೀಯವಾಗಿವೆ. 'ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಹರಿಸುತ್ತ ಬರುವಾಗ ಒಂದು ಕಡೆ ತಪೋವನವನ್ನು ಪ್ರವೇಶಿಸಿ ದಂತೆಯೂ, ಸಿದ್ಧಸಾಧಕ ಋಷಿಗಳ ಸಂದರ್ಶನ ಪಡೆದು, ಅವರ ಉದಾತ್ತ ಜೀವನ, ಧರ್ಮಬೋಧೆಗಳಿಂದ ನಮ್ಮ ಅಂತರಂಗ ಪರಿಶುದ್ಧವಾದಂತೆಯೂ, ಆತ್ಮನ ಬಂಧನಗಳು ಕಳಚಿಬಿದ್ದು ನಾವು ಮುಕ್ತರಾದಂತೆಯೂ, ಒಂದು ದಿವ್ಯ ವಾದ ಆನಂದಾನುಭವ ಉಂಟಾಗುತ್ತದೆ. ಇಲ್ಲಿ ಪಟ್ಟಣವಾಸದ ಗೊಂದಲವಿಲ್ಲ; ರಾಜಸ್ಥಾನದ ವೈಭವ ದೃಶ್ಯಗಳಿಲ್ಲ; ತಪೋವನದ ಸಹಜ ಶಾಂತಿ, ಪರಸ್ಪರ ಪ್ರೇಮ ಸಮತಾಭಾವ, ಸ್ವಾತಂತ್ರ್ಯ ಇವನ್ನು ಮೂರ್ತಿಮತ್ತಾಗಿ ಕಾಣುತ್ತೇವೆ; ಅರಣ್ಯಕಗಳಲ್ಲಿ ಉಪನಿಷತ್ತಿನ ದರ್ಶನವನ್ನು ಕಂಡಂತೆ ಇಲ್ಲಿ ವಚನ ಧರ್ಮದ ದರ್ಶನವನ್ನು ಕಾಣುತ್ತೇವೆ. ಸತ್ಯದ ಹಂಬಲ ಸಾಹಿತ್ಯವಾಗಿ ಸತ್ಯಾನ್ವೇಷಣೆ ಸಿದ್ಧಾಂತವಾಗಿ, ಸತ್ಯಸಾಕ್ಷಾತ್ಕಾರ ವೇದದರ್ಶನವಾಗಿ ನಮಗೆ ಆನಂದವನ್ನುಂಟು ಮಾಡುತ್ತವೆ. ಉಪನಿಷತ್ತುಗಳಲ್ಲಿದ್ದ ವಿಷಯಗಳೆಲ್ಲ ವಚನಗಳಲ್ಲಿ ಸಿಗುತ್ತವೆ ವಚನ ಗಳಲ್ಲಿದ್ದ ವಿಷಯಗಳೆಲ್ಲ ಉಪನಿಷತ್ತುಗಳಲ್ಲಿ ಸಿಗುವದು ಸಾಧ್ಯವಿರುವದಿಲ್ಲವೆಂದು ರಂ ರಾ. ದಿವಾಕರ ಅವರು ಸಾರಿ ಸಾರಿ ಹೇಳಿದ ಮಾತು ದಿಟ, ಪುಟ, ನಿತ್ಯ ಸತ್ಯ ಕನ್ನಡಕ್ಕೆ ಮಂತ್ರ ಶಕ್ತಿಯನ್ನು ತಂದುಕೊಟ್ಟ ವಚನ ವಾಙ್ಮಯದ ಮಹತಿ ಅಷ್ಟು ಸಣ್ಣದಿಲ್ಲ. ವಚನಕಾರರು ತಮ್ಮ ಲೆಕ್ಕಣಿಕೆಯನ್ನು ಹೃದಯದಲ್ಲಿ ಅದ್ದಿ ಬರೆದಿದ್ದಾರೆ ಅದು ಅಕಾಯ ಚರಿತರ ಅಪೌರುಷೇಯ ವಾಙ್ಮಯ ಎಂದಿರುವ ಹಳಪೇಟೆ ಚಿಂತಾಮಣಿಯವರು 'ಕಲ್ಯಾಣ ಕ್ರಾಂತಿಯ ಸಂದೇಶ' ಎಂಬ ಕಿರು ಕೃತಿಯಲ್ಲಿ ಎತ್ತಿ ಹೇಳಿರುವ ಮಾತುಗಳು ಗಮನಾರ್ಹವಾಗಿವೆ. ಕನ್ನಡ ಸಾಹಿತ್ಯದ



ಒಂದು ವಿಶಿಷ್ಟವಾದ, ಬಹು ಅಮೂಲ್ಯವಾದ ಭಾಗವೆಂದರೆ ವಚನ ಸಾಹಿತ್ಯ; ಈ ಬಗೆಯ ಸಾಹಿತ್ಯದಂತಹ ಉದಾಹರಣೆಗಳು ವಿರಳವಾಗಿ, ಕ್ವಚಿತ್ತಾಗಿ, ಬಿಡಿ ಬಿಡಿಯಾಗಿ, ಒಂದೆರಡು ಇತರ ಭಾಷೆಗಳ ಸಾಹಿತ್ಯಗಳಲ್ಲಿ ಸಿಕ್ಕಬಹುದಾದರೂ, ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ಏರ್ಪಟ್ಟುದು. ಕನ್ನಡದಲ್ಲಿಯೇ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅಂತೆಯೇ ವಚನ ಸಾಹಿತ್ಯವು ಕನ್ನಡ ನುಡಿ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯೆಂದು ಕನ್ನಡಿಗರು ಹೆಮ್ಮೆ ಪಡ ಬಹುದು. ಸಂಸ್ಕೃತದ ಹಿರಿಮೆ ಸಡಿಲಿ ಕನ್ನಡದ ಹೆಚ್ಚಳ ಬೆಳೆದುದು ಈ ವಚನ ಸಾಹಿತ್ಯದಿಂದ, ಪದ್ಯದ ವ್ಯಾಮೋಹ ಸರಿದು ಗದ್ಯಕ್ಕೆ ಪುರಸ್ಕಾರ ದೊರೆತುದು ಈ ವಚನ ಸಾಹಿತ್ಯದಿಂದ. ಬಹುಕಾಲದಿಂದಲೂ ಪಂಡಿತರ ತುತ್ತಾಗಿದ್ದು. ವಿಶಿಷ್ಟ ವರ್ಗದವರ ಸೊತ್ತಾಗಿದ್ದು. ರಾಜಲಕ್ಷ್ಮಿಯ ತೊತ್ತಾಗಿದ್ದು, ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ ತಮ್ಮ ಅನುಭವದ ಕಮ್ಮಟದಲ್ಲಿಯೇ ಅಚ್ಚೊತ್ತಿದ ಲ್ಲಿಯೇ ಅಚ್ಚೊತ್ತಿದ ವಚನ ನಾಣ್ಯಗಳನ್ನು ಜನಸಾಮಾನ್ಯರೆಲ್ಲರಲ್ಲಿ ಸಲ್ಲುವಂತೆ ಹರಡಿಸಿದವರು ವಚನಕಾರರು. ದೇವವಾಣಿಗೆ ಜನವಾಣಿಯಾಗುವದು ಅಸಾಧ್ಯ ವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು.

ತಮ್ಮ ಅಪಾರ ಅನುಭವದ ಅಮೃತಮಯ ಸಂದೇಶ ಸ್ವರೂಪದಂತಿರುವ ವಚನ ರಚನೆಯಿಂದ ಶರಣರು ಮಾನವ ಕುಲವನ್ನೆ ಉದ್ಧರಿಸಿದ್ದಾರೆಂದರೆ ತಪ್ಪಾಗಲಾರದು 'ಕಾಲೇ ಕಂಬ, ದೇಹವೇ ದೇಗುಲ ಶಿರವೇ ಹೊನ್ನ ಕಳಶವಯ್ಯ' ಎಂದಿರುವ ಅವರ ನುಡಿಮುತ್ತುಗಳು ಇಂದಿಗೂ ಪ್ರಸ್ತುತವಾಗಿವೆ. 'ಕೈಲಾಸ ವೆಂಬುದೊಂದು ಹಾಳು ಬೆಟ್ಟ. ಅಲ್ಲಿರುವ ಶಿವನೊಬ್ಬ ಹೆಡ್ಡ ಎಂದು ಇಲ್ಲದ ಲೋಕವನ್ನು ಕಲ್ಪಿಸಿದವರಲ್ಲ. ಮೃತ್ಯುಲೋಕವೇ ಅವರಿಗೆ ಕರ್ತಾರನ ಕಮ್ಮಟ ವಾಗಿತ್ತು. ಕಾಯಕವೇ ಕೈಲಾಸವಾಗಿತ್ತು. ಸತ್ತನಂತರ ಮುಕ್ತಿಯ ಪಡೆದಿಹೆ ನೆಂದರೆ ನೀನೆತ್ತ ಅವನೆತ್ತ ಹೋಗೆತ್ತ ಮರುಳೇ ಎಂದವರು. ಹಲವು ಹನ್ನೊಂದು ದೇವರನ್ನು ಬೆನ್ನಟ್ಟಿ ಹೋದವರಲ್ಲ. ಅನುಭವ ಮಂಟಪದ ಚಿಂತನದ ಮಂಥನದ ಫಲವಾಗಿ ಹೊರಹೊಮ್ಮಿದ ಈ ಅಮೂಲ್ಯ ತತ್ತ್ವಸಾಹಿತ್ಯವನ್ನು ಬಿತ್ತರಿಸಿದವರು; ಸುಮಾರು ೩೦೫ ವಚನಕಾರರೆಂದು ತಿಳಿದು ಬರುತ್ತದೆ. ಈ ದಿಶೆಯಲ್ಲಿ ಈಗಾಗಲೇ ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ. ಅಲ್ಲಮಪ್ರಭು ಮೊದ ಲಾದವರ ವಚನಗಳು ಬೆಳಕಿಗೆ ಬಂದಿವೆ. ಜನಜನಿತವಾಗಿವೆ ಈ ವಚನಗಳಿಗೆ ಟೀಕೆ ಟಿಪ್ಪಣೆ ವ್ಯಾಖ್ಯಾನ ವಿಮರ್ಶೆ ಹೀಗೆ ಹಲವೊಂದು ರೀತಿಯಿಂದ ವಿವೇಚನೆ ವಿಶ್ಲೇಷಣೆ ನಡೆದಿರುವದು ಆರೋಗ್ಯಕರ ಸಂತೋಷದ ವಿಷಯ. ಆದರೆ ಇವರೊಂದಿಗೆ ಸರಿಸ ಮಾನವಾಗಿ ಹೆಗಲಿಗೆ ಹೆಗಲು ಹಚ್ಚಿ ಅನುಭವ ಮಂಟಪದ ಕೀರ್ತಿವಾರ್ತೆಯನ್ನು

ದಿಗ್‌ದೇಶಗಳಲ್ಲಿ ಹಬ್ಬಿ ಹರಡಿ ದಾಂಗುಡಿಯನ್ನಿಟ್ಟ ಅಸಂಖ್ಯಾತ ಅಜ್ಞಾತ ವಚನಕಾರರು ಕಾಲಗರ್ಭದಲ್ಲಿ ಅಡಗಿ ಹೋಗುತ್ತಿದ್ದಾರೆ. ಅವರ ವಚನಗಳನ್ನು ಬೆಳಕಿಗೆ ತರುವ ಜನತೆಯ ಮುಂದಿಡುವ ಮಹಾಕಾರ್ಯ ನಮ್ಮ ಮುಂದೆ ಬೆಟ್ಟದಷ್ಟಿದೆ. ಅದರಲ್ಲಿಯೂ ಕೆಳಸ್ತರದಿಂದ ಮೇಲೆದ್ದು ಬಂದ ಅಸಂಖ್ಯಾತ ವಚನಕಾರರ ವಚನಗಳು ಒಂದೊಂದಾಗಿ ಪ್ರತ್ಯೇಕವಾಗಿ ವಿಸ್ತಾರವಾದ ಪ್ರಸ್ತಾವನೆಯೊಂದಿಗೆ ಹೊರಬರಬೇಕಾಗಿದೆ, ಈ ಬಗೆಗೆ ವಿಶೇಷವಾದ ಅಧ್ಯಯನ ವಿಚಾರವಿಮರ್ಶೆ ನಡೆಯಬೇಕಾಗಿದೆ. ಉದಾಹರಣೆಗಾಗಿ ಕೆಲವು ವಚನಕಾರರ ಹೆಸರುಗಳನ್ನು ಓದುಗರ ಸ್ಪಷ್ಟವಾದ ತಿಳುವಳಿಕೆಗಾಗಿ ಉಲ್ಲೇಖಿಸಲಾಗಿದೆ. ನಗೆಮಾರಿತಂದೆ, ಗಾವುದಿ ಮಾಚಯ್ಯ, ತಳವಾರ ಕಾಮಿದೇವ, ಕೀಲಾರ ಭೀಮಣ್ಣ, ತುರುಗಾಹಿ ರಾಮಣ್ಣ ಗುಪ್ತಮಂಚಣ್ಣ ಕಾಮಾಟದ ಭೀಮಯ್ಯ. ಕಿನ್ನರಿ ಬ್ರಹ್ಮಯ್ಯ, ಬಹುರೂಪಿ ಚೌಡಯ್ಯ, ಮಾದಾರ ಧೂಳಯ್ಯ, ಮೇದಾರ ಕೇತಯ್ಯ, ಸುಲಿಯ ಚಂದಯ್ಯ, ಸೂಜಿಕಾಯಕದರಾಮಿತಂದೆ, ವೈದ್ಯ ಸಂಗಣ್ಣ, ಅವಸರದ ರೇಚಣ್ಣ, ಹಡಪದ ರೇಚಣ್ಣ, ಹಡಪದ ಅಪ್ಪಣ್ಣ, ಹಡಪದ ಲಿಂಗಮ್ಮ, ಅರುವಿನ ಮಾರಿತಂದೆ, ಸುಂಕದ ಬಂಕಣ್ಣ, ಪುಷ್ಪದ ಸೋಮಯ್ಯ ಹೊಡೆಹುಲ್ಲು ಬಂಕಣ್ಣ, ಗಾಣದ ಕಣ್ಣಪ್ಪ, ಅಂಬಿಗರ ಚೌಡಯ್ಯ ಬಾಹೂರ ಬೊಮ್ಮಣ್ಣ, ಒಕ್ಕಲಿಗ ಮುದ್ದಣ್ಣ, ಉರಿಲಿಂಗಪೆದ್ದಿ, ಶಿವನಾಗಿಮಯ್ಯ, ಡೋಹರ ಕಕ್ಕಯ್ಯ, ಅಮುಗಿದೇವಯ್ಯ, ಕದಿರ ರೆಮ್ಮವ್ವೆ, ಕರುಳ ಕೇತಯ್ಯ, ಸೂಳೆ ಸಂಕವ್ವೆ, ಬೊಕ್ಕಸದ ಚಿಕ್ಕಣ್ಣ, ಬಾಚಿಕಾಯಕದ ಬಸವಣ್ಣ ಕಾಟಕೂಟಯ್ಯಗಳ ಧರ್ಮಪತ್ನಿ ರೇಚವ್ವೆ, ಕನ್ನಡಿ ಕಾಯಕದ ರೇವಮ್ಮ, ಎಲೆಗಾರ ಶಾಮಣ್ಣ, ಕೂಗಿನ ಮಾರಿತಂದೆ, ಕೊಟ್ಟಣದ ಸೋಮವ್ವೆ, ಗುಂಡಯ್ಯಗಳ ಧರ್ಮಪತ್ನಿ ಕೇತಲದೇವಿ, ದಸರಯ್ಯ, ದಸರಯ್ಯಗಳ ಧರ್ಮಪತ್ನಿ ವೀರಮ್ಮ, ಲದ್ದೆಯ ಸೋಮಯ್ಯ ಹೆಂಡದ ಮಾರಯ್ಯ, ಮೊದಲಾದವರ ಬಗೆಗೆ ವಿಶೇಷವಾದ ಕೆಲಸ ನಡೆದಂತೆ ತೋರುವದಿಲ್ಲ.

ಮೇಲೆ ಹೇಳಿದ ಕೆಳಸ್ತರದ ವಚನಕಾರರ ಶ್ರೇಣಿಯಲ್ಲಿ ನಿಲ್ಲುವ ಇನ್ನೊಬ್ಬ ಅನುಭಾವಿ ವಚನಕಾರ, ವೈಚಾರಿಕ ವಿವೇಚಕ, ಕಾಯಕ ಸಿದ್ಧಾಂತದ ಪ್ರತಿಪಾದಕನೇ ಕನ್ನಡಿ ಕಾಯಕದ ಅಮ್ಮಿದೇವಯ್ಯ.

ಅಮ್ಮಿದೇವಯ್ಯ, ಅಮ್ಮಿದೇವ ಎಂದು ಉಲ್ಲೇಖಗೊಂಡಿರುವ ಈತನ ಕಾಲವನ್ನು ಕನ್ನಡ ಕವಿಚರಿತೆಕಾರರು ೧೧೬೦ ಎಂದು ಗುರುತಿಸಿರುವದು ಸಮಂಜಸವಾಗಿದೆ. ಈತನ ಬಗೆಗೆ ಕಾವ್ಯ ಪುರಾಣಗಳು ರಚಿತವಾದಂತೆ ತೋರುವದಿಲ್ಲ. ಶಿವಶರಣರ ಕಥಾರತ್ನಕೋಶದಲ್ಲಿಯೂ ಉಲ್ಲೇಖಗೊಂಡಿಲ್ಲ. ಈತನ ಬಗೆಗೆ ಬಿಡಿ ಲೇಖನಗಳು ಕೂಡ ಪ್ರಕಟವಾದಂತಿಲ್ಲ. ಸುದೈವದಿಂದ ಸಕಲ ಪುರಾತನರ ವಚನಗಳು (ಸಂ. ೩) ರಲ್ಲಿ ಈತನ ೧೦ ವಚನಗಳು ಪ್ರಕಟವಾಗಿವೆ. ಗಣಸಹಸ್ರನಾಮಾವಳಿಯಲ್ಲಿ ಈತನ ಹೆಸರು ಉಲ್ಲೇಖಗೊಂಡಿದೆ.



ದೊರೆತಿರುವ ಈತನ ೧೦ ವಚನಗಳ ಆಧಾರದ ಮೇಲೆ ಕೆಲವು ವಿಷಯಗಳನ್ನು ಗುರುತಿಸಬಹುದಾಗಿದೆ. ಈತನ ವಚನಗಳ ಅಂಕಿತ 'ಚೆನ್ನಬಸವಣ್ಣಪ್ರಿಯ ಕಮಳೇಶ್ವರಲಿಂಗ" ಈ ಅಂಕಿತದ ಆಧಾರದ ಮೇಲೆ ಹೇಳುವದಾದರೆ ಈತನು ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನಿಂದ ಲಿಂಗದೀಕ್ಷೆ ಪಡೆದಿರಬಹುದು. ಆತನ ಪರಮ ಶಿಷ್ಯೋತ್ತಮನಾಗಿ ಬೆಳೆದಿರಬಹುದು. ಈತನ ಆರಾಧ್ಯ ದೇವತೆ ಕಮಳೇಶ್ವರ, ಈತನು ಬಸವ ಸಮಕಾಲೀನನೆಂಬುದಕ್ಕೆ ಸಾಕ್ಷಿಯಾಗಿ ಆತನ ವಚನಗಳ ಒಡಲಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುರಾಯ, ನಿಜಗುಣ ಮೊದಲಾದವರ ಹೆಸರುಗಳು ಬಂದಿವೆ. ಇವನು ಸದುವಿನಯದ ಪ್ರತಿ ಮೂರ್ತಿಯೆ ಆಗಿದ್ದನೆಂಬುದಕ್ಕೆ 'ಚೆನ್ನಬಸವಣ್ಣಂಗೆ ಭೃತ್ಯನಾಗಿ, ಶರಣತತಿಗೆ ಲೆಂಕನಾಗಿ, ಸತ್ಯಗುರುಚರದ ಕರ್ತೃಸ್ವರೂಪಕ್ಕೆ ಡಿಂಗರಿಗ ಉಭಯ ಡಿಂಗರಿಗರ ಪ್ರತಿಡಿಂಗರಿಗರ ಕಂದನೆಂದು ಪ್ರತಿ ಪಾಲಿಸಿಕೋ' ಎಂಬುದೇ ನಿದರ್ಶನ 'ಬೆನ್ನಿಗೆ ಬಸವಣ್ಣ, ಕಾಲಿಗೆ ಚೆನ್ನಬಸವಣ್ಣ ಬಾಯಿಗೆ ಪ್ರಭುದೇವರು, ಬಸುರಿಗೆ ನಿಜಗುಣ ಈ ರೋಗವ ಬಲ್ಲವರಿವರು' ಎಂಬುದಾಗಿ ಚಮತ್ಕಾರಿಕವಾಗಿ ನಿರೂಪಿಸಿದ ಅಮ್ಮಿದೇವನು ಬಸವಾದಿ ಪುಂಗವದರ ಒಡನಾಟದಲ್ಲಿ ಬಂದಿದ್ದನೆಂಬುದನ್ನು ಊಹಿಸಬಹುದು. ತಾನು ವಾದಿ ಪುಂಗವದರ... 

ಕೈಕೊಂಡ ಕಾಯಕದ ಪರಿಕರಗಳ ಮೂಲಕವಾಗಿ ತತ್ವ ಸಿದ್ಧಾಂತವನ್ನು, ಲಿಂಗಾಂಗ ಸಾಮರಸ್ಯವನ್ನು ವಚನಗಳ ಮೂಲಕ ಹೆಣೆದಿರುವದನ್ನು ನೋಡಿದರೆ ಆತನು ಅನುಪಮ ಅನುಭಾವಿ ಪಟ್ಟಲ ಜ್ಞಾನಿಯಾಗಿರಬೇಕೆಂದು ಹೇಳಬಹುದಾಗಿದೆ. ಈ ಬಗೆಯಾಗಿ ಅನೇಕ ವಚನಕಾರರು ತಾವು ಕೈಕೊಂಡ ಕಾಯಕದಿಂದಲೇ ಪ್ರತಿಮಾ ರೂಪಕಗಳ ಮೂಲಕ ಅರ್ಥಪೂರ್ಣವಾಗಿ ವಚನಗಳನು ರೂಪಿಸಿದ್ದಾರೆ.

## ವಚನಗಳು

ಬರೆದವರು— ಜಿ. ವಿ. ಚನ್ನಯ್ಯ ಹಿರೇಮಠ

ಭೋಕ್ತೃಗಳು ಭೋಜ್ಯ ವಸ್ತುಗಳು ದೇಹಗಳೂ
ಸಂಪತ್ತುಗಳಿಗೂ ಜಗತ್ಕಾರಣನು ಆ ಮಹಾ ಘನವಸ್ತುವಯ್ಯ
ಅವೆಲ್ಲಕ್ಕೂ ಆಧಾರ ಕಾರಣ ಆಶ್ರಯುವಯ್ಯ
'ಅದು ಅತ್ಯತಿಷ್ಠದಶಾಂಗುಲವಯ್ಯ'
ಅಂಥ ಅವಿನಾಶಿ ನಿರವಯ ನಿರಾಲಂಬ ಪರವಸ್ತುವೇ ೧
ಪರಬ್ರಹ್ಮ ಪರಶಿವನೇ ಸ್ಥಲವಯ್ಯ ಶಿವಲಿಂಗೇಶ
ಚೇತನಾ ಚೇತನ ರೂಪವಾದ ಆ ಪರ ವಸ್ತುವೇ ಸ್ಥಲವಯ್ಯ
ಉತ್ಪತ್ತಿ ಸ್ಥಿತಿ, ಲಯ ತಿರೋದಾನಗಳಿಗೆ ನಿಮಿತ್ತಯಾ
ಉಪಾದಾನ ಕಾರಣನು ಆದ ಆ ಮಹಾಘನವೇ ಸ್ಥಲವಯ್ಯಾ-ಯಾ-
ಲಿಂಗವಯ್ಯ ಅದು ಎಲ್ಲದಕ್ಕೂ ಪೂಜ್ಯವು ಆದ ಪರಬ್ರಹ್ಮವೇ. ೨
**ಸ್ಥೂಲವಯ್ಯಾ** ಶಿವಲಿಂಗೇಶ.

# ವಚನ ತತ್ವಸಾರ

ಲೇಖಕರು – ಶ್ರೀ ಸಿದ್ಧರಾಮೇಶ್ವರ ಶರಣರು (ಬೆಲ್ದಾಳ)

(ಕಳೆದ ಸಂಚಿಕೆಯಿಂದ ಮುಂದುವರೆದುದು)

## ೨೦. ಹರನೇ ತಾ ಗುರುವಾಗಿ ಬಂದ

ಶಿವನೇ ತಾನೆನಗೆ ಗುರುವಾಗಿ ಬಂದು
ಎನ್ನ ಸಂಸಾರ ಸಾಗರವ ದಾಂಟಿಸಿ
ಅಖಂಡ ಪರಚೈತನ್ಯ ಶಿವಲಿಂಗವ
ವಿಶ್ವದೊಳಗೆಲ್ಲಿಯೂ ಕಾಂಬಂತೆ ತೋರಿಸಿ
ವಿಶ್ವವ ಲಿಂಗದೊಳಗೆ ತೋರಿ
ಲಿಂಗವನೆನ್ನಂಗದೊಳ ಹೊರಗೆ ತೋರಿ
ಅಂಗದ ಲಿಂಗದೊಳಗಿರಿಸಿ ರಕ್ಷಿಸಿದನಯ್ಯಾ
ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

—ಸ್ವತಂತ್ರ ಸಿದ್ಧಲಿಂಗೇಶ್ವರರು.

**ಭಾವಾರ್ಥ :** ಬಸವಾದಿ ಶರಣರ ವಡನತತ್ವ ಸಿದ್ಧಾಂತದಲ್ಲಿ ಗುರುವೆಂದರೆ ? ನಿರಾಕಾರ ಪರಶಿವನ ಸಾಕಾರ ನಿಲವು ಎಂಬ ವಿಶ್ವಾಸವಿದೆ. ಅದಕ್ಕೆಂದೇ ಚನ್ನಬಸ ವಣ್ಣನವರು "ಹರ ತನ್ನ ರೂಪ ತೋರಬೇಕೆಂದು ಗುರುರೂಪಾಗಿ ಬಂದ" ಎಂದು ಹೇಳಿದ್ದಾರೆ. "ಸುರತರು ಮರವಲ್ಲ ಸುರಭಿ ತಾ ಹಸುವಲ್ಲ ! ಸಾಲಾಯುದ ನಿಜವ ತೋರುವ ಗುರುರಾಯ ನರನಲ್ಲ ! ಎಂದು ಸರ್ವಜ್ಞನು ಹೇಳುತ್ತಾನೆ. ಕಾಲಲ್ಲಿ ಪಾಪದ ಗುಂಡು ಕೊರಳಲ್ಲಿ ಪುಣ್ಯದಬೇಡು ಕಟ್ಟಿಕೊಂಡು ಮುಳಗುತ್ತ ತೇಲುತ್ತ ದಡವನ್ನು ಕಾಣದೆ ಸಂಸಾರದಲ್ಲಿ ಬಳಲುವ ಜೀವಿಗಳನ್ನು ಕಂಡು ಕರುಣಿಸಿ, ಹರನೇ ಗುರುರೂಪಾಗಿ ಬರುವನು.

ಜ್ಞಾನವೆಂಬ ದೋಣಿಯಿಂದ ಸಂಸಾರ ಸಾಗರವನ್ನು ದಾಟಿಸಿ ಸಮಾಧಾನ ವೆಂಬ ದಂಡೆಯಲ್ಲಿ ಕುಳ್ಳಿರಿಸಿ, ಸಮ್ಯಗ್ ಜ್ಞಾನ ದೃಷ್ಟಿಯನ್ನು ಅರಳಿಸುವನು. ಅಖಂಡವಾದ ಪರಾತ್ಪರ ವಸ್ತುವೆನಿಸಿದ ಶಿವಲಿಂಗವು ವಿಶ್ವದೊಳಗೆಲ್ಲಲ್ಲಿಯೂ ತುಂಬಿ ಚರಾಚರ ಜೀವಿಗಳಲ್ಲಿ ಚೈತನ್ಯ ವಸ್ತುವಾಗಿದೆ. ಆ ಲಿಂಗದೇವನನ್ನು ನೀನು ಎಲ್ಲೆ ಲ್ಲಿಯೂ ಕಾಣು ಎಂದು ದಿವ್ಯ ಜ್ಞಾನ ದೃಷ್ಟಿಯನ್ನೇ ಅರಳಿಸಿರುವನು. ಅನೇಕ ಗುರುಳೆ, ಮೊರೆ ತೆರೆಗಳು ವಿಶಾಲವಾದ ಸಮುದ್ರದಲ್ಲಿಯೇ ತೋರಿ ಅಲ್ಲಿಯೇ ಅಡಿ ಅಡಗುವಂತೆ, ಇಡೀ ವಿಶ್ವವೆಲ್ಲವು ಲಿಂಗದಲ್ಲಿಯೇ ತೋರಿ, ಲಿಂಗದಲ್ಲಿಯೇ ಅಡಿ ಅಡಗುವುದು ಎಂದು ಸದ್ಗುರುವು ತೋರುವನು,



ಲಿಂಗದೇವನು ಅಂಗದೊಳಗೆ ಅರಿವಾಗಿ ಹೊರಗೆ ಆಚಾರವಾಗಿದ್ದುದ ತೋರಿ, ಕಟ್ಟಿಗೆಯು ಅಗ್ನಿಯೊಳಗಿರಿಸಿದರೆ ಅಗ್ನಿಮಯವು ಆಗಿರುವಂತೆ, ಅಂಗವು ಲಿಂಗದೊಳ ಗಿರಿಸಿ ಸರ್ವಾಂಗವೆಲ್ಲವೂ ಲಿಂಗಮಯಗೊಳಿಸಿ ಸದ್ಗುರುವು ರಕ್ಷಿಸುವನು. ಅಜ್ಞಾನ, ಅನಾಚಾರದ ಅಸ್ಥಿರವು ಅಮಂಗಲವು ಆದ ಸಂಸಾರ ವಿಷಯಕ್ಕೆ ಹೇಸಿ ಗುರುಕರುಣೆ ಬಂದ ಮಾನವನು ಗುರು ಕೃಪೆಯಿಂದ ತನ್ನ ಸರ್ವಾಂಗವೆಲ್ಲವು ಚಿನ್ಮಯಲಿಂಗವನ್ನಾಗಿ ಮಾಡಿಕೊಳ್ಳುವನು. ಅದಕ್ಕಾಗಿ ಮಾನವನು ಭಾವ, ದುಃಖವನ್ನು ನೀಗಿ ಶಿವಸುಖ ವನ್ನು ಪಡೆಯ ಬೇಕಾದರೆ, ಗುರುಕಾರುಣ್ಯಕ್ಕೆ ಬರಬೇಕು. ಹರಪಥವನರಿವಡೆ ಗುರುಪಥವೆ ಮೊದಲು ಎಂದು ವಿಶ್ವಗುರು ಬಸವಣ್ಣನವರು ಹೇಳಿಲ್ಲವೇ ?

## ೨೧. ತಾಮಸ ಗುರು ತಾಮಸ ದೀಕ್ಷೆ

'ಅಡ್ಡಬಿದ್ದು ಶಿಷ್ಯನ ಮಾಡಿಕೊಂಬ ದಡ್ಡಪ್ರಾಣಿಗಳ ನೇನೆಂಬೆನಯ್ಯಾ'
ಏನೇನೂ ಅರಿಯದ ಎಡ್ಡಮಾನವರಿಗೆ ಉಪದೇಶವ ಮಾಡುವ
ಗೊಡ್ಡ ಮಾನವರ ಮುಖವ ತೋರದಿರಯ್ಯಾ
ಅದೇನು ಕಾರಣವೆಂದೊಡೆ ?
ಆ ಮೂಢ ಜೀವಿಯು ಪ್ರಪಂಚವ ಕಳೆಯಲಿಲ್ಲ.
ಅವನ ಪಂಚೇಂದ್ರಿಯಂಗಳು ಸಪ್ತವ್ಯಸನಂಗಳು
ಅಷ್ಟಮದಗಳೆಂಬ ಖೊಟ್ಟಿಗುಣಗಳ ಬಿಡಿಸಲಿಲ್ಲ.
ಸೂತಕ ಪಾತಕಂಗಳ ಕೆಡಿಸಿ ಮೂರು ಮಲಂಗಳ ಬಿಡಿಸಿ
ಮುಕ್ತಿ ಪಂಥಗಳನರುಹಲಿಲ್ಲ.
ಮಹಾಶೂನ್ಯ ನಿರಾಳ ನಿರಂಜನ ಲಿಂಗವ
ಕರ ಮನ ಭಾವ ಸರ್ವಾಂಗದಲ್ಲಿ ತುಂಬಿ ನಿತ್ಯನೆನಿಸಲಿಲ್ಲ.
ಇದನರಿಯದ ವ್ಯರ್ಥ ಕಾಯರುಗಳು ಗುರುವೆಂದಡೆ
ಪ್ರಮಥರು ಮೆಚ್ಚುವರೇ ? ಇಂತಪ್ಪ ಗುರುಶಿಷ್ಯರಿಬ್ಬರೂ
ಅಜ್ಞಾನಿಗಳು. ಅವರು ಇಹಲೋಕ ಪರಲೋಕಕ್ಕೆ
ಹೊರನೆಂದಾತನಂಬಿಗರ ಚೌಡಯ್ಯ. —ಅಂಬಿಗರ ಚೌಡಯ್ಯನವರು.

**ಭಾವಾರ್ಥ :** ಗುರುದೀಕ್ಷೆ ಇಲ್ಲದೆ ಮಾನವನಿಗೆ ಭವ ದುಃಖ ನಾಶವಾದಿ ಶಿವಸುಖ ಪ್ರಾಪ್ತಿಯಾಗದು. ಆದರೆ ಗುರುವು ಶಿಷ್ಯನಿಗೆ ಅರಿವು ಆಚಾರಗಳನ್ನಿತ್ತು ಭವಬಂಧನವನ್ನು ಪರಿಹರಿಸಿ ಶಿವಾನಂದ ಸುಖವನ್ನು ತೋರಲು ತಕ್ಕ ಸಮರ್ಥನಾಗಿ ರಬೇಕು.

"ದೀಕ್ಷಾ"ವೆಂಬ ಶಬ್ದದ ಅರ್ಥವೇ ಸೂಚಿಸುವಂತೆ ದಿ ಎಂದರೆ ಕೊಡುವುದು ಕ್ಷಾ ಎಂದರೆ ನಾಶಪಡಿಸುವುದು. ಏನು ಕೊಟ್ಟು ಏನು ನಾಶಪಡಿಸಬೇಕೆಂದರೆ ? ಸುಜ್ಞಾನ ಸದಾಚಾರಗಳು ಕೊಟ್ಟು ಅಜ್ಞಾನ ಅನಾಚಾರಗಳು ನಾಶಪಡಿಸಬೇಕು.

ಇದಲ್ಲದೆ ಕೆಲವು ಗುರುಗಳು ತಮ್ಮ ಶಿಷ್ಯರ ಸಂಖ್ಯೆ ಹೆಚ್ಚಾದರೆ ಕಾಣಿಕೆ ಹೆಚ್ಚುತ್ತದೆಂಬ ಆಸೆಯಿಂದ ಕಿರಿಯ ಮನದ ಮಾನವನಿಗೆ ಬಹಿರಂಗದ ಬರಿಯ ಸಂಸ್ಕಾರವನ್ನು ಅವನು ಒಲ್ಲೆನೆಂದರೂ ಒತ್ತಾಯದಿಂದ ಕೊಡುತ್ತಾರೆ. ಶಿಷ್ಯರೆಂದರೆ ಇವರ ಪಾಲಿನ ಆಸ್ತಿಯೆಂದೇ ತಿಳಿದುಕೊಳ್ಳುವರು. ಆಧ್ಯಾತ್ಮದ ಅರಿವು ಆಚಾರಗಳ ಮಹತ್ವ ಮತ್ತು ಅವಶ್ಯಕತೆಯನ್ನರಿಯದ ದಡ್ಡ ಮಾನವರಿಗೆ ದೀಕ್ಷಾ ಉಪದೇಶವನ್ನು ಮಾಡುವ ಗುರುವು ಗೊಡ್ಡ ಮಾನವನು. ಅವನ ಮುಖವ ನೋಡ ಬಾರದೆಂದು ಅಂಬಿಗರ ಚೌಡಯ್ಯ ಶರಣರು ಹೇಳುವರು. ಏಕೆಂದರೆ ಅದು ಸಾತ್ವಿಕ ದೀಕ್ಷೆ ಎನಿಸದೆ ತಾಮಸ ದೀಕ್ಷೆ ಎನಿಸುವುದರಿಂದ ಈ ತಾಮಸ ಸಾತ್ವಿಕ ದೀಕ್ಷೆಯ ವಿಚಾರವನ್ನರಿತ ಗುರುವು ಇಲ್ಲಿ ವಿವರಿಸಿದ ಸಾತ್ವಿಕ ದೀಕ್ಷೆಯನ್ನು ಮಾಡಿ ಶಿಷ್ಯನ ನರಜನ್ಮವನ್ನು ಕಳೆದು ಹರಜನ್ಮವನ್ನಾಗಿ ಮಾಡಬೇಕು, ಹೇಗೆಂದರೆ ಮಾನವನಿಗೆ ಮುಸುಕಿದ ಅಜ್ಞಾನ, ಮಾಯೆ, ಮೋಹಗಳು, ಮತ್ತು ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚವನ್ನೆಲ್ಲ ಅರಿವು ಆಚಾರಗಳನ್ನಿತ್ತು ಕಳೆಯಲಿಲ್ಲ. ಅವನ ಪಂಚೇಂದ್ರಿಯಗಳಾದ ಶ್ರೋತ್ರ, ತ್ವಚ, ನೇತ್ರ, ಜಿಹ್ವೆ ಮತ್ತು ಪ್ರಾಣಗಳ ಕೀಳು ವಿಷಯ ದೋಷವನ್ನು ತೊಡೆಯಲಿಲ್ಲ. ಮತ್ತು, ತನುವ್ಯಸನ, ಮನುವ್ಯಸನ, ಧನು ವ್ಯಸನ. ರಾಜ್ಯವ್ಯಸನ. ವಿಶ್ವವ್ಯಸನ, ಉತ್ಸಾಹ ವ್ಯಸನ, ಸೇವಕವ್ಯಸನಗಳೆಂಬ ಸಪ್ತ ವ್ಯಸನಗಳು ಹಾಗೂ ಕುಲ, ಛಲ, ಧನ, ರೂಪ, ಯೌವ್ವನ ವಿದ್ಯೆ, ರಾಜ್ಯ ತಪಮದ ಗಳೆಂಬ ಅಷ್ಟ ಮದಗಳೆಂಬ ಕೆಟ್ಟ ಗುಣಗಳನ್ನೆಲ್ಲ ಬಿಡಿಸಲಿಲ್ಲ. ಜಾತಿಸೂತಕ, ಜನನ ಸೂತಕ, ಪ್ರೇತಸೂತಕ, ರಜಸೂತಕ, ಉಚ್ಛಿಷ್ಟ ಸೂತಕಗಳೆಂಬ ಪಂಚಸೂತಕಗಳನ್ನು ಹಾಗು ಪರಧನ, ಪರಸ್ತ್ರೀ, ಪರನಿಂದೆ, ಪರಹಿಂಸೆ, ಪರದೈವಗಳೆಂಬ ಪಂಚಮಹಾ ಪಾತಕಗಳನ್ನು ತೆಗೆಯಲಿಲ್ಲ. ತನು, ಮನ, ಭಾವಗಳಲ್ಲಿ ಮುಸುಕಿದ ಆಣವ ಮಾಯಾ ಕಾರ್ಮಿಕ ಮಲತ್ರಯಗಳನ್ನು ಬಿಡಿಸಲಿಲ್ಲ, ಮತ್ತೆ ಅವನಿಗೆ ಲಿಂಗಾಂಗ ಸಾಮರಸ್ಯದ ಮಾರ್ಗವನ್ನಂತೂ ತೋರಲೇ ಇಲ್ಲ. ತನು, ಮನ, ಭಾವಗಳಲ್ಲಿ ನಿಷ್ಕಲ ನಿರಂಜವಾದ ಪರವಸ್ತುವನ್ನು ಇಷ್ಟ. ಪ್ರಾಣ, ಭಾವಲಿಂಗವಾಗಿ ಸ್ಥಾಪಿಸಿ ನಿತ್ಯ ಲಿಂಗಾನಂದ ಸುಖವನ್ನು ತೋರಲೇ ಇಲ್ಲ. ಬರೀ ವ್ಯರ್ಥವಾಗಿ ಬಹಿರಂಗಕ್ಕೆ ಸಂಸ್ಕಾರ ಮಾಡಿದರೆ ಅದು ದೀಕ್ಷೆಯೇ ಅಲ್ಲ. ಗುರುವು ಇದನ್ನರಿತಿರಬೇಕು, ಅರಿಯ ದವನು ಹರರೂಪಿ ಗುರುವಲ್ಲ, ವ್ಯರ್ಥ ಕಾಯದ ಮಾನವನು. ಆತನನ್ನು ಗುರು ವೆಂದರೆ ಶರಣರು ಮೆಚ್ಚುವದಿಲ್ಲ. ಇಂಥಹ ಗುರು ಮತ್ತು ಈತನನ್ನು ನಂಬಿದ ಶಿಷ್ಯ ಇಬ್ಬರೂ ಅಜ್ಞಾನಿಗಳೆ. ಇವರಿಗೆ ಲಿಂಗಾಂಗ ಸಾಮರಸ್ಯ ಎಂದೆಂದಿಗೂ ಸಾಧ್ಯ ವಿಲ್ಲ. ಇವರನ್ನು ಆಧ್ಯಾತ್ಮದಿಂದ ಬಹಿಷ್ಕರಿಸಲು ಯೋಗ್ಯರೆಂದು ಶರಣರು ನುಡಿದಿ ರುವರು. ಇಂಥಹ ಅಜ್ಞಾನಿ ಗುರುವಿನಿಂದ ದೀಕ್ಷೆ ಪಡೆದುಕೊಂಡರೆ ಯಾವ ಲಾಭವೂ ಇಲ್ಲ. ಇದನ್ನು ಮಾನವನು ಅರಿತಿರಬೇಕು,



## ೨೨. ತಾಮಸ ಶಿಷ್ಯ ತಾಮಸ ದೀಕ್ಷೆ

ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ.
ಮಣ್ಣಪುತ್ತಳಿಯ ಮಾಣದೆ ಜಲದಲ್ಲಿ ತೊಳೆದರೆ
ನಿಚ್ಚ ನಿಚ್ಚಕ್ಕೆ ಕೆಸರಹುದಲ್ಲದೆ ಅದರಚ್ಚುಗ ಬಿಡದಣ್ಣಾ
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಶಿವಭಕ್ತನಹನೋ ಕೂಡಲ ಸಂಗಮದೇವಾ

—ವಿಶ್ವಗುರು ಬಸವಣ್ಣನವರು

**ಭಾವಾರ್ಥ :** ಯೋಗ್ಯತೆ ಇಲ್ಲದ ಗುರುವು ಅಯೋಗ್ಯ ಶಿಷ್ಯನಿಗೆ ಉಪದೇಶವ ಮಾಡಿದರೆ ಅದು ತಾಮಸ ದೀಕ್ಷೆಯಾದಂತೆ. ಗುರುವು ಯೋಗ್ಯನಾಗಿದ್ದರೂ ಅಧ್ಯಾತ್ಮದಲ್ಲಿ ಆಸಕ್ತಿ ಇಲ್ಲದ ಅಯೋಗ್ಯ ಶಿಷ್ಯನಿಗೆ ಉಪದೇಶವ ಮಾಡಿದರೆ ಅದು ಕೂಡ ತಾಮಸ ದೀಕ್ಷೆಯಾಗುವುದು. ಅದನ್ನೆ ಬಸವಣ್ಣನವರು ಈ ವಚನದಲ್ಲಿ ತಿಳಿಸುತ್ತಾರೆ.

ಒಬ್ಬ ಮೂಢಭಕ್ತಿಯ ಭಾವುಕನು ಗಣೇಶ ಚೌತಿಯಂದು ಪಶುಗಳ ಸಗಣಿ ಯಿಂದ ಗಣಪತಿಯ ಮೂರ್ತಿಯನ್ನು ಮಾಡಿ ಬಹು ಭಕ್ತಿಯಿಂದ ಸುಗಂಧಮಯ ವಾದ ಸಂಪಿಗೆ ಪುಷ್ಪಗಳನ್ನು ಆ ಮೂರ್ತಿಯ ತುಂಬೆಲ್ಲ ಮುಚ್ಚಿ ಧೂಪ ದೀಪಾರತಿ ಗಳಿಂದ ವೈಭವದ ಪೂಜೆಮಾಡಿದರೆ ಅದರ ದುರ್ಗಂಧವಳಿದು ಸುಗಂಧವಾಗದು. ಆ ದುರ್ವಾಸನೆಯಲ್ಲಿ ಹುಳಗಳಾಗುವುದು ತಪ್ಪದು. ಮಣ್ಣಿನಿಂದ ಮಾಡಿದ ಮೂರ್ತಿಗೆ ತಿಳಿನೀರಿನಿಂದ ತೊಳೆದರೆ ಬರೀ ಕೆಸರೇ ಹೆಚ್ಚುತ್ತ ಬಂದು ಆ ಪುತ್ತಳಿಯೇ ನಾಶ ವಾಗುವದಲ್ಲದೆ ಕಲ್ಲು ಕಂಚಿನ ಮೂರ್ತಿಗಳಂತೆ ಉಳಿದು ಹೊಳೆಯದು.

ಅದರಂತೆಯೇ ಅಜ್ಞಾನಾಂಧಕಾರದಲ್ಲಿ ಸಿಕ್ಕು ಅನ್ಯಾಯ ಅನಾಚಾರಗಳನ್ನು ಮಾಡುತ್ತ ಪರಧನ, ಪರಸ್ತ್ರಿ ಪರನಿಂದೆ ಹಿಂಸೆ ದುರ್ವ್ಯಸನ ಮುಂತಾದ ದುರಾಚಾರ ದಲ್ಲಿ ಆಸಕ್ತನಾದ ಲೌಕಿಕ ಮಾನವನಿಗೆ ಶಿವದೀಕ್ಷೆ ಕೊಟ್ಟರೆ ಆತ ಶಿವಭಕ್ತನಾಗ ಲಾರನು. ದೀಕ್ಷೆ ಎಂದರೆ ಮಾನವನ ದುರ್ಭಾವನೆ ದುರ್ಗುಣ ದುರಾಚಾರಗಳನ್ನು ಕಳೆದು ಸದ್ಭಾವ ಸದ್ಗುಣ ಸದಾಚಾರಗಳನ್ನು ಕೊಡುವುದೇ ಆಗಿದೆ. ಬಸವಾದಿ ಶರಣರು ಲೌಕಿಕರಿಗೆ ದೀಕ್ಷೆ ಕೊಡಬಾರದೆಂದು ಹೇಳುವುದಿಲ್ಲ. ಅವರ ತತ್ವಗಳು ಲೌಕಿಕರಿಗಾಗಿಯೇ ಇವೆ, ಆದರೆ ಮರವೆಯ ಮಾನವನು ತಾನು ಅರಿಯದೆ ಮಾಡು ತಿದ್ದ ಅನ್ಯಾಯ ಅನಾಚಾರಗಳ ಬಗ್ಗೆ ಪಶ್ಚಾತ್ತಾಪಪಟ್ಟು ಸಂಸಾರ ಹೇಯಸ್ಥಲದಲ್ಲಿ ವಿವರಿಸಿದಂತೆ ಹೇಸಿ, ಗುರುವಿನಲ್ಲಿಗೆ ಬಂದವನಾಗಿರಬೇಕು. ಅಂಥವನಿಗೆ ಮಾಡಿದ ದೀಕ್ಷಾ ಸಂಸ್ಕಾರವು ಸಾರ್ಥಕವಾಗುವುದು। ಹಿಂದುಮುಂದು ನೋಡದೆ ಅರಿಯದವ ನಿಗೆ ದೀಕ್ಷೆ ಮಾಡಿದರೆ ಮಣ್ಣಿನ ಮೂರ್ತಿಗೆ ನೀರಿನಲ್ಲಿ ತೊಳೆದರೆ ಬರಿ ಕೆಸರೇ ಹೊರ

ಡುವಂತೆ ಇವನಲ್ಲಿ ಅವಗುಣ ಡಂಭಾಚಾರಗಳೇ ಹೆಚ್ಚುತ್ತವಲ್ಲದೆ ಮೂಢಾಚಾರ ಶುಷ್ಕಾಚಾರಗಳೇ ಮುಂದಾಗುತ್ತವೆ. ವಿಶ್ವಗುರು ಬಸವಣ್ಣನವರ ಅಪ್ಪಣೆಯಂತೆ ತಾಮಸ ದೀಕ್ಷೆಯನ್ನು ಮಾಡದೆ ಸಾತ್ವಿಕ ದೀಕ್ಷೆ ಮಾಡಿದರೆ ಮಾನವನು ಮಹಾದೇವನಾಗುವನು. ನರನೇ ಹರನಾಗುವನು ಅಂಗನೇ ಲಿಂಗವಾಗಿ ಕಂಗೊಳಿಸುವನು. ಇಂಥಹವನೇ ಲಿಂಗಾಯತನೆನಿಸುವನು. ಈ ತನ ಬದುಕೆ ಲಿಂಗಪ್ರಸಾದದ ಬದುಕು.

## ೨೩. ಸಾತ್ವಿಕ ಗುರು ಸಾತ್ವಿಕ ದೀಕ್ಷೆ

"ಒಳಗೆ ಶೋಧಿಸಿ ಹೊರಗೆ ಶುದ್ಧ ಪಿಸಿ"

ಒಳಹೊರಗೆಂಬ ಉಭಯ ಶಂಕೆಯು ಕಳೆದು
ಸ್ಪಟಿಕದ ಶಲಾಕೆಯಂತೆ ತಲೆವೆಳಗು ಮಾಡಿ
ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ
ಶಿಷ್ಯನ ಸರ್ವ ಪ್ರಪಂಚವ ನಿವೃತ್ತಿಯಂ ಮಾಡಿ
ನಿಜೋಪದೇಶವನ್ನಿತ್ತು ಆ ಶಿಷ್ಯನ ನಿಜದಾದಿಯನ್ನೈದಿಸುವ-
ನೀಗ ಜ್ಞಾನ ಗುರು. ಆ ಸಹಜ ಗುರುವೀಗ ಜಗದಾರಾಧ್ಯರು
ಅವರ ಶ್ರೀ ಪಾದಕ್ಕೆ ನಮೊ ನಮೊ ಎಂಬೆ ಕಾಣಾ
ಚನ್ನಮಲ್ಲಿಕಾರ್ಜುನಾ.

—ಅಕ್ಕಮಹಾದೇವಿ

**ಭಾವಾರ್ಥ :** ವೈರಾಗ್ಯದ ಮೇರುವೆನಿಸಿದ ಅಕ್ಕಮಹಾದೇವಿಯವರು ತಮ್ಮ ಈ ವಚನದಲ್ಲಿ ಯೋಗ್ಯ ಗುರುವು ಯೋಗ್ಯ ಶಿಷ್ಯನಿಗೆ ಮಾಡುವ ಸಾತ್ವಿಕ ದೀಕ್ಷೆಯ ವಿವರವನ್ನು ಅರುಹುತ್ತಾರೆ.

ಶಿಷ್ಯನು ಮರವೆಯ ಸಂಸಾರದಲ್ಲಿ ಅರಿಯದೆ ಅನುಭವಿಸುತ್ತಿವ ಕೀಳು ವಿಷಯ ಸುಖದ ಹೇಯತೆ ಮತ್ತು ನಶ್ವರತೆಗಳನ್ನರಿತು ಹೇಗೆ ಶ್ರೇಷ್ಠ ಶಿವ ಸುಖವನ್ನು ಪಡೆಯುವ ಉತ್ಕಟ ಆಕಾಂಕ್ಷೆಯನ್ನು ಹೊತ್ತು ಬಂದವನಾಗಿರಬೇಕು, ಸದ್ಗುರುವಾದರೂ ಶಿವಯೋಗ ಸಾಧನೆಯಿಂದ ಸಕಲೇಂದ್ರಿಯ ಗಳನ್ನು ಜಯಿಸಿ ಶಿವಯೋಗಾನಂದವನ್ನನುಭವಿಸಿದವನಾಗಿದ್ದು ಶರಣು ಬಂದ ಶಿಷ್ಯನ ಭವ ಬಾಧೆಯನ್ನು ಕಂಡು ಕರುಣೆಯಿಂದ ಹೃದಯವಕರಗಿ ಅನುಕಂಪ ಭಾವ ತಳೆದವನಾಗಿರಬೇಕು. ಇಂಥಹ ಗುರುವು ಮೊದಲು ಶಿಷ್ಯನ ಅಂತಕರಣಗಳನ್ನು ಶೋಧಿಸಬೇಕು, ಹೇಗೆಂದರೆ ? ಕುಮನ, ಕುಬುದ್ಧಿ, ಕುಚಿತ್ತ, ಅಹಂಕಾರಗಳೆಂಬ ಮಲಿನತೆಯನ್ನು ಸುಜ್ಞಾನ ಜಲವನ್ನು ಬಿಟ್ಟು ತೊಳೆದು ಸುಮನ, ಸುಬುದ್ಧಿ, ಸುಚಿತ್ತ, ನಿರಹಂಕಾರಗಳನ್ನಾಗಿ ಮಾಡಿ ಒಳಗೆ ಶೋಧಿಸಬೇಕು. ಪರಧನ, ಅಪಹಾರ, ಪರಸ್ತ್ರೀಗಮನ, ಪರನಿಂದೆ, ಹಿಂಸೆ, ಅಭಕ್ಷ ಭಕ್ಷಣೆ ಮುಂತಾದ ಸ್ಥೂಲ ಶರೀರದಿಂದ ಮಾಡುವ ದುಷ್ಕ್ರಿಯೆಗಳನ್ನು ಬಿಡಿಸಿ ಸತ್ಕ್ರಿಯೆಗಳನ್ನು ತೊಡಿಸಿ ಹೊರಗೆ ಶುದ್ಧೀಕರಿಸಬೇಕು. ಆಗ ಒಳಹೊರಗೆಂಬ ಉಭಯ ಶಂಕೆಯಳಿದು ಶುದ್ಧ ಸ್ಪಟಿಕದಂತಾಗುವುದು.

[ಕವ್ಹರ ೩ನೇ ಪುಟ ನೋಡಿರಿ]

# ಗುರುಧರ್ಮ ನಿರೂಪಣೆ

ಲೇಖಕರು— ಶ್ರೀ ವೀರಪ್ಪ ಬಸಪ್ಪ ಬಿಳೆಅಂಗಡಿ B.A.LL.B. ಹುಬ್ಬಳ್ಳಿ

[ ಕಳೆದ ಸಂಚಿಕೆಯಿಂದ ಮುಂದುವರೆದುದು ]

ಸೂರ್ಯನನ್ನು ಅವನ ಪ್ರಖರವಾದ ಕಿರಣಗಳಿಂದ ಅರಿತುಕೊಳ್ಳುವಂತೆ ಸದ್ಗುರುವನ್ನು ಆತನ ದಿವ್ಯತೇಜಸ್ಸಿನಿಂದ ಪ್ರಕಾಶಿಸಲ್ಪಡುವ ಮುಖಮುದ್ರೆ ನಯವಿನಯ ಮತ್ತು ಶಿವಾನುಭವದ್ಯೋತಕಕೃತಿ ಈ ಮೊದಲಾದವುಗಳಿಂದ ಗೊತ್ತುಮಾಡಿಕೊಳ್ಳಬಹುದು. ಮಲಿನ ವಸ್ತ್ರದಲ್ಲಿ ಕಟ್ಟಿದ ರತ್ನವು ತನ್ನ ಪ್ರಭೆಯಿಂದ ಅನ್ಯರನ್ನು ಚಕಿತರಾಗಿ ಮಾಡುವಂತೆ, ಶಿವಸ್ವರೂಪವು ಅಳವಟ್ಟ ಸದ್ಗುರುವು ನೋಡುವವರ ಕಣ್ಣಿಗೆ ಹುಚ್ಚನಂತೆ ಮತ್ತು ನೀಚಜಾತಿಯವನಂತೆ ಕಂಡರೂ ಒಳಗಿನ ಶಿವತೇಜಸ್ಸು ಸ್ವಯಂಪ್ರಕಾಶವಾಗುತ್ತದೆ. ಇತ್ತಲಾಗಿ ಕೆಲವು ವೇಷಧಾರಿಗಳೂ, ಅಜ್ಞಾನಿಗಳೂ ಜನರಿಗೆ ಮೋಸಮಾಡುವ ದೆಸೆಯಿಂದ ಒಳ್ಳೆಯ ಮಡಿಹುಡಿಯವರಂತೆ ಕಾಣಿಸಿಕೊಂಡು ಮರುಳರ ಮುಂದೆ ತಮ್ಮ ಗೊಡ್ಡಾಟವನ್ನು ಹೂಡಿ ಅವರಿಂದ ನಾಲ್ಕು ದುಡ್ಡು ಸಂಪಾದನ ಮಾಡಿ ತಮ್ಮ ಹೊಟ್ಟೆಯನ್ನು ಹೊರಕೊಳ್ಳುವ ಮಾರ್ಗಮಾಡಿಕೊಳ್ಳುತ್ತಾರೆ. ಇಂಥವರನ್ನು ಗುರುಗಳೆಂದು ನಂಬಿದವನು ಕುರುಡರನ್ನು ಹಿಂಬಾಲಿಸಿ ತಗ್ಗಿನಲ್ಲಿ ಬಿದ್ದಂತೆ, ತೂತುಬಿದ್ದ ಡೋಣಿಯಲ್ಲಿ ಕೂತು ನದಿಯನ್ನು ದಾಟಲನುವಾದವನಂತೆ ನಾಶಕ್ಕೊಳಗಾಗುವನು. ಗುರುವು ಬೇಕೆನ್ನುವವನು ಚನ್ನಾಗಿ ಪರೀಕ್ಷೆ ಮಾಡಿ ಅವನ ವರ್ತನವನ್ನು ಮನಗಂಡು ಅನಂತರ ಅವನನ್ನು ಹಿಂಬಾಲಿಸಬೇಕು *

ಗುರುಸ್ಥಳವನ್ನು ಅಲಂಕರಿಸಿದವರು ನಿರ್ದೋಷಿಗಳೂ ಪಾಪವಿರಹಿತರೂ

* Compare "There are many who though immersed in ignorance, yet in the pride of their hearts fancy they know every thing and not only do not stop there, but offer to take others on their shoulders, and thus the blind leading the blind, both fall into the ditch- ಅವಿದ್ಯಾಯಾಮಂತರೆ ವರ್ತಮಾನಾಃ ಸ್ವಯಂಧೀರಾಃ ಪಂಡಿತಮನ್ಯಮಾನಾಃ । ಜಘನ್ಯಮಾನಾಃ ಪರಿಯಂತಿ ಅಂಧೇನೈವ ನೀಯಮಾನಾಯಥಾಂಧಾಃ ।" The teachers whose wisdom and truth shine like the light of the sun are very greatest the world has known and they are worshipped as gods by the major portion of mankind (Ibid pages 18-19)

ಸದಾಚಾರ ಸಂಪನ್ನರೂ ಧರ್ಮನಿಷ್ಠರೂ ಇರತಕ್ಕದ್ದು. ಅನಾಚಾರಿಗಳೂ ಅಜ್ಞಾನಿಗಳೂ ಕಪಟಾಚಾರವುಳ್ಳವರೂ, ಗುರುಗಳಾಗಲಿಕ್ಕೆ ಯೋಗ್ಯರಲ್ಲ. ಇಂಥವರನ್ನು ಗುರುಗಳಾಗಿ ಮಾಡಿದರೆ ಯಾವ ಸಮಾಜದಲ್ಲಿ ಇಂಥವರು ಮೆರೆಯುವರೋ ಆ ಸಮಾಜವೂ ಆ ಜನರ ನೀತಿ ಕಲ್ಪನೆಯೂ ಅತಿಶಯ ಹೀನಾವಸ್ಥೆಯನ್ನೈದುವದೆಂದು ಭಾವಿಸಬೇಕು. *

ಪವಿತ್ರವರ್ತನೆಯಿಲ್ಲದವರು ಗುರುಗಳಾಗಲಿಕ್ಕೆ ಯೋಗ್ಯರಲ್ಲ. ಭೌತಿಕ ಶಾಸ್ತ್ರ ವಿಶಾರದರಲ್ಲಿ ಒಂದು ವೇಳೆ ಪವಿತ್ರವರ್ತನೆ ಇಲ್ಲದಿದ್ದರೆ ಕೆಲಮಟ್ಟಿಗೆ ಕ್ಷಮ್ಯವೆನಿಸುವದು. ಯಾಕಂದರೆ ಆ ಶಾಸ್ತ್ರಹೇಳಲಿಕ್ಕೆ ಸಾಕಷ್ಟು ಬುದ್ಧಿಕೌಶಲ್ಯವಿದ್ದರಾಯಿತು. ಇದರಿಂದ ಕೆಲಸವು ಬಗಿಹರಿಯುವದು. ಆದರೆ ಧರ್ಮಗುರು

* Compare "To shield and defend an immoral clergy and above all to permit hime to ruleover and instruct others in their sacred duties is a disgrace to the election and the ordainment of the ministers of God. (Hly orders by marie corelli pages 482) what religion can an impure man teach ? The sine quanon of acquiring spiritual truth for oneself or for imparting it to others, is the purity of heart and soul. A vision of God or glimpse of the beyond, never comes until the soul is pure;

The only medium through which spirtual force can be transmitted is love. Any selfish motive such as the desire for gain or name, will immediately, destroy this conveying medium God is Love. Oney he who has known God as love can be a teacher of Godliness and God to man. He who is tearmed, sinless and un poluted by lust is the greatest knower of Brahma "ಶ್ರೋತ್ರಿಯೋ ವೃಜಿನೋ ಕಾಮಹತೊ ಯೊ ಬ್ರಹ್ಮವಿತ್ತಮಃ" This eye opener of the aspirant after religion is the teacher and there is an absolute need of such a teacher (Bhakti yoga by Swami Vivekananda pages 22-23).



ಇವರು ಅನಾಚಾರಿಗಳೂ ಮಲಿನಾತ್ಮರೂ ಇದ್ದರೆ ಶಿವ
ಳ ಸ್ಥಿತಿಯು ಹಾಗಲ್ಲ. ಮತ್ತು ಸದ್ಗುರುವಾದವನು ತನ್ನ ಶಿಷ್ಯರ ಕಲ್ಯಾಣ
ಳೆಯು ಸ್ಫುರಿಸಲಾರದು. ಕೇವಲ ಅವರ ಮೇಲಿನ ನಿಸ್ಸೀಮ ಪ್ರೇಮದಿಂದ ಯೋಗ್ಯ
ಕ್ಕಾಗಿ ಫಲಾಪೇಕ್ಷೆಯಿಲ್ಲದೆ ಅವರನ್ನು ಸನ್ಮಾರ್ಗದಲ್ಲಿ ನಿಲ್ಲಿಸುವನು. ಇಂಥ
ಾದವರನ್ನು ಕಂಡು ಹಿಡಿದು ಅವರ ಸದ್ಬೋಧೆಯಿಂದ ಶಿಷ್ಯನ ಸರ್ವ
ಸದ್ಗುರುವಿನ ಕೃಪಾಕಟಾಕ್ಷದಿಂದ ಮತ್ತು ಅಜ್ಞಾನವೆಂಬಪಾಶವೂ ಇಲ್ಲದಂತಾಗುವದು,
ಸಂಶಯುಗಳೂ ಕರ್ಮಬಂಧನಗಳೂ ಹೊಡೆದು ಹಾಕಿ ಇಂದ್ರಿಯನಿಗ್ರಹಬಲ
ಯಾವನು ಜೀವರ ವಿಷಯವಾಸನೆಯನ್ನು ಮತ್ತು ಪರಮಾತ್ಮ ವಿಷಯಕ ಚಿಂತನೆ
ದಿಂದ ಆವರಲ್ಲಿ ಉದಾತ್ತ ವಿಚಾರಗಳನ್ನು ಮಾಡುವನೋ ಅವನೇ ನಿಜವಾದ
ಯನ್ನು ಹುಟ್ಟಿಸಿ ಅಪ್ರಾಕೃತ ಗುಣಯುತರಾಗಿ ತಿಳಿಕೊಳ್ಳಬೇಕೆಂದೂ, ತಾನು
ಗುರುವು. ಯಾವಾತನು ತನ್ನ ನಿಜಸ್ವರೂಪವನ್ನು ಅದನ್ನು ದೊರಕಿಸುವ
ಮುಂದೆ ಎಲ್ಲಿಗೆ ಹೋಗತಕ್ಕದ್ದೆಂಬದನ್ನು ಕಂಡುಹಿಡಿದು ಅವನೇ
ಹವ್ಯಾಸದಲ್ಲಿಯೇ ಸರ್ವದಾ ಮಗ್ನನಾಗಿ ಪ್ರಯತ್ನಪರನಾಗಿರುವನೋ ಪರಮೇಶ್ವರನ
ಉತ್ತಮ ಶಿಷ್ಯನು. ಜೀವನಿಗೆ ಸದ್ಗುರುವು ದೊರೆಯಬೇಕಾದರೆ ಅನುಗ್ರಹವಾಗದು.
ಅನುಗ್ರಹವಾಗಬೇಕು. ಸದಾಚಾರವಿಲ್ಲದೆ ಪರಮೇಶ್ವರನ ಲಭಿಸುವನು. ಗುರು
ನಮ್ಮಲ್ಲಿ ಒಳ್ಳೆಯ ಭಾವನೆಗಳಿದ್ದರೆ ನಮಗೆ ಯೋಗ್ಯಗುರುವು ಸದಾಚಾರ
ವಿನ ಅವಶ್ಯಕತೆಯು ನಮಗೆ ಇರುವ ಕಾರಣ ನಾವು ಸನಾಚಾರಿಗಳಾಗಿ
ಸಂಪನ್ನರಾದ ಸದ್ಗುರುವನ್ನು ಆಶ್ರಯಿಸಬೇಕು.

ಪೂಜ್ಯವಸ್ತುವಿನಲ್ಲಿರುವ ಗುಣಗಳು ಪೂಜಕನಲ್ಲಿಯೂ ಪೂಜಕನಲ್ಲಿಯ ಗುಣ
ಗಳು ಪೂಜ್ಯನಲ್ಲಿಯೂ ಪರಸ್ಪರಸಂಘಟನೆ ಸಲ್ಲಾಪ ಮೊದಲಾದವುಗಳಿಂದ ಪ್ರಾಪ್ತ
ವಾಗುವದು ಸಹಜವದೆ. ಹೇಗೆ ಶಿಕ್ಷಕನೋ ಹಾಗೆ ವಿದ್ಯಾರ್ಥಿಯು, ಎಂಬಲೋ
ಕದ ನುಡಿಯು ಈ ಮಾತಿಗೆ ಸಾಕ್ಷಿಯಾಗಿದೆ. ಆದ್ದರಿಂದ ಗುರುಶಿಷ್ಯರೀರ್ವರೂ
ಸಚ್ಛೀಲಸಂಪನ್ನರಾಗಲು ಯತ್ನಿಸಬೇಕು. ಇವರೀರ್ವರಲ್ಲಿ ಯೋಗ್ಯ ಶಿಕ್ಷಣವನ್ನು
ಹೊಂದಿ ಸದ್ವಿದ್ಯಯಿಂದ ಅಂತರ್ಗತ ಮಾಲಿನ್ಯವನ್ನು ತೊಳೆದು ಹಾಕಿ, ಶಾಂತಿ ಶಮೆ
ದಮೆ ದಾಕ್ಷಿಣ್ಯಾದಿ ಸದ್ಗುಣಗಳಿಂದ ಮಂಡಿತನಾಗಲಿಕ್ಕೆ ಗುರುವಿಗೆ ಇರುವಷ್ಟು
ಅವಕಾಶವು ಕುಟುಂಬಭರಣಕ್ಕಾಗಿ ಅಹೋರಾತ್ರಿ ದುಡಿದು ಪರಿಶ್ರಮಬಡುತ್ತಿರುವ
ಶಿಷ್ಯನಿಗಿರುವದಿಲ್ಲ. ಶಿಷ್ಯರು ತಮ್ಮ ಪ್ರಾಪಂಚಿಕ ವ್ಯವಹಾರಗಳಲ್ಲಿ ಮಗ್ನರಾಗಿ
ದ್ದರೂ. ಅವರಿಗೆ ಅನಾಯಾಸವಾಗಿ ಧರ್ಮೋಪದೇಶವು ಕೈಸೇರಬೇಕೆಂದು ಗುರು
ಪೀಠಗಳು ಸರ್ವಸಮಾಜದಲ್ಲಿ ಏರ್ಪಟ್ಟಿರುವವು. ಗುರುಗಳ ಉದರನಿರ್ವಾಹವು
ನಿರಾತಂಕವಾಗಿ ಸಾಗಬೇಕೆಂದು ಶಿಷ್ಯರೆಲ್ಲರೂ ತಾವು ದುಡಿದದ್ದರಲ್ಲಿ ಕೆಲವು ಭಾಗ
ವನ್ನು ಅನೇಕಪ್ರಕಾರದಿಂದ ಸಲ್ಲಿಸುತ್ತಿರುವರು. ಇವರಿಗೆ ಇರಲಿಕ್ಕೆ ಉಚಿತವಾಗಿ
ಮಠಗಳನ್ನು ಕಟ್ಟಿಸಿಕೊಡುವರು. ಸಾರಾಂಶ ಇವರ ಲೌಕಿಕ ಯಾತ್ರೆಯು ಸುಸೂತ್ರ
ಸಾಗಬೇಕೆಂದು ಎಲ್ಲವಿಧದಿಂದ ಸೌಕರ್ಯಗಳನ್ನುಂಟು ಮಾಡಿಕೊಡುವರು:

ಅನೇಕ ತರದ ಕಷ್ಟನಷ್ಟಗಳನ್ನು ವಹಿಸಿ ತಮ್ಮ ಹೊಟ್ಟೆಯನ್ನು ಕೆಲವಟ್ಟಿಗೆ ಕಟ್ಟಿ, ಸರ್ವದಾಗುರುವಿನೋನ್ನತಿಯನ್ನು ಬಯಸುವ ಶಿಷ್ಯರ ಮಾನಸಿಕೋನ್ನತಿಯ ಬಗ್ಗೆ ಗುರುಗಳಾದವರು ಸ್ವಲ್ಪಾದರೂ ಚಟುವಟಿಕೆಯನ್ನು ತೋರಿಸುವದು ಯೋಗ್ಯವಲ್ಲವೇ ? ಆದರೆ ಎಷ್ಟು ಜನ ಗುರುಗಳು ನಮ್ಮ ಸಮಾಜದಲ್ಲಿ ಶಿಷ್ಯರ ಹೃತ್ತಾಪಕ್ಕಾಗಿ ಹಗಲಿರುಳು ಪ್ರಯತ್ನಬಡುತ್ತಾರೆ ? ಇಂಥವರ ಸಂಖ್ಯೆಯು ಕೈಬೆರಳುಗಳಿಂದ ಎಣಿಸಿದರೂ ಪೂರ್ತಿಯಾಗುವದಿಲ್ಲ. ಬಹುತರವಾಗಿ ಎಲ್ಲರೂ ಶಿಷ್ಯರ ಮನೆಯ ಅನ್ನವನ್ನುಂಡು ಕೊಬ್ಬಿ ಅಜ್ಞಾನ ಮುಸುಕಿದವರಾಗಿ ನಿದ್ರಾಲಸ್ಯ ಮೈಥುನ ಮೊದಲಾದ ಪಶುತುಲ್ಯವಾದ ಅಶುಭಕಾರ್ಯಗಳಲ್ಲಿ ಆಸಕ್ತರಾಗಿ ಗುರುಧರ್ಮ ಪರಾಙ್ಮುಖರಾಗಿರುವರು. ಯಾರಾದರೂ ಇವರಿಗೆ ತಮ್ಮ ನಿಜಸ್ಥಿತಿಯ ಬಗ್ಗೆ ತಿಳಿಹೇಳಹೋದರೆ ಅವರೊಡನೆ ಕೆಣಕಿ ಮಾತಾಡುವರು. ಮತ್ತು ಯಾರಾದರೂ ತಮ್ಮ ಕರ್ತವ್ಯದ ಬಗ್ಗೆ ಎಚ್ಚರಗೊಳಿಸಲಿಕ್ಕೆ ಅಧಿಕಾರಿಗಳಿಲ್ಲವೆಂದು ಮದೋನ್ಮತ್ತರಾಗಿ, ಸಮಾಜದ ಬಗ್ಗೆ ಅಭಿಮಾನ ತಮ್ಮ ಪೂರ್ವದ ಶಿವಶರಣದ ಬಗ್ಗೆ ಅಭಿಮಾನ ಹೀಗೆ ಯಾವ ತರದ ಅಭಿಮಾನವಿಲ್ಲದೆ, ತಮ್ಮ ಪಶುಪ್ರಾಯವಾದ ನಡತೆಯಲ್ಲಿ ಕಿಂಚಿತ್ತಾದರೂ ಕಡಿಮೆಮಾಡದೆ ಸ್ವೇಚ್ಛಾಚಾರಿಗಳಾಗಿ ವರ್ತಿಸುತ್ತಿರುವರು. ಸಮಾಜದ ಮುಖ್ಯ ಮುಂದಾಳುಗಳ ಉದಾಸೀನತೆಯೇ ಇವರೀ ನಿಂದ್ಯ ವರ್ತನೆಗೆ ಮೂಲಕಾರಣವಾಗಿದೆ. ಮನುಷ್ಯರು ಇಷ್ಟವಾದ ತಿನ್ನುವ ಪದಾರ್ಥಗಳನ್ನು ತಮ್ಮ ಮನೆಯಲ್ಲಿ ಸಾಕಿದ ಗಿಳಿಗೆ ಕೊಟ್ಟು ಸಲಹುತ್ತಾರೆ. ಇದೆಲ್ಲ ಯಾವ ಫಲದಾಶೆಗಾಗಿ ? ಅದು ಮಂಜುಳರವದಿಂದ ಮಧುರ ಶಬ್ದಗಳನ್ನು ನುಡಿಯಬೇಕೆಂಬದಲ್ಲವೇ ? ಶಿಷ್ಯರಮನೆಯಲ್ಲಿ ಮೃಷ್ಟಾನ್ನವನ್ನು ಭುಂಜಿಸಿ,ಅವರ ಮನೆಯಲ್ಲಿ ಕಂಡ ಉತ್ತಮ ಪದಾರ್ಥಗಳಿಗೆ ಆಶೆಮಾಡಿ ಅವನ್ನು ಎತ್ತಿಕೊಂಡು ತಮ್ಮ ಇತರ ಗರಜಿಗೆ ಬೇಕಾದ ಹಣವನ್ನು ಬೇಡಿಕೊಂಡು ನಿಷ್ಕಂಟಕವಾಗಿ ಜೀವನಯಾತ್ರೆಯನ್ನು ನಡಿಸುವ ಗುರಗಳು ಕೃತಜ್ಞತಾ ಪೂರ್ವಕವಾಗಿಯಾದರೂ ಶಿಷ್ಯನ ಅಜ್ಞಾನಾಂಧಕಾರವನ್ನು ತಮ್ಮ ಧರ್ಮೋಪದೇಶವೆಂಬ ಸುಜ್ಞಾನ ಪ್ರಭೆಯಿಂದ ನಾಶಮಾಡಲು ಹವಣಿಸಬೇಕಲ್ಲವೇ !

"ಗುರವೋಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ ।
ದುರ್ಲಭೋಽಯಂ ಗುರುರ್ದೇವಿಶಿಷ್ಯಹೃತ್ತಾಪಹಾರಕಃ ।"

ಅರ್ಥ—ಶಿಷ್ಯನ ಮನೆಯಲ್ಲಿದ್ದ ದುಡ್ಡು ಸೆಳಕೊಂಡು ಹೋಗುವಂಥ ಗುರುಗಳೇ ಬಹಳಮಂದಿ ಇರುತ್ತಾರೆ. ಸಂಸಾರಸಾಗರವನ್ನು ಮರ್ಯಾದೆಯಿಂದ ದಾಟಲಪೇಕ್ಷಿಸುವ ಶಿಷ್ಯನ ಮನಸ್ಸಿನಲ್ಲಿದ್ದ ಚಿಂತೆಯನ್ನು ಸುಬೋಧವೆಂಬ ಸುಖದ ಮಳೆಗರೆದು ಕಡಿಮೆಮಾಡುವ ಸಮರ್ಥನಾದ ಗುರುವು ಸಿಕ್ಕುವದು ದುರ್ಲಭವೆಂದು ಆ ಪರಶಿವನೇ ನುಡಿದಿರುವನು. ಅಂದ ಮೇಲೆ ತಾವು ಗುರುಗಳೆಂದು ಮೆರೆಯುವ ಜನರ ವಿಷಯವಾಗಿ ನಾವು ಬಲು ಎಚ್ಚರದಿಂದ ಇರಬೇಕು. ತಪ್ಪು ತಿಳುವಳಿಕೆಯಿಂದ ನಾವು ಈ ವರೆಗೆ ಕೊಡುತ್ತ ಬಂದ ಮಾನ ಮನ್ನಣೆಗಳನ್ನು ಅಯೋಗ್ಯ ಗುರುಗಳಿಗೆ ಕೊಡದೆ ಯೋಗ್ಯರಾದ ಸದ್ಗುರುಗಳಿಗೆ ಮಾತ್ರ ತೋರಿಸುತ್ತ ಹೋದಲ್ಲಿ ಇಂದಿಲ್ಲ ನಾಳೆ ಈ ನಿರರ್ಥಕ ಜನರ ಸಂಖ್ಯೆಯು ಕಡಿಮೆಯಾಗಿ ಜೊಳ್ಳುಕಾಳುಗಳು ಹೋಗಿ ಗಟ್ಟಿಗರು ಮಾತ್ರ ಉಳಿಯಬಹುದು. ಹೀಗೆ ಮಾಡಿದ ವಿನಾ ಸುಧಾರಣೆಯಾಗುವ ಸಂಭವವಿಲ್ಲ.



## ಗುರುಪೀಠಕ್ಕೆ ಯೋಗ್ಯರನ್ನು ಆರಿಸತಕ್ಕದ್ದು.

ಈಗ ಗುರುಪೀಠದಲ್ಲಿದ್ದವರ ಸಮಾಚಾರವನ್ನು ತಕ್ಕೊಳ್ಳಬೇಕು. ಇನ್ನು ಮುಂದೆ ಗುರುಸ್ಥಳಕ್ಕೆ ಬರುವವರಲ್ಲಿ ಪಾಂಡಿತ್ಯವನ್ನೂ ಸದ್ವಂಶವನ್ನೂ ವಿರಕ್ತಭಾವವನ್ನೂ. ಧರ್ಮಾಭಿಮಾನವನ್ನೂ. ತಾವು ಅಲಂಕರಿಸಬಹುದಾದ ಮಹತ್ವವನ್ನೂ ಅದರ ಜವಾಬದಾರಿಯನ್ನು ಸಂಪೂರ್ಣವಾಗಿ ಅರಿತಿರುವದನ್ನು ದೈವದವರು ಚನ್ನಾಗಿ ಪರಿಶೀಲಿಸಿ ಶೋಧಿಸಿ ಗುರುಚರ ಪಟ್ಟಕ್ಕೆ ಅಧಿಕಾರಿಗಳಾಗಿ ಮಾಡುತ್ತ ಹೋದರೆ, ಅಯೋಗ್ಯರ ಸಂಖ್ಯೆಯು ಬರಬರುತ್ತ ಕಡಿಮೆಯಾಗುವದು. "ಯದಹರೇವ ವಿರಜೇತ್ ? ಯಾವ ದಿವಸ ಮನಸ್ಸಿನಲ್ಲಿ ವೈರಾಗ್ಯವು ನೆಲಿಸುವದೋ ಅದೇ ದಿವಸವೇ ಸನ್ಯಾಸವನ್ನು ಅಂಗೀಕರಿಸಬೇಕು. ಎಂದು ಜಾಬಾಲೋಪನಿಷತ್ತಿನ ವಾಕ್ಯವನ್ನು ಭಾವೀಗುರುಗಳೂ ಮತ್ತು ಅಂಥವರನ್ನು ನೇಮಿಸುವ ಶಿಷ್ಯರೂ ನೆನಪಿನಲ್ಲಿಡಬೇಕು. ಗುರುಸ್ಥಾನವೆಂದರೆ ಅಟ್ಟಹಾಸದಿಂದ ಕೂತುಕೊಳ್ಳುವ ಕಟ್ಟೆಯಲ್ಲ. ಸಂಸಾರದಲ್ಲಿ ತೊಳಲಿ ಬಳಲುತ್ತಿರುವ ಜೀವರನ್ನು ಪ್ರಾಪಂಚಿಕ ಚಿಂತೆಯಿಂದ ಬಿಡಿಸಿ ಶಿವಭಕ್ತಿಯೆಂಬ ಪರಮವಸ್ತುವಿನಲ್ಲಿ ಅವರ ಚಿತ್ತವನ್ನು ನಿಲ್ಲಿಸಿ, ಪರಮಾತ್ಮದರ್ಶನವೆಂಬ ಫಲವನ್ನು ಅವರಿಗೆ ಸೇವಿಸಲು ಕೊಡುವಾತನೇ ಗುರುವರ್ಯನು. ಇದೇನೋಸುಲಭಸಾಧ್ಯವಲ್ಲ. ಪಾಯಸವಾದರೂ ಆಯಾಸವಿಲ್ಲದೆ ಸಿಗನು ಎಂಬ ನಾಣ್ಣುಡಿಯಂತೆ ಗುರುಸ್ಥಳವನ್ನು ಮರ್ಯಾದೆಯಿಂದ ನಿಸ್ತರಿಸಿಕೊಳ್ಳಲಿಕ್ಕೆ ಬಲು ಪ್ರಯಾಸದ ಉಜ್ಜುಗವನ್ನು ಕೈಕೊಳ್ಳಬೇಕಾಗುವದು. ಇದಕ್ಕೆ ಸಮರ್ಥನಿದ್ದವನೇ ಈ ಬಟ್ಟೆಯನ್ನು ಮೆಟ್ಟಬಹುದು.

ನಮ್ಮ ಪಾರ್ಥಿವ ಗುರುಗಳನ್ನು ತಮ್ಮ ಕರ್ತವ್ಯದಲ್ಲಿ ಅಂದರೆ ಭಕ್ತೋದ್ಧಾರಕಾರ್ಯದಲ್ಲ ಜಾಗೃತರಾಗಿಯೂ ದಕ್ಷರಾಗಿಯೂ ಇರಿಸುವದಕ್ಕಾಗಿ ಕಾಲಕಾಲಕ್ಕೆ ಅಮಾನುಷಶಕ್ತಿಯುಳ್ಳ ದಿವ್ಯಜ್ಞಾನಸಂಪನ್ನನಾದ ಶಿವಸಾಕ್ಷಾತ್ಕಾರಮಹಿಮಾಪೂರಿತವಾದ ಮಹಾತ್ಮರು ಅವತರಿಸುವರು. ಇವರ ಕಟಾಕ್ಷಮಾತ್ರದಿಂದ ಅಜ್ಞಾನಿಯು ಜ್ಞಾನಿಯಾಗುತ್ತಾನೆ. ದುರ್ಗುಣಿಯು ಸದ್ಗುಣಿಯಾಗುವನು. ಇವರು ಸರ್ವರಿಂದಲೂ ವಂದ್ಯರೆನಿಸುವರು. ಇವರಾದರೂ ಮಾನವದೇಹವನ್ನೆ ಅವಲಂಬಿಸಿ ತಮ್ಮ ಮಣಿಹವನ್ನು (mission) ಪ್ರಕಟಗೊಳಿಸುವರು. ಇಂಥವರ ಆಚರಣೆಯನ್ನು ಗುರುಸ್ಥಾನಾಪನ್ನರು ಮಾದರಿಯಾಗಿಟ್ಟುಕೊಂಡು ಚರಿಸಬೇಕೆಂದು ಅವ

ಶಾಲಿಕ ಪುರುಷರ ಮುಖ್ಯೋದ್ದೇಶವು. ಇವರು ತಾವು ಆಚರಿಸಿದ ಮಾರ್ಗವು
ಮುಂದಿನವರಿಗೆ ಸುಲಭಸಾಧ್ಯವಾಗಲೆಂದು ತಮ್ಮ ಅನುಭವಸಿದ್ಧವಾದ ಆಚರಣೆಯ
ಕ್ರಮವನ್ನು ವಚನರೂಪದಿಂದ ಬರೆದಿಟ್ಟಿರುವರು. ಸದ್ಗುರು ದುರ್ಭಿಕ್ಷಕಾಲದಲ್ಲಿ
ಕೂಡ ಕೆಲವು ಮಹಾತ್ಮರು ಭಕ್ತಿಹಿತಾರ್ಥಕ್ಕಾಗಿ ಅಲ್ಲಲ್ಲಿ ಕಂಗೊಳಿಸುವರು. ಅಂಥ
ವರ ಶುಶ್ರೂಷೆಯನ್ನು ನಮ್ಮ ಭಾವೀಗುರುಗಳು ಕೈಕೊಂಡು ಅವರಿಂದ ಅಮೃತತು
ಲ್ಯವಾದ ಶಿವಾನುಭವವನ್ನರಿತುಕೊಂಡು ಮರಳಿ ಅದನ್ನೇ ತಮ್ಮ ಶಿಷ್ಯಮಂಡಲಕ್ಕೆ
ಉಣಿಸಿ ತಣಿಸಬೇಕು.

ಗುರುಗಳಲ್ಲಿ ದೀಕ್ಷಾಗುರುಗಳು ಶಿಕ್ಷಾಗುರುಗಳು ಮೋಕ್ಷಗುರುಗಳು ಈ
ಪ್ರಕಾರವಾಗಿ ಗುರುಗಳಲ್ಲಿ ಭೇದವನ್ನು ಹೇಳುತ್ತಾರೆ. ವಾಸ್ತವಿಕವಾಗಿ ಈ
ಮೂವರೂ ಒಂದೇ. ಶಿಷ್ಯನಲ್ಲಿದ್ದ ಪೂರ್ವವಾಸನೆಯನ್ನೂ ಮಲತ್ರಯಗಳನ್ನೂ
ಯಾವಾತನು ತನ್ನ ಶಿವದೀಕ್ಷಾಸಾಮರ್ಥ್ಯದಿಂದ ಕಳೆದು ಅವನನ್ನು ಶಿವಜ್ಞಾನೋದ
ಯಕ್ಕೆ ಅರ್ಹನನ್ನಾಗಿಮಾಡುವನೋ ಅವನೇ ದೀಕ್ಷಾಗುರುವು. ಹೀಗೆ ಜ್ಞಾನೋನ್ಮುಖ
ನಾದ ಶಿಷ್ಯನಲ್ಲಿ ಬರತಕ್ಕ ಸಂಶಯಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟು
ಅವರ ಸರ್ವ ಸಂಶಯಗಳನ್ನು ಯಾವಾತನು ತನ್ನ ಸದ್ಬೋಧೆಯಿಂದ ಪರಿಹರಿಸು
ವನೋ ಅವನೇ ಶಿಕ್ಷಾಗುರುವು. ಈ ಪ್ರಕಾರ ಸದ್ಗುರುಗಳೇ ಮೋಕ್ಷಾಗುರುಗಳು.
ವಿರಕ್ತಜಂಗಮರು ಮೋಕ್ಷಾಗುರುಗಳು; ಉಳಿದವರು ಮೋಕ್ಷಾಗುರುಗಳಲ್ಲವೆಂಬ
ಅಭಿಪ್ರಾಯವು ತಪ್ಪು. ಯಾಕಂದರೆ ಸದ್ಗುರುಗಳಿಂದಲೇ ಸಂಶಯನಿವೃತ್ತಿ, ಸಂಶಯ
ಪರಾಭವದಿಂದ ಪರತತ್ವಗೋಚರ, ಪರತತ್ವಜ್ಞಾನದಿಂದಲೇ ಮೋಕ್ಷವೆಂದು ಹೇಳಿದೆ.
ಆದ್ದರಿಂದ ದೀಕ್ಷಾಗುರುಗಳು ಇವರೇ ಮೋಕ್ಷಾಗುರುಗಳು. ಈ ದೀಕ್ಷಾಗುರವು,
ಶಿಕ್ಷಾಗುರುವು, ಒಬ್ಬನೇ ಆಗಿರಬಹುದು. ಅಥವಾ ಭಿನ್ನವಾಗಿರಬಹುದು.

ಶಿಷ್ಯನ ಸ್ವಾಭಾವಿಕ ಮನೋವೃತ್ತಿಗಳನ್ನು ಬದಲುಮಾಡಿ ಆತನನ್ನು ಶಿವತತ್ವ
ಗೋಷ್ಠಿಯಲ್ಲಿ ತೊಡಕಿಸಬೇಕಾದರೆ, ಗುರುವು ಸ್ವತಃ ಸರ್ವ ಪ್ರಕಾರದ ವಿದ್ಯೆಯಿಂ
ದಲೂ ಶಾಂತಿದಾಂತಿ ಮೊದಲಾದ ಸದ್ಗುಣ ಸದಾಚಾರಗಳಿಂದಲೂ ಯುಕ್ತನಾಗಿರ
ಬೇಕು. ಅವನಿಗೆ ಸರ್ವ ಧರ್ಮಗಳ ಪರಿಚಯವಿರಬೇಕು. ಯಾಕಂದರೆ ಶಿಷ್ಯನು
ಅನೇಕ ರೂಪಗಳನ್ನೆತ್ತಿ ತದನುರೂಪವಾಸನೆಗಳನ್ನೂ ಸಂಶಯಗಳನ್ನೂ ಪಡೆದಿರು
ವನು. ಮತ್ತು ತನ್ನ ಸುತ್ತಮುತ್ತಲಿನ ವ್ಯವಹಾರಗಳನ್ನು ನೋಡಿ ಅವುಗಳಿಂದ
ಅನೇಕ ಸಂಶಗಳನ್ನು ಮಾಡಿಕೊಂಡಿರುವನು. ಪೂರ್ವ ಜನ್ಮಗಳ ವಾಸನಾಬಲದಿಂದ
ಆತನ ವಿಚಾರಗಳು ಬಹುಪ್ರಕಾರವಾಗಿ ತೋರುವವು ಈ ಎಲ್ಲ ಸಂಶಯಗಳನ್ನು ಸದು
ತ್ತರದಿಂದ ಪರಾಭವ ಮಾಡಬೇಕಾದರೆ ಗುರುಗಳು ವಿದ್ಯಾಸಂಪನ್ನರಾಗಿರಬೇಕು.
ಪೂರ್ವಜನ್ಮದ ವಾಸನಾಬಲದಿಂದ ಮತ್ತು ಈ ಜನ್ಮಗಳಲ್ಲಿ ಜರಗುವ ವ್ಯವಹಾರ
ಗಳ ಮೇಲಿಂದ ಒಮ್ಮೊಮ್ಮೆ ಶಿಷ್ಯರಲ್ಲಿ ಧರ್ಮಲಂಡತನದ ಪ್ರಶ್ನೆಗಳು ಉದ್ಭವಿಸು



ವವು. ಇಂತಹ ಸಂಶಯಗಳನ್ನು ಕೇಳಿದಮಾತ್ರದಿಂದಲೇ ಶಿಷ್ಯರನ್ನು ಬೈದು ನಿಂದಿಸಿ
ತಮ್ಮ ಸಂಶಯಗಳನ್ನು ತಾವೇ ನುಂಗಿಕೊಳ್ಳುವಂತೆ ಮಾಡುವವರು ಗುರುಗಳೇ ಅಲ್ಲ.
ಈ ಪ್ರಕಾರದ ವರ್ತನೆಯಿಂದ ಅವರು ತಮ್ಮ ಅಯೋಗ್ಯತೆಯನ್ನು ವ್ಯಕ್ತಪಡಿಸು
ವರು. ಈ ಧರ್ಮಲಂಡತನವನ್ನು ಕಳೆಯಲು ಸಾಮರ್ಥ್ಯವುಳ್ಳವರೇ ಶಿಕ್ಷಾಗುರು
ಗಳು. ಯಾವದೊಂದು ಗುರುತ್ವಪೀಠಕ್ಕೆ ಏರಿದ ಮಾತ್ರಕ್ಕೇನೆ ಅವರಿಗೆ ಗುರು
ಗಳೆನ್ನಲಿಕ್ಕೆ ಬರುವದಿಲ್ಲ ಯಾಕೆಂದರೆ ಗುರುಶಿಷ್ಯರ ಸಂಬಂಧವು ಬೋಧ್ಯ
ಬೋಧಕ ಸಂಬಂಧದಿಂದಲೇ ಬರುತ್ತದಲ್ಲದೆ, ಬೇರೆ ರೀತಿಯಿಂದ ಪ್ರಾಪ್ತವಾಗುವ
ದಿಲ್ಲ ವಾಚಕರೇ, ನಿಮ್ಮ ಕಣ್ಣಿಗೆ ಬೀಳುವ ಗುರುಗಳಲ್ಲಿ ಎಷ್ಟು ಜನರು ಈ
ಬೋಧಕತ್ವಶಕ್ತಿಯಿಂದ ಕೂಡಿದ್ದಾರೆ ? ಗುರುಗಳಲ್ಲಿರತಕ್ಕ ಬೋಧಕತ್ವಶಕ್ತಿಯು
ಸ್ವಲ್ಪಾದರೂ ಇಲ್ಲದಿರುವ ಗುರುಗಳ ಸಂಖ್ಯೆಯು ನಮ್ಮಲ್ಲಿಹೆಚ್ಚಾಗಹತ್ತಿದೆ,

## ಸುಧಾರಣೆಯು ಏಕ ಪಕ್ಷೀಯವಾಗಿರಬಾರದು.

ಮೊನ್ನೆ ಮೊನ್ನೆ ಶ್ರೀ ಕಾಶೀಕ್ಷೇತ್ರದಲ್ಲಿ ಗುರುವರ್ಗದವರ ಸಭೆಯೊಂದು ಜರ
ಗಿದ್ದಾಗಿ ಪತ್ರಿಗಳಿಂದ ಗೊತ್ತಾಗುತ್ತದೆ. ಈ ಸಭೆಯ ವರ್ಣನೆಯನ್ನು ನೋಡಿ
ದರೆ, ಹಲವು ಕಡೆಯಿಂದ ಹೋದ ಗುರುವರ್ಯರು ಕೇವಲವಾಗಾಡಂಬರವನ್ನೇ
ಮತ್ತು ಆತ್ಮಸ್ತುತಿಯನ್ನೇ ಮುಖ್ಯವಾಗಿಟ್ಟುಕೊಂಡಂತೆ ಕಾಣುತ್ತದೆ. ನಿರ್ಣೀತ
ವಿಷಯಗಳನ್ನು ಪರಾಮರ್ಶಿಸಿದಲ್ಲಿ ಅವಾದರೂ ವಾಗ್ವಿಜೃಂಭಣೆಯಿಂದ ತುಂಬಿ
ತುಳಕುತ್ತವೆ. ಈ ಸಭೆಯ ನಿರ್ಣಯಕ್ಕನುಸರಿಸಿ ಕಾರ್ಯತಃ ಅದರ ಉಪಯೋಗ
ವನ್ನು ಜನರಿಗೆ ತೋರಿಸಲೋಸುಗ ಉಜ್ಜನಿಯ ಸಿಂಹಾಸನದ ಸ್ಥಳದಲ್ಲಿ ಒಂದು
ಸಭೆಯು ನೆರವೇರಿಸಿದ್ದಾಗಿ ತಿಳಿಯುತ್ತದೆ. ಇದರಲ್ಲಿಯಾದರೂ ಯಾವ ಮಹತ್ವ
ಗಳು ಜರಗಲಿಲ್ಲವಾಗಿ ಹೋದವರು ಗುಣಾಗುಟ್ಟುತ್ತಾರೆ. ಯಾವದಾದರೊಂದು
ಸಭೆಯು ಕಾರ್ಯವು ಗೆಲವಿಗೆ ಮುಟ್ಟಬೇಕಾದರೆ, ಆದರ ಕಾರ್ಯನಿರ್ವಾಹಕ ಮಂಡಲ
ದವರು ಸ್ವಾರ್ಥಪರಾಯಣತೆಯಿಂದ ಅಲಿಪ್ತರಾಗಿ ಕೇವಲ ಸಮಾಜಹಿತ ಅದರ
ಉತ್ಕರ್ಷ ಮೊದಲಾದ ಗಾಂಭೀರದ್ಯೇಯವನ್ನೇ ಮುಂದಿಟ್ಟುಕೊಂಡು ವರ್ತಿಸಬೇಕು.
ಗುರುವರ್ಗದವರೇ ಮುಂದು ಬರಲಿ, ಅವರ ಮಹತ್ವವೇ ಹೆಚ್ಚಾಗಲಿ, ಉಳಿದ
ವಿರಕ್ತ ಜಂಗಮರ ಅಥವಾ ಭಕ್ತರ ಹಿತವೂ ಹೆಚ್ಚಳವೂ ಸಾಧಿಸಲಿ, ಸಾಧಿಸದಿರಲಿ
ಚಿಂತೆಯಿಲ್ಲವೆಂದರೆ ಯಾರ ಏಳ್ಗೆಯೂ ಕೈಸೇರದೆ ವ್ಯರ್ಥ ಶ್ರಮ ಮತ್ತು ದ್ರವ್ಯ ವ್ಯ
ಯವಾಗುವದು. ಸಮಾಜವನ್ನು ದೇಹಕ್ಕೂ, ಆದರೆ ಉತ್ಕರ್ಷಸಾಧಕ ಪ್ರಯತ್ನಗ
ಗನ್ನು ಪ್ರಾಣಕ್ಕೂ ಬಲ್ಲವರು ಹೋಲಿಸುತ್ತಾರೆ. ನಮ್ಮ ಶರೀರವು ಸಾಮರ್ಥ್ಯವು
ಳ್ಳದ್ದು ಆಗಬೇಕಾದರೆ ಅದರ ಅಂಗ ಪ್ರತ್ಯಂಗಕ್ಕೂ ಬಲವಾದ ಪೋಷಕ ದ್ರವ್ಯಗಳ
ಸಹಾಯವು ಆವಶ್ಯವಾಗಿಬೇಕು. ಒಂದು ಅವಯವಕ್ಕೆ ರಕ್ತಪ್ರವಾಹವು ಅಂದರೆ

ರುಧಿರಾಭಿಸರಣವು ನಿಲುಕಿ ಮತ್ತೊಂದು ಅವಯವಕ್ಕೆ ಮುಟ್ಟದಿದ್ದರೆ ಹ್ಯಾಗೆ ಅದು ವಿರೂಪ ಸ್ಥಿತಿಯನ್ನು ಹೊಂದಿ ಶರೀರದ ನಿರೋಗಿತ್ವಕ್ಕೆ ಪ್ರತಿಬಂಧಕವಾಗುವದೋ ಅದರಂತೆ ಸಮಾಜದಲ್ಲಿರತಕ್ಕ ಸರ್ವಪ್ರಕಾರದ ವ್ಯಕ್ತಿಗಳ ಸುಧಾರಣೆಯು ಪ್ರಯತ್ನಿಸಲ್ಪಡದೆ ಒಂದೊಂದು ವಿಶಿಷ್ಟ ಜನಸಮೂಹದವರ–ಇದಾದರೂ ಅನ್ಯರು ತಮ್ಮನ್ನು ಸರಿಗಟ್ಟಬಾರದೆಂಬ ದುರಭಿಮಾನದಿಂದ ಸುಧಾರಣೆಯನ್ನೇ ಕೈಕೊಂಡಿಲ್ಲ. ಸಮಾಜವು ಪ್ರಗಮನಶೀಲ ಸ್ಥಿತಿಯನ್ನೈದದು. ಉದಾಹರಣೆ:—ಯಾವನೊಬ್ಬ ವಿದ್ಯಾರ್ಥಿಯು ತನ್ನ ಶಾರೀರಿಕ ಗಟ್ಟಿತನದ ಬಗ್ಗೆ ಎಳ್ಳಷ್ಟೂ ಲಕ್ಷಗೊಡದೆ ಕೇವಲ ಮಾನಸಿಕೋನ್ನತಿಯನ್ನೇ ಸಾಧಿಸಲು ಹೆಚ್ಚು ಶ್ರಮಬಟ್ಟರೆ ಅವರ ಬುದ್ಧಿ ಮತ್ತೆಯು ವಿಕಾಸ ಹೊಂದದೆ ಕುಂಠಿತವಾಗುವದು. ಯಾಕಂದರೆ ಶಾರೀರಿಕ ದೌರ್ಬಲ್ಯದ ಪರಿಣಾಮವು ಬುದ್ಧಿ ಮತ್ತು ಮನಸ್ಸು ಇವುಗಳ ಮೇಲೆ ಆಗಿ, ಅವುಗಳ ಬೆಳವಣಿಗೆಯು ಮುಂದುವರಿಯದು. ಈ ಕಾರಣದಿಂದಲೇ ನಮ್ಮ ಸಮಾಜದ ಮುಂದಾಳುಗಳಿಗೂ ಮತ್ತು ಗುರುವರ್ಯರಿಗೂ ನಮ್ಮ ನಮ್ರಬಿನ್ನಹವೇನಂದರೆ, ಯಾವದೇ ಸುಧಾರಣೆಯನ್ನು ಕೈಕೊಂಡರೂ ಅದು ಏಕಪಕ್ಷವಾಗಬಾರದು. ಸಮಾಜದ ಸರ್ವಪಕ್ಷದವರ ಅಭ್ಯುದಯವು ಅದರಲ್ಲಿ ಅಡಕವಾಗಿರಬೇಕು. ಸುಧಾರಕರೂ ಮುಂದಾಳುಗಳೂ ಯಾರನ್ನೂ ಹೀಯಾಳಿಸಬಾರದು. ಸರ್ವರಲ್ಲಿಯೂ ಸಮದೃಷ್ಟಿಯುಳ್ಳವರಾಗಿರಬೇಕು. ಯಾರಾದರೂ ದುರಭಿಮಾನ ಇಲ್ಲವೆ ಅಜ್ಞಾನಮೂಲಕ ತಪ್ಪು ಹಾದಿಯನ್ನು ಹಿಡಿದದ್ದು ಕಂಡರೆ ಅವರಿಗೆ ಶಾಂತರೀತಿಯಿಂದ ತಿಳಿಹೇಳಿ ಶಾಸ್ತ್ರವಿಹಿತವಾದ ಮಾರ್ಗದಲ್ಲಿರಿಸಲಿಕ್ಕೆ ಯತ್ನಿಸಬೇಕು ಅನ್ಯರನ್ನು ತಮ್ಮ ಸರಿಮಾಡಿಕೊಂಡರೆ ತಮ್ಮ ವರ್ಚಸ್ಸು ಕಡಿಮೆಯಾಗುವದೆಂಬ ಹೆಮ್ಮೆಯಿಂದ ಅವರೊಡನೆ ನಿಷ್ಕಾರಣವಾಗಿ ಕಲಹವೆಬ್ಬಿಸಿ, ಅವರನ್ನು ಪ್ರತ್ಯೇಕವಾಗಿ ಗಣಿಸುವವದು ಸಮಾಜದ ಭದ್ರತೆಗೆ ವಿಚ್ಛೇದಕವಾಗಿದೆ.

(ಮುಂದುವರೆಯುವುದು.)

[೧೮೦ನೇ ಪುಟದಿಂದ ಬಂದದ್ದು]

ಸ್ಫಟಿಕದ ಸಲಾಕೆಯಲ್ಲಿ ದೀಪವಿದ್ದರೆ ಒಳಹೊರಗೆಲ್ಲ ತೊಳಗಿ ಬೆಳಗುವಂತೆ ಅಂತರಂಗದಲ್ಲಿ ಅರಿವಿನರಜ್ಯೋತಿಯು ಬಹಿರಂಗದ ಆಚಾರ ಬತ್ತಿಯಲ್ಲಿ ನೆಲೆಯಾಗಿ ಪ್ರಕಾಶ ಬೀರುವುದು; ಒಕ್ಕಲಿಗನು ಬೀಳು ಬಿದ್ದ ಹೊಲದಲ್ಲಿನ ಮುಳ್ಳುಕಂಟಿಗಳನ್ನೆಲ್ಲ ಕಡಿದು ನೇಗಿಲಿನಿಂದ ಊಳಿ, ನಟ್ಟು ಕರಿಕೆಗಳನ್ನೆಲ್ಲ ಕಳೆದು ಹದಮಾಡಿ ಗೊಬ್ಬರ ಹಾಕಿ ತಯಾರಿಸಿದ ಯೋಗ್ಯ ಭೂಮಿಯಲ್ಲಿಯೇ ಉತ್ತಮ ಬೀಜವನ್ನು ಬಿತ್ತುವಂತೆ ಶಿಷ್ಯನ ಅಂತರಂಗ ಬಹಿರಂಗದಲ್ಲಿ ಮುಸುಕಿದ ಅಜ್ಞಾನ ಮಾಯೆ, ಮೋಹ, ದುಷ್ಕ್ರಿಯೆಗಳೆಂಬ ಪ್ರಪಂಚವನ್ನು ಕಳೆದು ಸದ್‌ಭಕ್ತಿಯ ಗೊಬ್ಬರ ತುಂಬಿ ನಿಜೋಪದೇಶವನ್ನು ಬಿತ್ತಬೇಕು ಅಂದಾಗಲೇ ಶಿಷ್ಯನಿಗೆ ಪರಮಾನಂದದ ಫಲ ದೊರೆತು ಶಿವಾನಂದರಸವನ್ನುಂಡು ಶಿವಸಾಮರಸ್ಯವನ್ನು ಪಡೆಯುವನು. ಇಂಥಹ ಜ್ಞಾನಗುರುವೇ ಜಗತ್ತಿಗೆ ಪೂಜ್ಯನಾದ ಜಗದ್ಗುರುವೆನಿಸುವನು. ಅಂಥವರ ಚರಣಕ್ಕೆ ಜಗಜ್ಜನನಿ ಅಕ್ಕಮಹಾದೇವಿಯವರು ನಮೊ ಎಂದಿರುವರು.

---

## ಬಸವ ಜೋಗುಳ

ಲೇಖಕಿ : ಶ್ರೀಮತಿ ಶಾಂತಾದೇವಿ ಶಾ. ಹಳಕಟ್ಟಿ. ಧಾರವಾಡ

ಶ್ರೀ ಗುರು ಬಸವಣ್ಣನ ಶರಣೆಯರು ತೂಗಿರಿ ಜೋ ಜೋ ಪ
ಬಾಗೇವಾಡಿಯಲ್ಲಿ ಜನ್ಮವಿತ್ತವನಿಗೆ ।

ಭವ ಭಂಧನ ಬಿಡಿಸಲು ಬಂದಂಥ ಶರಣದಿನಿಗೆ ಜೋ ೧
ಮಾದರಸ ಮಾದಲಾಂಬಿಕೆಯರ ಗರ್ಭದ ।

ಮೋಹದ ಮಗುವಾಗಿ ಮೂಡಿ ಬಂದವನಿಗೆ ಜೋ ೨
ಎಂಟನೆ ವರುಷಕ್ಕೆ ತಂದೆ ತಾಯಿಯ ತೊರೆದು ।

ಕೂಡಲ ಸಂಗಮಕೆ ಓಡಿ ಬಂದವನಿಗೆ ಜೋ ೩
ಕೂಡಲ ಸಂಗಮದಿ ಗುರುಗಳ ಆಶ್ರಯದಿ ।

ಸಂಗಮನಾಥನ ಒಲುಮೆಯ ಪಡೆದವಗೆ ಜೋ ೪
ಕಲ್ಯಾಣ ಪಟ್ಟಣದಿ ಬಿಜ್ಜಳನ ಓಲಗದಿ ।

ತಾಮ್ರದ ಲಿಪಿಯನು ಓದಿದಂಥವನಿಗೆ ಜೋ ೫
ನಡೆ ನುಡಿಗಳೊಂದಾಗಿ ನಡದು ತೋರಿದವಗೆ ।

ಜೋಡು ಮಡದಿಯರೊಡನೆ ಕೂಡಿ ಬಾಳಿದವಗೆ ಜೋ ೬
ಎಲ್ಲ ಜಾತಿ ಜನರಿಗೆ ಲಿಂಗಧಾರಣ ಮಾಡಿ ।

ಜಾತಿ ಭೇದವ ಕಳೆದ ಜ್ಯೋತಿ ರೂಪನಿಗೆ ಜೋ ೭
ಹೆಣ್ಣುಮಕ್ಕಳ ಬಂಧನ ಬಿಡಸಿ ಲಿಂಗವ ಕೊಟ್ಟು ।

ಲಿಂಗ ಪೂಜೆ ಮಾಡುವ ಸ್ವಾತಂತ್ರ್ಯಕೊಟ್ಟವಗೆ ಜೋ ೮

PRINTED MATTER BOOK POST

Registd. Number 31787/76 ವಾರ್ಷಿಕ ಚಂದಾ : ೧೦

ದಯವೇ ಧರ್ಮದ ಮೂಲ ಎಂದು ಹೇಳಿದವಗೆ ।
ಪ್ರಾಣಿ ಮಾನವರಲ್ಲಿ ಪ್ರೀತಿ ಬೆಳಸಿದವಗೆ ಜೋ ೯

ಸತ್ಯ ಕಾಯಕದಿಂದ ಕೈಲಾಸವೆಂದವಗೆ ।
ಸಪ್ತಸೂತ್ರಗಳನು ಸಾರಿ ಪೇಳಿದವಗೆ ಜೋ ಜೋ ೧೦

ಇವನಾರವ ಇವನಾರವ ಎಂದೆನಿಸದಿರೆಂದು
ನಮ್ಮವ ನಿವನೆಂದು ಅಪ್ಪಿಕೊಂಡವನಿಗೆ ಜೋ ೧೧

ಅನುಭವ ಮಂಟಪದಿ ಶೂನ್ಯ ಸಿಂಹಾಸನದಿ
ಅಲ್ಲಮ ಪ್ರಭುವಿಗೆ ಪಟ್ಟಕಟ್ಟಿದವಗೆ ಜೋ ೧೨

ಮೂಢ ನಂಬಿಕೆಯನ್ನು ಬೇರುಕಿತ್ತೆಸೆದವಗೆ
ಮಾನವರ ಮನಸಿನ ಕಲ್ಮಷ ಕಳೆದವಗೆ ಜೋ ೧೩

ಭಕ್ತಿಯ ಬಂಡಾರಿ ಮುಕ್ತಿಯ ಕೈವಾರಿ
ಜ್ಞಾನದ ರೂವಾರಿ ಸರಿನಿನಗ್ಯಾರಿಲ್ಲ ಜೋ ೧೪

ಏನೂ ಅರಿಯದಂಥ ಸ್ತ್ರೀ ಪುರುಷರೆಲ್ಲರೂ
ಅನುಭಾವಿಗಳ, ಆಗಿ ವಚನ ರಚಿಸಿರ್ದರಲ್ಲಾ ಜೋ ೧೫

ಹರಳಯ್ಯ ಮಧುದರಸರ ಕೂಡಿಸಿ
ಕೂಡಲ ಸಂಗನಕೂಡಿ ಕೊಂಡವನಿಗೆ ಜೋ ೧೬

ಗುರುವೆ ನಿನ್ನ ಮಹಿಮೆ ಎಷ್ಟು ಕೊಂಡಾಡಿದರು
ಸಾಕೆನಿಸದಯ್ಯಾ ಗುರು ಬಸವಲಿಂಗಾ ಜೋ ೧೭

ನಿನ್ನ ಜೋಗುಳ ಹಾಡಿ ಕೇಳಿದವರು ಈಗ
ಮುಕುತಿಯ ಹೊಂದುವರು ಸಂದೇಹವಿಲ್ಲಾ ಜೋ ೧೮

Printed at Sharada Press, Dharwar. Edited and Published by Shri B. S. Kalyani, B. A. LL.B. for Dr. Halkatti Research Institute, 553, West Mangalwar Peth, Sholapur-2